
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಏಪ್ರಿಲ್ 13, 2011 ಪುಟ 20 ರೂ. 12/-

ನಲುಗುತ್ತಿರುವ ಲಿಬಿಯಾ ಕ್ರಾಂತಿ

ಭ್ರಷ್ಟ ಸ್ತ್ರೀ ಪೀಡಕ IPS ಮುರುಗನ್





ಬಿಜೆಪಿ ಬಕಾಸುರರ ಮತ್ತೊಂದು ಸಾಧನೆ


BBMP ದಿವಾಳಿ

ತ್ರಿ ಕಾಗೇರಿ
ಗರ ಮಠಕ್ಕೆ
ರ್ಕಾರಿ ಭೂಮಿ!



ಕೊಪ್ಪ
ಕಾಮುಕರಿಗೆ ವಿದ್ಯಾರ್ಥಿನಿ ಬಲಿ





ಮೈಸೂರು
ಸಿಪಿಸಿ ಕಾಲೇಜಿನಲ್ಲಿ ಧನದಾಹಿ ಪ್ರಿನ್ಸಿ

ಚನ್ನಪಟ್ಟಣ
ಸಿಂ.ಲಿಂ.ನಾಗರಾಜ್ ಗೆಲುವು ಖಚಿತ

ಜಗಳೂರು:
ರಾಮಚಂದ್ರನತ್ತ ಮುನಿಸು ದೇವೇಂದ್ರಪ್ಪಗೆ ಛಾನ್ಸು

ನೋ ಕಾಮೆಂಟ್ಸ್

"ಒಬಾಮಾ ಅಧಿಕಾರಕ್ಕೆ ಬಂದ 26 ತಿಂಗಳಲ್ಲಿ 6 ದೇಶಗಳ ಮೇಲೆ ಆಕ್ರಮಣ ನಡೆಸಿದ್ದಾನೆ. ಈಗ ಅಮೆರಿಕದ ಈ ಕಪ್ಪು ಅಧ್ಯಕ್ಷ ಆಫ್ರಿಕಾದ ಮೇಲೆ ದಾಳಿ ನಡೆಸುತ್ತಿದ್ದಾನೆ. ಆದರೆ ಈಗಲೂ ಎರಡು ಬಗೆಯ ಜನ ಒಬಾಮಾ ಬುಷ್‌ಗಿಂತ ಭಿನ್ನ ಎಂದು ಭಾವಿಸುತ್ತಾರೆ. ಅವರಲ್ಲಿ ಮೊದಲನೆಯ ಬಗೆಯವರು ಕಪ್ಪು ವರ್ಣೀಯ ಎನ್ನುವುದು ಎಲ್ಲವನ್ನೂ ಮಾಫ್ ಮಾಡಲು ಸಾಕು ಎನ್ನುವವರು. ಎರಡನೆಯವರು ಆತನ ತಪ್ಪಿಲ್ಲದ ವ್ಯಾಕರಣ ಶುದ್ಧ ಇಂಗ್ಲಿಷ್‌ಗೆ ಮರೆ ಹೋಗಿರುವವರು."

- ವಿಲಿಯಂ ಬ್ಲಂ, ಚಿಂತಕ, ಲೇಖಕ



"ರಾಜ್ಯದಲ್ಲಿ ಜಾತ್ಯತೀತತೆಯ ಬಗ್ಗೆ ಮಾತನಾಡುವ ಜಾತಿವಾದಿಗಳು, ಸೌಹಾರ್ದದ ಬಗ್ಗೆ ಮಾತನಾಡುವ ಕೋಮುವಾದಿಗಳು, ಬಡವರ ಬಗ್ಗೆ ಕಾಳಜಿ ತೋರುವ ಬಂಡವಾಳಶಾಹಿಗಳು, ಪ್ರಾಮಾಣಿಕತೆ ಬಗ್ಗೆ ಆಸಕ್ತಿ ತೋರುವ ಭ್ರಷ್ಟಾಚಾರಿಗಳು-ಇಂತಹ ದ್ವಿಪಾತ್ರಗಳ ಚತುರ ನಾಟಕಕಾರರು ಮಿಂಚುತ್ತಿರುವುದು ದುರದೃಷ್ಟಕರ."

- ನಿಡುಮಾಮಿಡಿ ಸ್ವಾಮೀಜಿ

"ಕಾಶ್ಮೀರದ ಬೀದಿಗಳಲ್ಲಿ ಕಲ್ಲು ತೂರಾಟ ನಡೆಸುತ್ತಾ ಹೋರಾಟ ನಡೆಸಿದ ಆ ಯುವ ಕಾಶ್ಮೀರೀ ಹೋರಾಟಗಾರರು ಕಾಶ್ಮೀರವು ಸ್ವಾತಂತ್ರ್ಯವನ್ನು ಪಡೆಯಲು ನನಗಿಂತ ಹೆಚ್ಚಿನ ಕೊಡುಗೆಯನ್ನು ನೀಡಿದ್ದಾರೆ."

-ಸೈಯದ್ ಸಲಾಹುದ್ದೀನ್, ಹಿಜ್ಬುಲ್ ಮುಜಾಹಿದ್ದೀನ್ ನಾಯಕ

"ದ್ರಾವಿಡ ಸಂಸ್ಕೃತಿ ಬಹುಜನರ ವೈವಿಧ್ಯತೆಯ ಸಂಕೇತವಾಗಿದೆ. ಆದರೆ ಆಧುನಿಕರಣ ಮತ್ತು ಏಕರೂಪ ಭಾರತೀಯತೆಯ ದಾಳಿಗೆ ಇದು ತುತ್ತಾಗುತ್ತಿದೆ. ರಾಜಕೀಯ ಕಾರಣಗಳಿಗಾಗಿ ದ್ರಾವಿಡ ಚಳವಳಿ ಕಾವು ಕಳೆದುಕೊಂಡಿದೆ. 60ರ ದಶಕದಲ್ಲಿ ಚುರುಕಾಗಿದ್ದ ದ್ರಾವಿಡ ಸಾಂಸ್ಕೃತಿಕ ಅಧ್ಯಯನಗಳು ದುರ್ಬಲವಾಗುತ್ತಿವೆ."

-ಡಾ. ಬಿ.ಎ. ವಿವೇಕ ರೈ

"ಈಗಾಗಲೇ ಜಗಜ್ಜಾಹೀರಾಗಿರುವ ಸಂಗತಿಯೆಂದರೆ ರಾಯಚೂರು ಜಿಲ್ಲೆಯ ದೇವದುರ್ಗ ರಾಜ್ಯದಲ್ಲಿಯೇ ಅತ್ಯಂತ ದುಃಸ್ಥಿತಿ ಅನುಭವಿಸುತ್ತಿರುವ ತಾಲ್ಲೂಕು. ರಾಯಚೂರು-ದೇವದುರ್ಗ ನಡುವಿನ ರಸ್ತೆ ಮತ್ತು ದೇವದುರ್ಗ ಮತ್ತು ಕೃಷ್ಣಾ ನದಿಯ ದಡದ ತಿಂತಿಣಿ ಸೇತುವೆಗಳ ನಡುವಿನ ರಾಜ್ಯ ಹೆದ್ದಾರಿ ಕೆಟ್ಟುಹೋಗಿ ದಶಕಗಳೇ ಕಳೆದಿವೆ. ಹಿಂದುಳಿದ ಪ್ರದೇಶಗಳ ಎಂಟು ವರ್ಷಗಳ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಈ ರಸ್ತೆಯ ರಿಪೇರಿಯ ಬದಲಿಗೆ ರಾಯಚೂರಿನ ವಿಮಾನ ನಿಲ್ದಾಣ ನಿರ್ಮಾಣಕ್ಕೆ 2 ಕೋಟಿ ರೂ. ಬಿಡುಗಡೆ ಮಾಡಲಾಗಿದೆ."

-ಡಾ. ಟಿ. ಆರ್. ಚಂದ್ರಶೇಖರ್

"ವಂಶಪರಂಪರೆಯ ಸಂಪತ್ತಿನ ವಾರಸುದಾರರಿಗಿಂತ ಮೊದಲ ತಲೆಮಾರಿನ ಉದ್ದಿಮೆದಾರರು ದಾನ ನೀಡುವುದರಲ್ಲಿ ಹೆಚ್ಚಿನ ಉದಾರಿಗಳಾಗಿರುತ್ತಾರೆ. ಭಾರತದಲ್ಲಿ ಒಟ್ಟಾರೆ ಸಂಪತ್ತಿನ ಲೆಕ್ಕಾಚಾರ ಹಾಕಿದರೆ ಸಿರಿವಂತರು ದಾನ ನೀಡುವುದು ತೀರಾ ಕಡಿಮೆ. ಆದರೆ ದೇಶದ ಶೇ.40ರಷ್ಟು-ಸಂಪತ್ತು ಕೇವಲ ಶೇ.5 ಜನರಷ್ಟು ಕೈಯಲ್ಲಿ ಕೇಂದ್ರೀಕರಣಗೊಂಡಿದೆ. ದಾನ ಧರ್ಮಕ್ಕೆ ಹಣ ವೆಚ್ಚ ಮಾಡುವುದು ಹೆಚ್ಚು ಪ್ರಯೋಜನಕಾರಿಯಾಗಿದ್ದರೂ ಭಾರತದಲ್ಲಿ ಇದು ಹೆಚ್ಚು ಚಾಲ್ತಿಯಲ್ಲಿ ಇಲ್ಲ" ಎಂದು ವರದಿಯಾಗಿದೆ."

-ಬೈನ್ ಅಂಡ್ ಕಂಪನಿ ವರದಿ

ನಂಬಿದ್ರೆ ನಂಬಿ ಬಿಟ್ರೆಬಿಡಿ

"ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆಯ ಮೇಲೆ ಸಂಪೂರ್ಣ ನಿಷೇಧ ಹೇರಬೇಕು. ಅಕ್ರಮ ಗಣಿಗಾರಿಕೆ ನಡೆಸಿ ಸಂಪಾದಿಸಿದ ಹಣವನ್ನು ಸರ್ಕಾರದ ಬೊಕ್ಕಸಕ್ಕೆ ವಸೂಲಿ ಮಾಡಿಕೊಳ್ಳಬೇಕು. ಆ ಹಣವನ್ನು ಬಳ್ಳಾರಿಯಲ್ಲಾದ ಪರಿಸರ ನಾಶವನ್ನು ಸರಿಪಡಿಸಲು ಬಳಸಬೇಕು. ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾದ ಎಲ್ಲಾ ರಾಜಕಾರಣಿಗಳಿಗೂ ಮತ್ತು ಅಧಿಕಾರಿಗಳಿಗೂ ಉಗ್ರ ಶಿಕ್ಷೆಯನ್ನು ವಿಧಿಸಬೇಕು."

- ಎಸ್. ಆರ್. ಹಿರೇಮಠ್, ಸಮಾಜ ಪರಿವರ್ತನಾ ಸಮುದಾಯ

"1984ರಲ್ಲಿ ಭೋಪಾಲ್ ಅನಿಲ ದುರಂತ ಸಂಭವಿಸಿದಾಗ ಯೂನಿಯನ್ ಕಾರ್ಬೈಡ್ ಸಂಸ್ಥೆಯ ಅಧ್ಯಕ್ಷ ವಾರೆನ್ ಆಂಡರ್‌ಸನ್ ಅವರು ರಾಜ್ಯ ಸರ್ಕಾರದ ವಿಮಾನದಲ್ಲಿ ಪರಾರಿಯಾದ ಬಗ್ಗೆ ಮಧ್ಯಪ್ರದೇಶ ಸರ್ಕಾರದಲ್ಲಿ ಯಾವುದೇ ಮಾಹಿತಿ ಇಲ್ಲ, ಏಕೆಂದರೆ ಪ್ರಕರಣ 26 ವರ್ಷದಷ್ಟು ಹಳೆಯದಾಗಿದೆ"

- ಆರ್‌ಟಿಐ ಅರ್ಜಿಯೊಂದಕ್ಕೆ ಸರ್ಕಾರ ಕೊಟ್ಟ ಉತ್ತರ




ಅತ್ತ ಅಮೆರಿಕಾ ಇತ್ತ ಗಡಾಫಿ- ನಡುವೆ ತತ್ತರಿಸುತ್ತಿರುವ ಲಿಬಿಯಾ ಕ್ರಾಂತಿ

ಇಡೀ ಅರಬ್ ದೇಶಗಳಲ್ಲಿ ಭುಗಿಲೆದ್ದ ಪ್ರಜಾಸತ್ತಾತ್ಮಕ ಕ್ರಾಂತಿ ಲಿಬಿಯಾದಲ್ಲಿ ಮುಗ್ಗರಿಸಲು ಶುರುವಾಗಿದೆ. ಟುನಿಸಿಯಾ ದಿಂದ ಪ್ರಾರಂಭವಾದ ಈ ಅರಬ್ ಪ್ರಜಾಸತ್ತಾತ್ಮಕ ಬಿರುಗಾಳಿ ಪ್ರತ್ಯಕ್ಷವಾಗಿ ಸ್ಥಳೀಯ ಸರ್ವಾಧಿಕಾರಿಗಳನ್ನೂ ಮತ್ತು ಪರೋಕ್ಷ ವಾಗಿ ಅವರ ವಿದೇಶಿ ಬೆಂಬಲಿಗರನ್ನೂ ಗುರಿಯಾಗಿರಿಸಿ ಕೊಂಡಿತ್ತು. ಸ್ಥಳೀಯ ಸರ್ವಾಧಿಕಾರಿ ವಿರೋಧಿ ಹೋರಾಟ ಕೇವಲ ಆಡಳಿತಾರೂಢ ನಿರಂಕುಶುವಿನ ವಿರುದ್ಧ ಮಾತ್ರ ಸೀಮಿತಗೊಂಡಿರಲಿಲ್ಲ, ಇಡೀ ಸರ್ವಾಧಿಕಾರೀ ಅಧಿಪತ್ಯ ಮತ್ತವರ ನೀತಿಗಳನ್ನೇ ಆ ಬಂಡಾಯಗಳು ಗುರಿಯಾಗಿರಿಸಿ ಕೊಂಡಿದ್ದವು. ಹೀಗಾಗಿಯೇ ಟುನಿಸಿಯಾ, ಈಜಿಪ್ಟ್‌ಗಳಲ್ಲಿ ಬಂಡಾಯದಲ್ಲಿ ಅತಿಹೆಚ್ಚು ಭಾಗವಹಿಸಿದವರು ಎಲ್ಲಾ ಶೋಷಿತ ವರ್ಗದವರು. ಅಲ್ಲಿನ ಮಧ್ಯಮ ವರ್ಗ ಕೂಡ ಅವರ ಬೆಂಬಲಕ್ಕೆ ಗಟ್ಟಿಯಾಗಿ ನಿಂತುಕೊಂಡಿತ್ತು. ಆದ್ದರಿಂದಲೇ ಸರ್ವಾಧಿಕಾರಿಗಳ ಮೂಲಕ ಆ ದೇಶಗಳನ್ನು ಸುಲಿಯುತ್ತಿದ್ದ ವಿದೇಶೀ ಸಾಮ್ರಾಜ್ಯಶಾಹಿಗಳು ಪ್ರಾರಂಭದಲ್ಲಿ ಸರ್ವಾಧಿಕಾರಿಗಳು ಜನರ ಮೇಲೆ ನಡೆಸುತ್ತಿದ್ದ ಯಾವುದೇ ದೌರ್ಜನ್ಯಗಳನ್ನು ಖಂಡಿಸದೆ ಬಂಡಾಯಗಾರರ ಮೇಲೇ ಗೂಬೆ ಕೂರಿಸಿದ್ದರು. ಬಂಡಾಯದ ದಮನವನ್ನು ಮಾಡಲು ಆ ಸರ್ವಾಧಿಕಾರಿಗಳಿಗೆ ಎಲ್ಲಾ ಬೆಂಬಲವನ್ನೂ ನೀಡಿದ್ದರು. ಬಂಡಾಯವನ್ನು ದಮನ ಮಾಡಲು ಸಾಧ್ಯವೇ ಇಲ್ಲದ ಸಂದರ್ಭದಲ್ಲಿ ಬಂಡಾಯಗಾರರ ಮತ್ತು ಸರ್ವಾಧಿಕಾರಿಯ ನಡುವೆ ಸಂಧಾನ ಕುದುರಿಸಲೂ ಮತ್ತು ಬಂಡಾಯಗಾರರ ನಡುವೆಯೇ ಬಿರುಕನ್ನು ಉಂಟು ಮಾಡಲೂ ಸಹ ಸಾಮ್ರಾಜ್ಯ ಶಾಹಿ ಶಕ್ತಿಗಳು ಪ್ರಯತ್ನಿಸಿದವು. ಅವೆಲ್ಲವೂ ವಿಫಲವಾದಾಗ ಆ ಸರ್ವಾಧಿಕಾರಿಗೆ ತಮ್ಮ ನೆಲದಲ್ಲಿ ಆಶ್ರಯ ಕಲ್ಪಿಸಿಕೊಟ್ಟು ಬದಲಾದ ಸಂದರ್ಭದಲ್ಲಿ ತಮ್ಮ ಆಸಕ್ತಿಗಳಿಗೆ ಪೂರಕವಾಗಿ ಕೆಲಸ ಮಾಡುವ ಹೊಸ ವರ್ಗದ ಹುಡುಕಾಟದಲ್ಲಿ ತೊಡಗಿದ್ದಾರೆ.

ಹೀಗೆ ಅರಬ್ ದೇಶಗಳಲ್ಲಿ ನಡೆಯುತ್ತಿರುವ ಪ್ರಜಾಸತ್ತಾತ್ಮಕ ಕ್ರಾಂತಿಯ ಸಾಫಲ್ಯ ಮತ್ತು ವೈಫಲ್ಯಗಳ ಹಿಂದೆ ಬಂಡಾಯಗಾರರ ವರ್ಗ ಹಿನ್ನೆಲೆ ಮತ್ತು ಸಾಮ್ರಾಜ್ಯಶಾಹಿಗಳೊಂದಿಗೆ ಸರ್ವಾಧಿಕಾರಿಯ ಸಂಬಂಧಗಳೆರಡೂ ಮುಖ್ಯವಾದ ಪಾತ್ರವನ್ನು ವಹಿಸುತ್ತಾ ಬಂದಿವೆ. ಟುನಿಸಿಯಾದ ಸರ್ವಾಧಿಕಾರಿ ಮತ್ತು ಈಜಿಪ್ಟ್ ಸರ್ವಾಧಿಕಾರಿ ಮುಬಾರಕ್ ಇಬ್ಬರೂ ಮೊದಲಿಂದಲೂ ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಗಳ ಸಂಪೂರ್ಣ ಊಳಿಗ ಮಾಡಿಕೊಂಡು ಬಂದಿದ್ದವರು. ಅವರ ಆಡಳಿತದಿಂದಾಗಿ ಮಧ್ಯಮವರ್ಗವೂ ಸೇರಿಕೊಂಡಂತೆ ಬೃಹತ್ ಶ್ರಮಿಕ ವರ್ಗ ಅಸಹನೀಯ ಶೋಷಣೆಗೊಳಗಾಗಿ ಬಂಡೇಳಲು ಸಿದ್ಧಗೊಂಡಿತ್ತು. ಹೀಗಾಗಿ ಅಲ್ಲಿ ಸಾಮ್ರಾಜ್ಯಶಾಹಿಗಳು ಏನೇ ಮಾಡಿದರೂ ಅವರ ಕೈಗೊಂಬೆ ಸರ್ಕಾರಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಆದರೆ ಈ ಕ್ರಾಂತಿ ಲಿಬಿಯಾವನ್ನು ಮುಟ್ಟುವ ವೇಳೆಗೆ ಸಾಮ್ರಾಜ್ಯಶಾಹಿಗಳು ಇದನ್ನು ಹೀಗೇ ಮುಂದುವರೆಯಲು ಬಿಟ್ಟರೆ ಇಡೀ ಅರಬ್ ದೇಶಗಳ ಮೇಲೆ ಮತ್ತು ಅಲ್ಲಿನ ಸಂಪನ್ಮೂಲಗಳ ಮೇಲೆ ತಮ್ಮ ನಿಯಂತ್ರಣ ತಪ್ಪಿಹೋಗುತ್ತದೆ ಎಂಬುದನ್ನು ಅರ್ಥಮಾಡಿಕೊಂಡಿದ್ದರು. ಹೀಗಾಗಿ ಲಿಬಿಯಾದಲ್ಲೂ ಸಾಮಾನ್ಯ ಜನತೆ ಸರ್ವಾಧಿಕಾರಿ ಗಡಾಫಿಯ ವಿರುದ್ಧ ಪ್ರಾರಂಭಿಸಿದ ಚಳವಳಿಯನ್ನು ಒಳಗಿಂದಲೂ ಮತ್ತು ಹೊರಗಿನಿಂದಲೂ ಮುರಿಯುವುದಕ್ಕೆ ಎಲ್ಲಾ ಸನ್ನಾಹಗಳನ್ನು ಮಾಡಲಾರಂಭಿಸಿದರು.

ಹಾಗೆ ನೋಡಿದರೆ ಲಿಬಿಯಾದ ಸರ್ವಾಧಿಕಾರಿ ಗಡಾಫಿ, ಮುಬಾರಕ್ ಹಾಗೂ ಇನ್ನಿತರರ ನಡುವೆ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತ, ಮಾನವ ಹಕ್ಕು ಉಲ್ಲಂಘನೆ ಇತ್ಯಾದಿಗಳ ವಿಷಯಗಳಲ್ಲಿ ಹೆಚ್ಚು ವ್ಯತ್ಯಾಸವೇನೂ ಇರಲಿಲ್ಲ. ಆದರೆ ಟುನಿಸಿಯಾ ಮತ್ತು ಈಜಿಪ್ಟ್‌ನಂತೆ ಗಡಾಫಿ ಇಡೀ ಮಧ್ಯಮ ವರ್ಗವನ್ನು ಎದುರುಹಾಕಿಕೊಂಡಿರಲಿಲ್ಲ. ಮುಬಾರಕ್‌ನಂತೆ ಅಮೆರಿಕ ಮತ್ತು ಯೂರೋಪ್‌ಗಳು ಸಂಪೂರ್ಣವಾಗಿ ನಂಬುಗೆ ಇಡಬಲ್ಲ ನಿಷ್ಠಾವಂತನೂ ಆಗಿರಲಿಲ್ಲ, ಗಡಾಫಿಯ ಆಡಳಿತ ಸ್ವಲ್ಪ ಹೆಚ್ಚೂ ಕಡಿಮೆ ಇರಾಕ್‌ನ ಸದ್ದಾಂ ಆಡಳಿತವನ್ನು ಹೋಲುತ್ತದೆ. ಪೂರ್ವ ಲಿಬಿಯಾದ ಬೆಂಗಾರಿಝಿ ಪ್ರಾಂತ್ಯದ ಇದ್ರಿಸ್ ನೇತೃತ್ವದ ಇಸ್ಲಾಮಿಕ್ ಪಾಳೆಗಾರರ ಆಳ್ವಿಕೆಯನ್ನು ಕೊನೆಗೊಳಿಸುವ ಮೂಲಕ ಅಧಿಕಾರ ಪಡೆದುಕೊಂಡ ಗಡಾಫಿ ತನ್ನ ದೇಶದಲ್ಲಿ ಸೆಕ್ಯುಲಾರ್ ಆಡಳಿತವನ್ನೇ ಜಾರಿಗೆ ತಂದಿದ್ದ. ಅಪಾರ ತೈಲ ಸಂಪತ್ತನ್ನು ಹೊಂದಿರುವ ಲಿಬಿಯಾ ತನ್ನ 60 ಲಕ್ಷ ಪ್ರಜೆಗಳನ್ನು ಸುಖೀಗಳನ್ನಾಗಿ ಇಟ್ಟುಕೊಳ್ಳಬಲ್ಲಷ್ಟು ಸಂಪದ್ಭರಿತ ವಾಗಿದೆ. ಆದರೆ ಸೆಕ್ಯುಲಾರ್ ಆಡಳಿತ ತಂದು ವಿದೇಶಿ ಸಾಮ್ರಾಜ್ಯಶಾಹಿಗಳೊಡನೆ ತೈಲ ಮಾರುಕಟ್ಟೆಯನ್ನೂ ಮತ್ತು ಅವರಿಗೆ ತೈಲ ಸಂಪನ್ಮೂಲವನ್ನು ಬಿಟ್ಟುಕೊಡುವ ಮೂಲಕ ಗಡಾಫಿ ಅಧಿಪತ್ಯದಲ್ಲಿ ಒಂದು ವರ್ಗ ಸಾಕಷ್ಟು ಶ್ರೀಮಂತವಾಯಿತು. ಆದರ ಲಾಭ ಇಡೀ ಜನತೆಗೆ ಸಿಗಲಿಲ್ಲ. ಆದರೂ ಕೆಲವು ಸಾರ್ವಜನಿಕ ಸಂಕ್ಷೇಮ ಕಾರ್ಯ ಕ್ರಮಗಳನ್ನು, ಉದ್ಯೋಗ, ಶಿಕ್ಷಣ, ಆರೋಗ್ಯ ಸಂಬಂಧೀ ಯೋಜನೆಗಳನ್ನು ಕೈಗೊಂಡಿದ್ದು ಗಡಾಫಿಗೆ ಒಂದು ಬೆಂಬಲದ ನೆಲೆಯನ್ನು ಒದಗಿಸಿಕೊಟ್ಟಿತ್ತು ಏಕೆಂದರೆ ಗಡಾಫಿಗಿಂತ ಮುಂಚೆ ಅಧಿಕಾರದಲ್ಲಿದ್ದ ಇದ್ರಿಸ್ ಆಡಳಿತ ಅಷ್ಟನ್ನೂ ಮಾಡಿರಲಿಲ್ಲ.



ಶಿವಸುಂದರ್


ಚಾರ್ವಾಕ

ಅರಬ್‌ನ ಇತರ ದೇಶಗಳು ಬಹಿರಂಗವಾಗಿ ಅಮೆರಿಕ ಪರ ನಿಲುವನ್ನು ತೆಗೆದುಕೊಳ್ಳುತ್ತಿದ್ದರೆ ಗಡಾಫಿ ಮಾತ್ರ ಅಮೆರಿಕ ಮತ್ತು ಯೂರೋಪ್‌ಗಳ ರಾಜಕೀಯ ನೀತಿಯ ವಿರುದ್ಧವಾದ ನಿಲುವನ್ನು ತೆಗೆದುಕೊಳ್ಳಲು ಪ್ರಾರಂಭಿಸಿದ್ದ. ಹೀಗಾಗಿಯೇ 1998ರಲ್ಲಿ ಪಾನ್ ಆಮ್ ವಿಮಾನವನ್ನು ನೆಲಕ್ಕುರುಳಿಸುವಲ್ಲಿ ಗಡಾಫಿಯ ಹಸ್ತವಿದೆ ಎಂದು ಇಲ್ಲಸಲ್ಲದ ಸುಳ್ಳನ್ನು ಆರೋಪಿಸಿ ಗಡಾಫಿಯನ್ನು ಅಮೆರಿಕ ಅಂತರ ರಾಷ್ಟ್ರೀಯ ಭಯೋತ್ಪಾದಕ ಪಟ್ಟಿಯಲ್ಲಿ ಸೇರಿಸಿತು. ಅಷ್ಟು ಮಾತ್ರವಲ್ಲ ಇರಾಕಿನ ಮೇಲೆ ದಾಳಿ ನಡೆಸುವ ಬಹಳಷ್ಟು ಮುಂಚೆ ಗಡಾಫಿಯ ಅರಮನೆಯ ಮೇಲೂ ವೈಮಾನಿಕ ದಾಳಿಯನ್ನು ನಡೆಸಿತ್ತು.

1990ರಲ್ಲಿ ಇರಾಕ್ ಮತ್ತು ಅಫ್ಘಾನಿಸ್ತಾನ ಮೇಲೆ ಅಮೆರಿಕ ನೇರ ಸೈನಿಕ ಕಾರ್ಯಾಚರಣೆ ನಡೆಸಲು ಪ್ರಾರಂಭಿಸಿದಾಗ ಲಿಬಿಯಾವನ್ನೂ ತನ್ನ ದಾಳಿಗೆ ಗುರಿಯಾಗಿರಿಸಿ ಕೊಂಡಿತ್ತು. ಆಗ ಗಡಾಫಿ ತನ್ನೆಲ್ಲಾ ಅಮೆರಿಕ ವಿರೋಧಿ ನಿಲುವನ್ನು ಕೈಬಿಟ್ಟು ಅಮೆರಿಕ ಮತ್ತು ಯೂರೋಪ್ ನೇತೃತ್ವದ ಬಹುರಾಷ್ಟ್ರೀಯ ಕಂಪನಿಗಳಿಗೆ ತನ್ನ ದೇಶದ ತೈಲ ಸಂಪನ್ಮೂಲವನ್ನು ಬಿಟ್ಟುಕೊಟ್ಟ. ಹೀಗಾಗಿಯೇ ಇಂದು ಲಿಬಿಯಾದಲ್ಲಿ ಬೇರೆ ಯಾವುದೇ ದೇಶಗಳಲ್ಲಿ ಇರುವುದಕ್ಕಿಂತ ಹೆಚ್ಚು ಬಹುರಾಷ್ಟ್ರೀಯ ತೈಲ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಕಳೆದ ಐದು ವರ್ಷಗಳಲ್ಲಿ ಬ್ರಿಟಿಷ್ ಪೆಟ್ರೋಲಿಯಂ, ಅಮೆರಿಕದ ಎಕ್ಸಾನ್, ಜಪಾನಿನ ಮಿತ್ಸುಬುಷಿ ಮತ್ತು ನಿಪ್ಪಾನ್, ರಾಯಲ್ ಡಚ್ ಶೆಲ್ ಇನ್ನಿತ್ಯಾದಿ ಪೆಟ್ರೋಲಿಯಂ ಕಂಪನಿಗಳು ಕುವೈತ್ ದೇಶಕ್ಕಿಂತಲೂ ದೊಡ್ಡದಾದ ತೈಲ ಕ್ಷೇತ್ರಗಳನ್ನು ಲಿಬಿಯಾದಲ್ಲಿ ಗುತ್ತಿಗೆಗೆ ಪಡೆದುಕೊಂಡಿವೆ. ಈ ಕಂಪನಿಗಳಿಗೆ ಲಿಬಿಯಾದಲ್ಲಿ ಗುತ್ತಿಗೆ ಸಿಗುವುದು ಖಾತರಿಯಾದೊಡನೆ ಅಮೆರಿಕ ಲಿಬಿಯಾ ಮತ್ತು ಗಡಾಫಿಯನ್ನು ಅಂತರರಾಷ್ಟ್ರೀಯ ಟೆರರಿಸ್ಟ್ ಪಟ್ಟಿಯಿಂದ ತೆಗೆದುಹಾಕಿತು.

ಆದರೆ ಗಡಾಫಿಯ ಬಗ್ಗೆ ಹೆಚ್ಚಿನ ವಿಶ್ವಾಸವನ್ನೇನೂ ಅವು ಇಟ್ಟುಕೊಂಡಿರಲಿಲ್ಲ. ಅಮೆರಿಕ ಮತ್ತು ಯೂರೋಪ್ ದೈತ್ಯ ತೈಲ ಕಂಪನಿಗಳಿಗೆ ಲಿಬಿಯಾದಲ್ಲಿ ಶಾಶ್ವತವಾಗಿ ತಮ್ಮ ಪರವಾದ ನಿಲುವು ತೆಗೆದುಕೊಳ್ಳಬಹುದಾದ ಗುಲಾಮ ಅಧಿಕಾರದಲ್ಲಿರುವುದು ಅತ್ಯಗತ್ಯವಾಗಿತ್ತು. ಕಳೆದ ಎರಡು ಮೂರು ವರ್ಷಗಳಲ್ಲಿ ಗಡಾಫಿ ಕಟ್ಟಾ ಅಮೆರಿಕನ್ ವಿರೋಧಿಗಳಾದ ಕ್ಯೂಬಾದ ಕ್ಯಾಸ್ಟ್ರೋ, ವೆನಿಜುಯೇಲಾದ ಶಾವೇಜ್, ಇರಾನಿನ ಅಹ್ಮದಿನಿಜಾದ್ ಜೊತೆ ಹೆಚ್ಚು ಹೊಕ್ಕು ಬಳಕೆ ಮಾಡಿಕೊಂಡು ಅಮೆರಿಕದಿಂದ ಹೊರತಾದ ಸ್ನೇಹಕೂಟವನ್ನು ರಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದದ್ದು ಅಮೆರಿಕದ ಮತ್ತು ಯೂರೋಪಿನ ಕಣ್ಣು ಕೆಂಪಾಗಿಸಿತ್ತು. ಹೀಗಾಗಿ ಹೇಗಾದರೂ ಮಾಡಿ ಗಡಾಫಿಯನ್ನು ಪದಚ್ಯುತಗೊಳಿಸಲು ಅಮೆರಿಕದಲ್ಲಿ ಸಾಕಷ್ಟು ಚರ್ಚೆಗಳು ನಡೆಯುತ್ತಿದ್ದದ್ದನ್ನು ವಿಕಿಲೀಕ್ಸ್ ಬಹಿರಂಗಗೊಳಿಸಿದೆ.

ಆದರೆ ಅರಬ್ ದೇಶಗಳಲ್ಲಿ ಪ್ರಾರಂಭವಾದ ಪ್ರಜಾಸತ್ತಾತ್ಮಕ ಬಂಡಾಯಗಳು ಗಡಾಫಿಯನ್ನು ಉರುಳಿಸಲು ಅಮೆರಿಕಕ್ಕೆ ಸುವರ್ಣಾವಕಾಶವನ್ನೇ ಒದಗಿಸಿಕೊಟ್ಟಿತು. ಅಲ್ಲದೆ ಇಡೀ ಅರಬ್‌ನಲ್ಲಿ ಪ್ರಾರಂಭವಾಗಿದ್ದ ಅಮೆರಿಕ ವಿರೋಧಿ ಕ್ರಾಂತಿಯನ್ನು ಎಲ್ಲಾದರೂ ಒಂದೆಡೆ ತುರ್ತಾಗಿ ನಿಲ್ಲಿಸುವ ಅಗತ್ಯವೂ ಅಮೆರಿಕಕ್ಕಿತ್ತು. ಹೀಗಾಗಿ ಮಾರ್ಚ್ ಮೊದಲ ವಾರದಲ್ಲಿ ಗಡಾಫಿಯಿಂದ ನೊಂದ ಜನತೆಯೇ ಪ್ರಾರಂಭಿಸಿದ ಸರ್ವಾಧಿಕಾರಿ ವಿರೋಧೀ ಬಂಡಾಯವನ್ನು ಬಹಳ ಬೇಗನೇ ಅಮೆರಿಕ ಬಳಸಿಕೊಳ್ಳಲು ಮುಂದಾಯಿತು.




ಇಂದು ಬಂಡಾಯ ಕೇಂದ್ರೀಕೃತಗೊಂಡಿರುವ ಪೂರ್ವ ಲಿಬಿಯಾದ ಬೆಂಗಾರಿಝಿ ಪ್ರಾಂತ್ಯ ಅಮೆರಿಕ ಗುಲಾಮೀ ಇಸ್ಲಾಮಿಕ್ ಪಾಳೆಗಾರರ ಕೇಂದ್ರ. ಈಗ ಅಮೆರಿಕ ತನ್ನೆಲ್ಲಾ ಬೆಂಬಲವನ್ನು ಈ ಗುಂಪಿಗೆ ಧಾರೆ ಎರೆಯುತ್ತಿದೆ. ಗಡಾಫಿ ಮಂತ್ರಿ ಮಂಡಲದಲ್ಲಿ ಮತ್ತು ಆಡಳಿತದಲ್ಲಿದ್ದ ಹಲವು ಅವಕಾಶವಾದಿಗಳನ್ನು ಅಮೆರಿಕ ಈಗ ಈ ಬಂಡಾಯದ ನೇತಾರರನ್ನಾಗಿ ಪ್ರತಿಷ್ಠಾಪಿಸುತ್ತಿದೆ. ಈ "ಬಂಡಾಯಗಾರರು" ಗಡಾಫಿಯ ಗೂಢಾಚಾರರಾಗಿದ್ದವರು.

ಈಗ ವಿಶ್ವಸಂಸ್ಥೆಯು ತನ್ನ ನಿರ್ಣಯ ಸಂಖ್ಯೆ 1973ರ ಮೂಲಕ ಗಡಾಫಿಯನ್ನು ಸೈನಿಕ ಆಕ್ರಮಣದ ಮೂಲಕ ಇಳಿಸಲು ಅಮೆರಿಕ ನಡೆಸುತ್ತಿರುವ ಯುದ್ಧಕೋರ ಸನ್ನಾಹಗಳಿಗೆ ಶಾಸನಬದ್ಧ ಮಾನ್ಯತೆಯನ್ನು ನೀಡಿದೆ. ಈಗಾಗಲೇ ಈ "ಶಾಂತಿ" ಪಡೆಗಳು ಸಾವಿರಾರು ಅಮಾಯಕ ನಾಗರಿಕರನ್ನು ಕೊಂದು ಹಾಕಿರುವುದಲ್ಲದೆ ಗಡಾಫಿ ಹಾಗೂ ಅಮೆರಿಕ ಇಬ್ಬರ ವಿರುದ್ಧವೂ ಹೋರಾಡುತ್ತಾ ನಿಜವಾದ ಪ್ರಜಾತಂತ್ರಕ್ಕಾಗಿ ನಡೆಯುತ್ತಿದ್ದ ಹೋರಾಟವನ್ನು ಮುರಿದುಬಿಟ್ಟಿದೆ.

ಇಂದು ಲಿಬಿಯಾದಲ್ಲಿ ಯಾವ ಬಂಡಾಯವೂ ಇಲ್ಲ. ಈಗ ಅದು ಸರ್ವಾಧಿಕಾರಿಯೊಬ್ಬ ಸಾಮ್ರಾಜ್ಯಶಾಹಿಯ ವಿರುದ್ಧ ನಡೆಸುತ್ತಿರುವ ಹೋರಾಟವಷ್ಟೇ ಆಗಿದೆ. ಈ ಸಮರದಲ್ಲಿ ಜನ ದಮನ ಅಥವಾ ಆಕ್ರಮಣವನ್ನಷ್ಟೇ ಆಯ್ಕೆ ಮಾಡಿಕೊಳ್ಳುವಂತಾಗಿದೆ. ಇವೆರಡಲ್ಲಿ ಯಾವೊಂದೂ ಲಿಬಿಯಾ ಜನರಿಗೆ ವಿಮೋಚನೆಯನ್ನಂತೂ ತರುವುದಿಲ್ಲ. ಅದರಲ್ಲೂ "ವಿಮೋಚನೆ" ಹೆಸರಿನ ಅಮೆರಿಕನ್ ಆಕ್ರಮಣದ ವಿರುದ್ಧ ಲಿಬಿಯಾ ಜನತೆ ಸಂಗ್ರಾಮವನ್ನು ಕಟ್ಟಬೇಕಿದೆ.

ರೇವತಿ ಎಂಬ ತಂಗಿಯ ಆತ್ಮಕಥನ





• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

...ರೀವಳ ಹೆಸರು ರೇವತಿ. ಬೆಳ್ಳಗೆ, ಸುಂದರವಾಗಿರುವ ...ಯನ್ನು ನಾನು ಐದಾರು ವರ್ಷಗಳ ಹಿಂದೆ ಮೊದಲ ...ಗೆ ಭೇಟಿ ಆದಾಗ ಆಕೆ ತೆಳು ಹಳದಿ ಬಣ್ಣದ, ...ು ಅಂಚಿನ ಕಾಟನ್ ಸೀರೆಯನ್ನು ಅಚ್ಚುಕಟ್ಟಾಗಿ ...ದ್ದಳು. ತಲೆ ಕೂದಲನ್ನು ನೀಟಾಗಿ ಬಾಚಿ ತುರುಬು ...ಂಡಿದ್ದಳು. ಕುಂಕುಮ, ಓಲೆ, ಸರ, ಬಳೆ ಎಲ್ಲವನ್ನೂ ...ದ್ದ ಆಕೆ ಮಧ್ಯಮ ವರ್ಗದ ಸಭ್ಯ ಗೃಹಿಣಿಯಂತೆ ...ುತ್ತಿದ್ದಳು.

...ೇವತಿ ಕೆಲಸ ಮಾಡುತ್ತಿದ್ದ ಆಫೀಸಿನಲ್ಲಿ ತನ್ನ ಸಹೋ...ಗಿಯೊಬ್ಬನನ್ನು ಪ್ರೀತಿಸಿ ಮದುವೆಯಾಗಿದ್ದಳು. ಆಕೆಯ ...ಸ ಪರಿಚಯ ಆದಕ್ಕಿಂತ ಹಲವು ವರ್ಷಗಳ ಹಿಂದೆಯೇ ...ಗಿತ್ತು. ಆದರೆ ಅದ್ಯಾವುದೋ ಕಾರಣಕ್ಕೆ ಗಂಡ ... ಹೆಂಡತಿ ನಡುವೆ ಭಿನ್ನಾಭಿಪ್ರಾಯಗಳು ಉದ್ಭವಿಸಿ ...ಯನ್ನು ತೊರೆದು ಆತ ಬೇರೆ ಹೋಗಲು ...ರಿಸಿದ್ದ.

...ಆಕೆಯ ಗಂಡನ ಪರಿಚಯ ನನಗೆ ಇದ್ದುದ್ದರಿಂದ ...ಾದರೂ ಮಾಡಿ ನನ್ನನ್ನು ಬಿಟ್ಟುಹೋಗದಂತೆ ...ನನ್ನು ಒಪ್ಪಿಸಿ" ಎಂದು ರೇವತಿ ನನ್ನನ್ನು ...ಂಡಳು. ಆದರೆ ಬೇರೆಯವರ ದಾಂಪತ್ಯ ಸಮಸ್ಯೆಗಳಲ್ಲಿ ...ಹಾಕುವುದು ನನಗಿಷ್ಟವಿಲ್ಲ, ಮಾತ್ರವಲ್ಲ ಆತ ಆಗಲೇ ...ಪ್ಸ ಮಾಡಿದ್ದರೆ ಆತನನ್ನು ಬಲವಂತವಾಗಿ ರೇವತಿ ... ಜೊತೆಗೆ ಇಟ್ಟುಕೊಳ್ಳುವುದು ಸಮಸ್ಯೆಯನ್ನು ...ಹರಿಸುವುದಿಲ್ಲ ಎಂಬುದೂ ನನಗೆ ಗೊತ್ತಿತ್ತು. "ನಾನು ... ಹೇಗೆ ಸಹಾಯ ಮಾಡಲಿ ರೇವತಿ. ಅದು ಅವನಿಗೆ ... ನಿನಗೆ ಬಿಟ್ಟಿರೋದು" ಎಂದು ನನ್ನ ಅಸಹಾಯಕತೆ ...ನ್ನು ವ್ಯಕ್ತಪಡಿಸಿದ್ದೆ.


...ಅಂದಹಾಗೆ ಇವರಿಬ್ಬರದ್ದು 'ಜೋಡಿ' ಬದುಕಾಗಿದ್ದರೂ ...ಬ್ಬರು 'ಸಾಮಾನ್ಯ' ದಂಪತಿಗಳಾಗಿರಲಿಲ್ಲ. ಯಾಕೆಂದರೆ ... ಓರ್ವ ಹಿಜ್ರಾ. ಆತ ದ್ವಿಲಿಂಗಿ. ಅದೇನೇ ಇರಲಿ, ...ಗೆ ಅವರಿಬ್ಬರು ಬೇರೆಬೇರೆ ಆದರು. ಆದರೆ ಇವತ್ತಿಗೂ ...ೂ ನನ್ನ ಸ್ನೇಹಿತರಾಗಿಯೇ ಉಳಿದಿದ್ದಾರೆ.

...ಕೋದ ವರ್ಷ ರೇವತಿ ಬರೆದ ಆತ್ಮಕತೆಯನ್ನು ...ನ್ ಸಂಸ್ಥೆ ಇಂಗ್ಲಿಷ್‌ನಲ್ಲಿ ಪ್ರಕಟಿಸಿತು. ಅದನ್ನು ಕನ್ನಡದಲ್ಲಿ ...ಸುವ ಆಶೆ ನನ್ನದಾಗಿತ್ತು. ಆದರೆ ಅಷ್ಟುಹೊತ್ತಿಗಾಗಲೇ ... ಸಂಸ್ಥೆಯವರು ಅದನ್ನು ಪ್ರಕಟಿಸುವ ಆಶೆ ...ದಿಸಿದ್ದರಿಂದ ರೇವತಿ ಅವರಿಗೆ ತನ್ನ ಒಪ್ಪಿಗೆಯನ್ನು ...ಸಿದ್ದಳು. "ಅಕ್ಕಾ ನೀವು ಮೊದಲೇ ನನಗ್ಯಾಕೆ ಹೇಳಲಿಲ್ಲ, ...ಗಲೇ ಬೇರೆಯವರಿಗೆ ಹ್ಞೂ ಅಂದಿದ್ದೇನೆ. ಈಗೇನು ...ಲಿ" ಎಂದು ರೇವತಿ ಅವತ್ತು ಬೇಸರಪಟ್ಟುಕೊಂಡಿ... ಆಗ ನಾನು "ಪರವಾಗಿಲ್ಲ ಬಿಡು, ನಿನ್ನ ಆತ್ಮಕತೆ ...ಷ್ಟು ಭಾಷೆಗಳಲ್ಲಿ ಪ್ರಕಟಗೊಂಡು ಹಿಜ್ರಾಗಳ ಬದುಕಿನ ಕಷ್ಟ ಆದಷ್ಟು ಜನರಿಗೆ ತಿಳಿಯುವಂತಾದರೆ ಸಾಕು" ಎಂದು ಹೇಳಿದ್ದೆ.

ಆದರೆ ಅದ್ಯಾಕೋ ಆ ಸಂಸ್ಥೆಯವರಿಗೆ ರೇವತಿಯ ಆತ್ಮಕಥನವನ್ನು ಪ್ರಕಟಿಸಲಾಗಲಿಲ್ಲ. ಈಗ ತಮಿಳುನಾಡಿನಲ್ಲಿ ವಾಸಿಸುತ್ತಿರುವ ರೇವತಿ ಒಂದು ದಿನ ನನಗೆ ಫೋನ್ ಮಾಡಿ "ಅಕ್ಕಾ, ನನ್ನ ಆತ್ಮಕತೆಯನ್ನು ನೀವೇ ಪ್ರಕಟಿಸುತ್ತೀರಾ?" ಎಂದು ಕೇಳಿದಳು. ನಾನು ಸಂತೋಷದಿಂದ ಒಪ್ಪಿಕೊಂಡೆ. ಅದಾದ ಎರಡು ವಾರಗಳ ನಂತರ ಆಕೆಗೆ ತುಂಬಾ ಆಪ್ತವಾಗಿರುವ ಕವಯಿತ್ರಿ ದು. ಸರಸ್ವತಿಯೊಂದಿಗೆ ರೇವತಿ ತನ್ನ ಆಫೀಸಿಗೆ ಬಂದಳು. ಆಕೆಯ ಆತ್ಮಕಥನವನ್ನು ಸರಸ್ವತಿಯೇ ಕನ್ನಡಕ್ಕೆ ಅನುವಾದ ಮಾಡಬೇಕೆಂದು ಎಲ್ಲರೂ ನಿರ್ಧರಿಸಿದೆವು. ಡೆಡ್‌ಲೈನನ್ನೂ ನಿಗದಿಮಾಡಿದೆವು. ಅನುವಾದವನ್ನು ತುಂಬಾ ಚೆನ್ನಾಗಿ ಮಾಡಿ ಮುಗಿಸಿದ ಸರಸ್ವತಿ ಅದನ್ನು ಒಮ್ಮೆ ರೇವತಿಗೆ ಸಂಪೂರ್ಣವಾಗಿ ಓದಿ ಹೇಳಿದ ನಂತರ ಮೊನ್ನೆ ನನಗೆ ಕಳುಹಿಸಿಕೊಟ್ಟರು.

ಈಗಾಗಲೇ ಅದರ ಮುಕ್ಕಾಲು ಭಾಗವನ್ನು ಓದಿ ಮುಗಿಸಿದ್ದೇನೆ. ಹಾಗೆ ಓದುವಾಗ ಅದೆಷ್ಟೊ ಬಾರಿ ಕಣ್ಣೀರಿಟ್ಟಿದ್ದೇನೆ, ಬೇಸರ ಪಟ್ಟಿದ್ದೇನೆ, ನಕ್ಕಿದ್ದೇನೆ, ನಿಟ್ಟುಸಿರುಬಿಟ್ಟಿದ್ದೇನೆ. ನಿಜವಾಗಲೂ ರೇವತಿಯ ಕಷ್ಟಕರ ಬದುಕು ಮತ್ತು ಅದನ್ನು ಆಕೆ ವಿವರಿಸಿರುವ ರೀತಿ ಅದ್ಭುತವಾಗಿದೆ. ಮನಮುಟ್ಟುವಂತಿದೆ. ಇದನ್ನು ಓದಿದ ಪ್ರತಿಯೊಬ್ಬರೂ ಹಿಜ್ರಾಗಳ ಬದುಕಿನ ಬಗ್ಗೆ ಮರುಕಪಡುವುದು ಖಂಡಿತ.

ತಮಿಳುನಾಡಿನ ಸೇಲಂ ಜಿಲ್ಲೆಯ ಪುಟ್ಟ ಹಳ್ಳಿಯ ಸಾಮಾನ್ಯ ಕುಟುಂಬದಲ್ಲಿ ದೊರೈಸ್ವಾಮಿಯಾಗಿ ಜನಿಸಿದ ರೇವತಿಯ ಜೀವನ ದೃಷ್ಟಿ ಅಮೋಘವಾದದ್ದು. ತನ್ನ ಎಲ್ಲ ನೋವುಗಳ



ನಡುವೆಯೂ ತನ್ನತನವನ್ನು ಕಾಪಾಡಿಕೊಳ್ಳಬೇಕೆಂಬ ಛಲ, ಕಷ್ಟಗಳ ನಡುವೆಯೂ ಸ್ವಾಭಿಮಾನದಿಂದ ಬದುಕಬೇಕೆಂಬ ಆಶೆ, ತಂದೆ ತಾಯಿ ಅಣ್ಣಂದಿರು ತನ್ನನ್ನು ನಿಂದಿಸಿದರೂ ಅವರೆಲ್ಲ ತನ್ನ ಸಂಸಾರದವರೇ ಅಲ್ಲವೇ ಎಂದು ಅವರ ಬಗ್ಗೆ ಪ್ರೀತಿಯನ್ನು ಉಳಿಸಿಕೊಳ್ಳುವ ಹೃದಯ, ಬಡತನದ ಬೇಗೆಯಲ್ಲೂ ಚಿಕ್ಕಪುಟ್ಟದರಲ್ಲಿ ಸಂತೋಷವನ್ನು ಕಾಣುವ ಉದಾರತೆ...

ಬದುಕೆಂಬುದೇ ಹೋರಾಟ ಎನ್ನುತ್ತಾರೆ. ಆದರೆ ರೇವತಿಯ ಬದುಕು ಪ್ರತಿಕ್ಷಣ ನಡೆದ ಸಮರ ಎಂದೇ ಹೇಳಬಹುದು.

ಇನ್ನು ಪುಟ್ಟ ಹುಡುಗಿಯಾಗಿದ್ದಾಗಲೇ ತಾನೋರ್ವ ಮಹಿಳೆಯಾಗಿದ್ದು ಪುರುಷನ ದೇಹದಲ್ಲಿ ಜನಿಸಿರುವ ನತದೃಷ್ಟೆ ಎಂಬುದು ರೇವತಿಯ ಅರಿವಿಗೆ ಬರುತ್ತದೆ. ಅಲ್ಲಿಂದ ಆಕೆಯ ಜೀವನದ ಹಾದಿಯೇ ಬದಲಾಗುತ್ತದೆ. ತನ್ನನ್ನು ಅರ್ಥ ಮಾಡಿಕೊಳ್ಳುವ, ತನ್ನಂತೆಯೇ ಇರುವ ಹಿಜ್ರಾಗಳನ್ನು ಸೇರಿಕೊಳ್ಳಲು ಒಂದು ದಿನ ರೇವತಿ ಮನೆಯಿಂದ ಓಡಿ ಹೋಗುತ್ತಾಳೆ. ಆಗ ಆಕೆಗಿನ್ನೂ ಹದಿನಾರೋ, ಹದಿನೇಳೋ ವಯಸ್ಸು. ಕೈಯಲ್ಲಿ ಕಾಸಿಲ್ಲ, ತಮಿಳು ಬಿಟ್ಟು ಬೇರೆ ಭಾಷೆ ಗೊತ್ತಿಲ್ಲ. ಆದರೂ ದೂರದ ದೆಹಲಿಯಲ್ಲಿರುವ ತನ್ನ ಹಿಜ್ರಾ ಗುರುವನ್ನು ನೋಡಲು ಹೋಗುತ್ತಾಳೆ. ಅಲ್ಲಿ ಇತರೆ ಹಿಜ್ರಾಗಳೊಂದಿಗೆ ಸೇರಿ ಚಪ್ಪಾಳೆ ತಟ್ಟುತ್ತಾ ಭಿಕ್ಷೆ ಬೇಡಲಾರಂಭಿಸುತ್ತಾಳೆ. ಆಕೆ ದೆಹಲಿಯಲ್ಲಿರುವುದು ಅವಳ ಮನೆಯವರಿಗೆ ಗೊತ್ತಾಗಿ ಉಪಾಯವಾಗಿ ಆಕೆಯನ್ನು ವಾಪಸ್ ಕರೆಸಿಕೊಳ್ಳುತ್ತಾರೆ. ಮನೆಗೆ ಬಂದ ರೇವತಿಯನ್ನು ಹಿಗ್ಗಾಮುಗ್ಗಾ ಥಳಿಸಿ, ಆಕೆ ಉದ್ದಕ್ಕೆ ಬಿಟ್ಟಿರುವ ಕೂದಲನ್ನು ಬಲವಂತವಾಗಿ ಕತ್ತರಿಸಿ ಅವಳನ್ನು 'ಸರಿ' ಮಾಡಲು ಪ್ರಯತ್ನಿಸುತ್ತಾರೆ.

ಮತ್ತೊಮ್ಮೆ ಮನೆಯಿಂದ ತಪ್ಪಿಸಿಕೊಳ್ಳುವ ರೇವತಿ ಮುಂಬೈಗೆ ಹೋಗುತ್ತಾಳೆ. ಅಲ್ಲಿನ ಆಕೆಯ ಗುರು ಹಣಕಾಸು ನೆರವು ನೀಡುವುದರಿಂದ ರೇವತಿ ಲಿಂಗ ಬದಲಾವಣೆಯ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುತ್ತಾಳೆ. ತನ್ನ ಲೈಂಗಿಕ ಆಸಕ್ತಿಗಳನ್ನು ಈಡೇರಿಸಿಕೊಳ್ಳಲು ಮುಂಬೈಯಲ್ಲಿ ಸೆಕ್ಸ್‌ವರ್ಕರ್ ಆಗುತ್ತಾಳೆ. ಆದರೂ ತನ್ನವರನ್ನು ನೋಡುವ ಅದೆಂತಹದ್ದೋ ಸೆಳೆತ ಕಾಡುತ್ತದೆ. ಶಸ್ತ್ರಚಿಕಿತ್ಸೆಯಾದ ನಂತರ ಈಗ ತಾನು 'ಹೆಣ್ಣಾಗಿದ್ದೇನೆ' ಆದ್ದರಿಂದ ತನ್ನ ಅಣ್ಣಂದಿರು ತನಗೆ ಏನೂ ಮಾಡಲಾಗುವುದಿಲ್ಲ ಎಂದು ಭಾವಿಸಿ ಮತ್ತೆ ಮನೆಗೆ ಬರುತ್ತಾಳೆ. ಆದರೆ ಅಲ್ಲಿ ಮತ್ತೊಮ್ಮೆ ಆಕೆಗೆ ಎದುರಾದದ್ದು ಮತ್ತದೇ ನಿಂದನೆ, ಕಿರುಕುಳ, ನಿರ್ಲಕ್ಷ್ಯ. ತನ್ನ ಅಣ್ಣಂದಿರ ಕಾಟ ತಡೆಯಲಾರದೆ ಮತ್ತೊಮ್ಮೆ ಆಕೆ ಮನೆ ಬಿಟ್ಟು ಹೋಗುತ್ತಾಳೆ. ಈ ಬಾರಿ ಆಕೆ ಬರುವುದು ಬೆಂಗಳೂರಿಗೆ. ಇಲ್ಲಿಯ ಹಮಾಮ್ ಒಂದನ್ನು ಸೇರಿಕೊಂಡು ಜೀವನ ನಡೆಸಲು ಪ್ರಯತ್ನಿಸುತ್ತಾಳೆ.

ಅಷ್ಟೊತ್ತಿಗಾಗಲೇ ಬೆಂಗಳೂರಿನಲ್ಲಿ ಲೈಂಗಿಕ ಅಲ್ಪಸಂಖ್ಯಾತರಿಗೆಂದು 'ಸಂಗಮ' ಎಂಬ ಸಂಘಟನೆ ಪ್ರಾರಂಭವಾಗಿತ್ತು. ರೇವತಿ ಆ ಸಂಘಟನೆಯನ್ನು ಸೇರಿಕೊಂಡು ಹಿಜ್ರಾ ಮತ್ತು ಇತರೆ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಪರವಾದ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದಳು. ಅವರು ನಡೆಸಿದ ಪ್ರತಿಭಟನೆಯೊಂದರಲ್ಲಿ ಭಾಗವಹಿಸಲು ಹೋಗಿದ್ದಾಗಲೇ ರೇವತಿಯ ಪರಿಚಯ ನನಗಾದದ್ದು.

ರೇವತಿ ತನ್ನ ಬದುಕಿನ ಕಷ್ಟಗಳನ್ನು ತಮ್ಮ ಆತ್ಮಕತೆಯಲ್ಲಿ ಒಮ್ಮೆ ಹೀಗೆ ದಾಖಲಿಸಿದ್ದಾರೆ:

"ಲೋಕ ನನ್ನನ್ನ ಓರೆಯಾಗೇ ನೋಡುತ್ತೆ. ಗಂಡಸಾಗಿ ಹುಟ್ಟಿ ಹೆಂಗಸಾದದ್ದು ತಪ್ಪು ಅನ್ನುತ್ತೆ. ದೇವರೇ ನನಗೆ ಈ ಭಾವನೆಗಳನ್ನು ಕೊಟ್ಟಿರೋದು. ಆದ್ರೆ ಈ ಭಾವನೆಗಳನ್ನು ಗೌರವಿಸದಿರೋ ಜಗತ್ತಲ್ಲಿ ನಾನು ಬದುಕಬೇಕು. ನನ್ನಂತಹವರು ಭಿಕ್ಷೆ ಬೇಡೋದನ್ನ, ಮದುವೆ ಮಾಡ್ಕೊಳೋದನ್ನ ತಪ್ಪು ಎಂದು ಜಗತ್ತು ಪರಿಗಣಿಸುತ್ತೆ. ನಾನು ಕೊಲೆ ಮಾಡಿಲ್ಲ, ಮೋಸ ಮಾಡಿಲ್ಲ ಅಥವಾ ಕಳ್ಳತನ ಮಾಡಿಲ್ಲ ಆದರೂ ಅಪರಾಧಿ ತರಹ ಜಗತ್ತು ನನ್ನನ್ನು ಕಾಣುತ್ತೆ.

ಯಾರಾದ್ರೂ ನನ್ನ ಹೊಡೆದರೆ, ಬೈದರೆ, ಜಿಗುಟಿದರೆ ನನಗೂ ನೋವಾಗುತ್ತೆ, ನನಗೆ ಹಸಿವಾಗುತ್ತೆ ಊಟ ಮಾಡಬೇಕು, ಮಾನ ಕಾಪಾಡೋಕೆ ಬಟ್ಟೆ ತೊಡಬೇಕು, ನನ್ನನ್ನ ಪ್ರೀತಿಸೋರ ಜೊತೇಲಿ ನಾನು ಇರಬೇಕು. ಅವರ ಮಮತೆ ನನಗೆ ಬೇಕು. ಸಂತೋಷ ಅನುಭವಿಸಬೇಕು. ಘನತೆಯಿಂದ ಬದುಕಬೇಕು. ನಾನು ಗೌರವಕ್ಕಾಗಿ ಹಾತೊರೀತೀನಿ. ಬೇರೆ ಹೆಂಗಸರ ತರಹ ಕೆಲಸಕ್ಕೆ ಹೋಗೋದು ನನಗಿಷ್ಟ.

ಆದರೆ ನನ್ನಂತಹವರಿಗೆ ಪ್ರೀತಿ ತೋರಿಸೋರು ಯಾರು? ಗೌರವ ಕೊಡೋರು ಯಾರು? ನಮ್ಮ ಮಾನ ಮುಚ್ಚಿಕೊಳ್ಳೋಕೆ ಬಟ್ಟೆ ನೀಡೋರು ಯಾರು? ಹಸಿವಾದಾಗ ಊಟ ನೀಡೋರು ಯಾರು? ಇದೆಲ್ಲ ನನಗೆ ಬೇಕು ಅಂದರೆ ನಾನು ಏನು ಮಾಡ್ಬೇಕು? ಹುಟ್ಟುವಾಗಲೇ ಪೊಟೈ ಆಗಬೇಕು ಅಂತ ಪ್ರಮಾಣ ಮಾಡ್ಕೊಂಡಿದ್ನಾ? ನನ್ನ ತಂದೆ ತಾಯಿ ನಾನು ಪೊಟೈ ಆಗಬೇಕೆಂದು ಕಲ್ಪಿಸಿಕೊಂಡಿದ್ದರಾ? ಬೀದಿಬೀದಿ ಸುತ್ಕೊಂಡು ಭಿಕ್ಷೆ ಎತ್ಕೊಂಡು, ಸೆಕ್ಸ್ ವರ್ಕ್ ಮಾಡ್ಕೊಂಡಿರ್ತೀನಿ ಅಂತ ನಾನು ಕಲ್ಪಿಸಿಕೊಂಡೇ ಇರ್ಲಿಲ್ಲ. ನನ್ನ ಬದುಕು ಹೀಗೆ ಆಗೋದಕ್ಕೆ ಯಾರು ಹೊಣೆ? ಇದನ್ನ ನಾನಾಗಿ ನಾನು ಆಯ್ಕೆ ಮಾಡ್ಕೊಂಡಿದ್ದಲ್ಲ, ಒಬ್ಬ ಗಂಡಸಿನೊಂದಿಗೆ ಜೀವನ ನಡೆಸಬೇಕು ಅಂದ್ಕೊಂಡಿದ್ದೆ. ನಿತ್ಯದ ಜೀವನಕ್ಕೆ ಅಗತ್ಯವಾದ ಏನೂ ನನಗೆ ಸಿಗಲಿಲ್ಲ. ಗಂಡಸರು ಕೇವಲ ಸೆಕ್ಸ್‌ಗಷ್ಟೇ ನನ್ನ ಬಳಸಿಕೊಂಡರು. ಮಿಕ್ಕಿದ್ದು ಯಾವುದೂ ಅವರಿಗೆ ಬೇಡ. ಸೆಕ್ಸ್‌ವರ್ಕ್ ಮಾಡೋದು ನನಗಿಷ್ಟವಿಲ್ಲ. ಅದು ನನ್ನ ಹಣೆಬರಹ ಅಂತ ಒಪ್ಪಿಕೊಂಡಿದ್ದೇನೆ.


ಹಿಜ್ರಾಗಳ ಬದುಕಿನಲ್ಲಿ ಸಾಮಾನ್ಯ ಜನರ ನಿರ್ಲಕ್ಷ್ಯ ಒಂದೆಡೆಯಾದರೆ, ಪೊಲೀಸರು ನಿರಂತರ ಕಿರುಕುಳ ಇನ್ನೊಂದೆಡೆ. ಒಮ್ಮೆ ಬೆಂಗಳೂರಿನಲ್ಲಿ ತನಗಾದದ್ದನ್ನು ರೇವತಿ ಹೀಗೆ ವಿವರಿಸಿದ್ದಾರೆ:

"... ಆತ ಸಾಮಾನ್ಯ ಉಡುಪು ಧರಿಸಿದ ಪೊಲೀಸ್. ಆತನಿಗೆ ನಲವತ್ತು ವರ್ಷ ಇರಬಹುದು. ಕಟ್ಟುಮಸ್ತಾದ ಆಳು. ಬಲವಂತವಾಗಿ ನನ್ನನ್ನು ಆಟೋ ಹತ್ತಿಸಿಕೊಂಡು ಪೊಲೀಸ್ ಸ್ಟೇಷನ್‌ಗೆ ಕರ್ಕೊಂಡು ಹೋಗ್ತಿದೀನಿ ಅಂದ. ಆದರೆ ನಿರ್ಜನವಾದ ಕತ್ತಲ ಗಲ್ಲಿಯೊಳಗೆ ಕರೆದುಕೊಂಡು ಹೋಗ್ತಿದಾನೆ ಅಂತ ಗೊತ್ತಾಯಿತು. ನಂತರ ಸೆಕ್ಸ್‌ಗಾಗಿ ಬಲವಂತ ಮಾಡಿದ.

▶▶ 6

ಜಗಳೂರು

ರಾಮಚಂದ್ರನತ್ತ ಮುನಿಸು ದೇವೇಂದ್ರಪ್ಪಗೆ ಛಾನ್ಸು




ಆಪರೇಷನ್ ಕಮಲದಲ್ಲಿ ಜಗಳೂರಿನ ರಾಮಚಂದ್ರ ಬಿಜೆಪಿಗೆ ಬಿಕರಿಯಾದ ಹಿನ್ನೆಲೆಯಲ್ಲಿ ಜಗಳೂರು ವಿಧಾನಸಭಾ ಕ್ಷೇತ್ರದ ಮತದಾರರು ಈಗ ಮತ್ತೊಂದು ಚುನಾವಣೆಗೆ ಸಜ್ಜಾಗಬೇಕಾಗಿದೆ.

ಶಾಮನೂರು ಕೃಪಾಕಟಾಕ್ಷದಿಂದಲೇ ಪ್ರವರ್ಧಮಾನಕ್ಕೆ ಬಂದಿದ್ದ ರಾಮಚಂದ್ರ ಅದೇ ಶಾಮನೂರರ ಪ್ರಭಾವಳಿ-ಬೆಂಬಲಗಳಿಂದಲೇ ಶಾಸಕನಾಗಿ ಚುನಾಯಿತನಾಗಿದ್ದ. ಆದರೆ ಸಿಎಂ ಯಡ್ಡಿ ಅಧಿಕಾರದ ಹಪಾಹಪಿಯ ಅಮಲೇರಿಸಿಕೊಂಡು ಕೋಟಿಗಳ ಲೆಕ್ಕದಲ್ಲಿ ಆಪರೇಷನ್ ಕಮಲ ನಡೆಸುತ್ತಿರುವಾಗಲೇ ಪಕ್ಕಾ ಅವಕಾಶವಾದಿಯಾಗಿದ್ದ ರಾಮಚಂದ್ರ ಬರಗೆಟ್ಟವನಂತೆ ತನಗೆ ಆಶ್ರಯ-ಸ್ಥಾನಮಾನ ನೀಡಿದ ಶಾಮನೂರು ಮತ್ತವರ ಕಾಂಗ್ರೆಸ್ ಪಕ್ಷಕ್ಕೆ ಬೆನ್ನುತೋರಿಸಿ ಬಿಜೆಪಿಗೆ ಬಿಕರಿಯಾದ.

ಈಗ ಭರ್ತಿ ಇದುಗಂಟನ್ನೇ ತನ್ನ ಬಳಿ ಇಟ್ಟುಕೊಂಡಿದ್ದರೂ ಮಾಜಿಯಾಗಿರುವ ರಾಮಚಂದ್ರನಿಗೆ ಜನರ ಬಳಿ ಹೋಗಿ ಮುಖ ತೋರಿಸಲಾಗುತ್ತಿಲ್ಲ. ಬಿಳಿಚೋಡು ಹೋಬಳಿಯ ಬಹುತೇಕ ಹಳ್ಳಿಗಳಲ್ಲಿ ಪ್ರಚಾರಕ್ಕೆ ಹೋದಾಗ ಜನ ನೇರವಾಗಿ ಶಾಸಕ ಸ್ಥಾನವನ್ನು ಮಾರಿಕೊಂಡದ್ದಕ್ಕೆ ಛೀಮಾರಿ ಹಾಕಿದ್ದಾರೆ. ಕೆಲ ಹಳ್ಳಿಗಳಲ್ಲಿ ಊರೊಳಗೆ ಬಿಟ್ಟುಕೊಳ್ಳಲು ನಿರ್ಬಂಧ ಹಾಕಿದ್ದಾರೆ.

ಜನರಿಗೆ ಏನೇನೋ ರಾಜಕೀಯ ಸಮರ್ಥನೆ ನೀಡಲು ಹೋಗಿ ನಗೆಪಾಟಲೀಗೀಡಾಗುತ್ತಿದ್ದಾನೆ.

ಈ ಬಾರಿ ಭೀಮಸಮುದ್ರದ ಅಡಿಕೆ ಕುಳ, ದಾವಣಗೆರೆ ಸಂಸದ ಜಿ.ಎಂ. ಸಿದ್ದೇಶ್ವರ ಪ್ರಭಾವ ಕೂಡಾ ವರ್ಕ್‌ಔಟ್ ಆಗುವ ಲಕ್ಷಣ ಕಾಣಿಸುತ್ತಿಲ್ಲ. ಇಡೀ ಜಗಳೂರು ತಾಲ್ಲೂಕಿನಲ್ಲಿ 65 ಸಾವಿರ ಲಿಂಗಾಯತ ಮತಗಳು ಇವೆ. ಅದರಲ್ಲಿ ಸಾದರ ಲಿಂಗಾಯತರನ್ನು ಹೊರತುಪಡಿಸಿ ಇತರೆ ಲಿಂಗಾಯತ ಸಮುದಾಯಗಳಿಗೆ ಸೇರಿದ 35 ಸಾವಿರ ಮತಗಳಿವೆ.



ಲಿಂಗಾಯತರ ಹೆಸರಲ್ಲಿ ನಡೆಯುವ ರಾಜಕೀಯ ಅಂತಿಮವಾಗಿ ಸಾದರ ಲಿಂಗಾಯತರಿಗೆ ಮಾತ್ರ ಅಧಿಕಾರ ತಂದುಕೊಡುತ್ತಿರುವದರಿಂದ ಉಳಿದ ಲಿಂಗಾಯತ ಸಮುದಾಯಗಳಿಗೆ ತೀವ್ರ ಅಸಮಾಧಾನ ಇದೆ. ಅದರಲ್ಲೂ ಗಾಣಿಗ ಲಿಂಗಾಯತರು ಹಾಗೂ ಪಂಚಾಚಾರ್ಯ ಲಿಂಗಾಯತ ಸಮುದಾಯವನ್ನು ಒಳಗೊಳಗೆ ಆಕ್ರೋಶದತ್ತ ತಳ್ಳಿದೆ. ಈ ಅಂಶ ಕೂಡಾ ಬಿಜೆಪಿಗೆ ಮುಳುವಾಗಲಿದೆ.

ಬಿಜೆಪಿಯಲ್ಲಿ ಅಡಿಯಿಂದ ಮುಡಿಯವರೆಗೆ ಸಾದರ ಪ್ರಾಬಲ್ಯವೇ ಹೆಚ್ಚಾಗಿರುವುದು ಹಿಂದುಳಿದ ಜಾತಿಗಳ ಮುಖಂಡರಿಗೂ ಬೇಸರ ತರಿಸಿದೆ. ಜಿಲ್ಲಾ ಉಸ್ತುವಾರಿ ಸಚಿವ ರವೀಂದ್ರನಾಥ್, ಜಿಲ್ಲಾಧ್ಯಕ್ಷ ಗುರುಸಿದ್ಧನಗೌಡ, ಸಂಸದ ಸಿದ್ದೇಶ್... ಹೀಗೆ ಸಾದರ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇವರ ಜೊತೆ ಬೇರೆ ಯಾವುದೇ ಜಾತಿಯ ಮುಖಂಡರಾಗಿರಲಿ, ಅವರಿಗೆಷ್ಟೇ ಪ್ರಭಾವ ಇರಲಿ ಅವರದೇನಿದ್ದರೂ ಹಿಮ್ಮೇಳದವರ ಪಾತ್ರ ಅಷ್ಟೆ. ರಾಜಕೀಯ ಫಲಾಫಲಗಳನ್ನು ಅನುಭವಿಸುವಲ್ಲೂ ಸಾದರ ಲಿಂಗಾಯತ ಮುಖಂಡರೇ ಮುಂಚೂಣಿಯಲ್ಲಿರುತ್ತಾರೆ.

ಇಂತಹ ಪ್ರತಿಕೂಲ ಅಂಶದ ನಡುವೆ ಕಳೆದ ಬಾರಿ ಬಿಜೆಪಿಯಿಂದ ಸ್ಪರ್ಧಿಸಿ ಕೇವಲ ಎರಡು ಸಾವಿರ ಮತಗಳ ಅಂತರದಿಂದ ಸೋತಿದ್ದ ರಾಜೇಶ್ ಬಿಜೆಪಿಯ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದು ದೊಡ್ಡ ತಲೆನೋವಾಗಿದೆ. ರಾಜೇಶ್‌ಗೆ ವೈಯಕ್ತಿಕವಾಗಿ ನಾಯಕನ ವರ್ಚಸ್ಸಿಲ್ಲ. ಆದರೆ ತನ್ನ ಮಾವ ಬಳ್ಳಾರಿ ರೆಡ್ಡಿ ಬ್ರದರ್ಸ್ - ಶ್ರೀರಾಮುಲು ಕೃಪಾಕಟಾಕ್ಷ ಇರುವುದರಿಂದ ದೊಡ್ಡ ಬೆದರಿಕೆಯಾಗಿ ಪರಿಣಮಿಸಿದ್ದಾನೆ. ಈತ ರೆಡ್ಡಿ ಬ್ರದರ್ಸ್ ಪ್ರಾಯೋಜಿತ ಅಭ್ಯರ್ಥಿ ಎಂಬುದು ಜನಜನಿತವಾಗಿದ್ದರೂ ಬಿಜೆಪಿಯ ರಾಜ್ಯಮಟ್ಟದ ನಾಯಕರಾರೂ ತುಟಿಬಿಚ್ಚುತ್ತಿಲ್ಲ.

ಜಾತ್ಯತೀತ ಜನತಾದಳದಿಂದ ಸ್ಪರ್ಧಿಸುತ್ತಿರುವ ಹುಚ್ಚವನಹಳ್ಳಿ ಮಂಜುನಾಥ್ ರೈತಸಂಘದ ಸಂಘಟಕನಾಗಿ ತಾಲ್ಲೂಕಿನಾದ್ಯಂತ ಪರಿಚಯ, ಜನಪ್ರಿಯತೆ ಎರಡನ್ನೂ ಪಡೆದಿದ್ದರೂ ತಾನೇ ಹಾಕಿಕೊಂಡಿರುವ ಮಿತಿಗಳಿಂದಾಗಿ ಈತ ಚುನಾವಣಾ ಅಖಾಡದಲ್ಲಿ ಸಮರ್ಥವಾಗಿ ನಿಲ್ಲುತ್ತಾನೆಂಬ ಭರವಸೆ ಇಲ್ಲ. ಯಾವಾಗಲೂ ತನ್ನದೇ ಸ್ವಜಾತಿ ಕೂಟದಲ್ಲೇ ಕಾಲಕಳೆಯುವುದರ ಬದಲು ಇತರ ಹಿಂದುಳಿದ ಜಾತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡರೆ ಒಳ್ಳೆಯ ಸ್ಪರ್ಧೆ ನೀಡಬಲ್ಲ.

ಯಾವ ದೃಷ್ಟಿಕೋನದಿಂದ ನೋಡಿದರೂ ಕಾಂಗ್ರೆಸ್ನ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ದೇವೇಂದ್ರಪ್ಪ ಅತ್ಯಂತ ಭರವಸೆಯ ವ್ಯಕ್ತಿಯಾಗಿದ್ದಾರೆ. ಜಗಳೂರು ವಿಧಾನಸಭಾ ಕ್ಷೇತ್ರಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ ಅರಸೀಕೆರೆ ಹೋಬಳಿಯ ದೇವೇಂದ್ರಪ್ಪ ಹಿಂದೆ ಜಿ.ಪಂ.ಸದಸ್ಯರಾಗಿ ಒಳ್ಳೆಯ ಹೆಸರನ್ನು ಉಳಿಸಿಕೊಂಡಿದ್ದಾರೆ. .ಉತ್ತಮ ನಾಯಕನಾಗಿ ಸಾಮರ್ಥ್ಯ ಸಾಬೀತುಪಡಿಸುವ ಲಕ್ಷಣಗಳೂ ಇವೆ.

ಆದರೆ ರೆಡ್ಡಿಗಳದೊಂದು ಗುಂಪು, ಸಾದರ ಲಿಂಗಾಯತರದೊಂದು ಗುಂಪು ಜಗಳೂರು ಕಾಂಗ್ರೆಸ್ಸನ್ನು ಒಡೆದ ಮನೆಯಾಗಿಸಿವೆ. ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ವೇಣುಗೋಪಾಲರೆಡ್ಡಿ, ಶಿವರೆಡ್ಡಿ, ಸುರೇಶ್‌ಗೌಡ ಮುಂತಾದವರು ತಮ್ಮ ಸ್ವಜಾತಿ ಪ್ರತಿಷ್ಠೆಗಳನ್ನು ಬದಿಗಿರಿಸಿ, ಪಕ್ಷನಿಷ್ಠೆಯಿಂದ ಕೆಲಸ ಮಾಡಿದ್ದೇ ಆದರೆ ದೇವೇಂದ್ರಪ್ಪನ ಗೆಲುವು ಅಬಾಧಿತ.

ಇದು ಸುಲಭದ ಮಾತಲ್ಲ. ಇವತ್ತಿಗೂ ತಮ್ಮ ಜಾತ್ಯತೀತ ನಡವಳಿಕೆಯಿಂದ ಅಲ್ಪಸಂಖ್ಯಾತರು, ಹಿಂದುಳಿದವರ ನಡುವೆ ಜನಪ್ರಿಯತೆಯನ್ನು ಉಳಿಸಿಕೊಂಡಿರುವ ಶಾಮನೂರು ಶಿವಶಂಕರಪ್ಪನವರು ಜನರ ಬಳಿಗೆ ಬಂದು ರಾಜ್ಯ ನಾಯಕರೊಂದಿಗೆ ಸಕ್ರಿಯವಾಗಿ ಕಣಕ್ಕಿಳಿದರೆ ಕಾಂಗ್ರೆಸ್‌ಗೆ ಗೆಲುವು ಕಟ್ಟಿಟ್ಟ ಬುತ್ತಿ.


ಕಡಿಮೆ ಕಾಲಾವಕಾಶ ಇರುವುದರಿಂದ ಶಾಮನೂರು ಇಡೀ ಚುನಾವಣೆಯ ತಮ್ಮ ಹೆಗಲಿಗೇರಿಸಿಕೊಂಡು ಮುನ್ನುಗ್ಗಬೇಕಿದೆ. ಹಾಗಾದಾಗ ಮಾತ್ರ ಜಗಳೂರು ಕ್ಷೇತ್ರದಾದ್ಯಂತ ಬಿಜೆಪಿ ನಾಯಕಮಣಿಗಳ ವಿರುದ್ಧ ಇರುವ ಅಸಮಾಧಾನವನ್ನು ಕಾಂಗ್ರೆಸ್‌ಗೆ ಲಾಭದಾಯಕವಾಗಿ ಪರಿವರ್ತಿಸಿಕೊಳ್ಳಬಹುದು.

ಇಲ್ಲವಾದಲ್ಲಿ ತೂಗುಯ್ಯಾಲೆಯಲ್ಲಿರುವ ಯಡಿಯೂರಪ್ಪ ಸುರಿಯುವ ಹಣದ ಮುಂದೆ ಕಾಂಗ್ರೆಸ್ ಮುಖಂಡರು ಸ್ವಲ್ಪ ಯಾಮಾರಿದರೂ ರಾಮಚಂದ್ರನೆಂಬ ಅಬ್ಬೇಪಾರಿಯೇ ಗತಿಯಾಗಬೇಕಾಗುತ್ತದೆ. ಹಾಗಾಗದಂತೆ ಕಾಂಗ್ರೆಸ್ಸಿಗರು ಎಚ್ಚರ ವಹಿಸಬೇಕು.


ಚನ್ನಪಟ್ಟಣ ಸಿಂ.ಲಿಂ. ನಾಗರಾಜ್ ಗೆಲುವು ಖಚಿತ

ಪದೇಪದೇ ಬರುತ್ತಿರುವ ಎಲೆಕ್ಷನ್‌ಗಳ ಬಗ್ಗೆ ಚನ್ನಪಟ್ಟಣದ ಮತದಾರರಿಗೆ ಬೇಸರವಿದ್ದಂತೆ ಕಾಣುತ್ತಿಲ್ಲ. ಅದರ ಬದಲಿಗೆ ಉಕ್ಕಿ ಬರುವ ಕೋಪವನ್ನು ತೋರಿಸಲು, ಅಲಾಲ್‌ಟೋಪಿ ರಾಜಕಾರಣಿಗಳಿಗೆ ಅರ್ಜೆಂಟಾಗಿ ಒದ್ದು ಬುದ್ಧಿ ಕಲಿಸುವ ಇನ್ನೊಂದು ಅವಕಾಶ ಸಿಕ್ಕಿದ್ದಕ್ಕಾಗಿ ಜನ ಖುಷ್ ಖುಷಿಯಾಗಿದ್ದಾರೆ.


ಮೆಗಾ ಸಿಟಿ ಖದೀಮ ಯೋಗೇಶ್ವರ್‌ಗೆ ಸೋಲು ಹಾಗೂ ಜೆಡಿಎಸ್‌ನ ಸಿಂ.ಲಿಂ. ನಾಗರಾಜ್‌ಗೆ ಗೆಲುವು ಚನ್ನಪಟ್ಟಣದಲ್ಲಿ ಈಗಾಗಲೇ ತೀರ್ಮಾನವಾಗಿ ಹೋಗಿದೆ ಎನ್ನಲಿಕ್ಕೆ ಮೇಲಿನ ಕಾರಣವೇ ಸಾಕು.



ಒಂದು ಲಕ್ಷದ ಎಂಬತ್ತೂರು ಸಾವಿರ ಮತದಾರರಿರುವ ಚನ್ನಪಟ್ಟಣದಲ್ಲಿ ಜೆಡಿಎಸ್‌ಗೆ ಗೆಲುವು ಸಿಗಲು ಅನೇಕ ಕಾರಣಗಳಿವೆ. ಮೊದಲನೆಯದಾಗಿ ಬಿಜೆಪಿ ಅಭ್ಯರ್ಥಿ ಯೋಗೇಶ್ವರ್ ಹುಟ್ಟಾ ಕಳ್ಳ. ಇವನ ವಂಚನೆಗಳ ಬಗ್ಗೆ ಸರಿಯಾಗಿ ತನಿಖೆಯಾಗಿ ಕೋರ್ಟ್ ತೀರ್ಪುಗಳು ಬೇಗನೆ ಬಂದರೆ ಅಷ್ಟೇ ಬೇಗನೆ ಈತ ಜೈಲು ಪಾಲಾಗುವುದು ಗ್ಯಾರಂಟಿಯಾಗಿದೆ. ಈ ಕ್ಷೇತ್ರ ಒಕ್ಕಲಿಗರ ಪ್ರಾಬಲ್ಯದ್ದು. ಅವರಿಗೆ ಬಿಜೆಪಿ ಅಥವಾ ಕಾಂಗ್ರೆಸ್‌ಗಿಂತ ದೇವೇಗೌಡರ ಜನತಾದಳವೇ ತಮ್ಮ ಪಾರ್ಟಿ ಎಂಬ ಭಾವನಾತ್ಮಕ ಒಲವಿದೆ. ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್ ಆಗಲಿ, ಎಸ್.ಎಂ. ಕೃಷ್ಣ ಅಥವಾ ಬಿಜೆಪಿಯ ಡಿ.ಬಿ. ಚಂದ್ರೇಗೌಡರನ್ನಾಗಲಿ ಒಕ್ಕಲಿಗರ ಲೀಡರ್‌ಗಳೆಂದು ಇಲ್ಲಿನ ಜನ ಪರಿಗಣಿಸಿಲ್ಲ. ಮುಸ್ಲಿಮರು ನಿರ್ಣಾಯಕ ಸಂಖ್ಯೆಯಲ್ಲಿರುವುದೂ ಜೆಡಿಎಸ್ ಪಾಲಿಗೆ ಈ ಬಾರಿ ಅನುಕೂಲಕರವಾಗಿದೆ. ಮುಸ್ಲಿಮರು ಮೊದಲಿನಂತೆ ಕಾಂಗ್ರೆಸ್ ಪರವಾಗಿಲ್ಲ.



ಇದೆಲ್ಲಕ್ಕಿಂತ ಮುಖ್ಯವಾಗಿ ದಳದ ಅಭ್ಯಥಿ ಸಿಂ.ಲಿಂ. ನಾಗರಾಜ್‌ರ ಸರಳ ವ್ಯಕ್ತಿತ್ವ, ಗುಣ, ನಡವಳಿಕೆಗಳನ್ನು ಕಳೆದ 25 ವರ್ಷಗಳಿಂದ ಜನ ನೋಡುತ್ತಾ ಬಂದಿದ್ದಾರೆ. ಯಾರೇ ಬಂದು ಕಷ್ಟ ಎಂದು ಕರೆದರೆ ಒಡನೆಯೇ ಜೊತೆಗೆ ಹೊರಟು ಬಿಡುವ ನಾಗರಾಜ್ ಚನ್ನಪಟ್ಟಣದ ಬಸ್‌ಸ್ಟ್ಯಾಂಡ್, ಸರ್ಕಾರಿ ಆಫೀಸು, ಚಿಕ್ಕಪುಟ್ಟ ಟೀ ಸ್ಟಾಲ್‌ಗಳಲ್ಲೂ ಜನಸಾಮಾನ್ಯರ ಕೈಗೆ ಸಿಗುತ್ತಿದ್ದ ನಾಯಕ. ಈತ ದುಡ್ಡು ರಿಯಲ್ ಎಸ್ಟೇಟು, ಕೀರ್ತಿ, ಅಧಿಕಾರವೆಂದು ಎಂದೂ ತಲೆ ಕೆಡಿಸಿಕೊಂಡವರಲ್ಲ. ಹೀಗೆ ಯಾವ ದಿಕ್ಕಿನಿಂದ ಅಳೆದು ತೂಗಿದರೂ ಯೋಗೇಶ್ವರ್ ಸಿಂ.ಲಿಂ. ನಾಗರಾಜ್‌ರ ಕಾಲಿನ ಮಟ್ಟಕ್ಕೂ ಬರುತ್ತಿಲ್ಲ. ಈ ನಡುವೆ ಕಾಂಗ್ರೆಸ್ ಕ್ಯಾಂಡಿಡೇಟ್ ಆಗಿ ಕಣಕ್ಕಿಳಿದಿರುವ ರಘುನಂದನ್ ರಾಮಣ್ಣ ಯಾರೆಂಬುದೇ ಜನರಿಗೆ ಗೊತ್ತಿಲ್ಲ. ಈತ ಯಾವ ದಿಕ್ಕಿನಿಂದ ಯಾವಾಗ ಯಾಕೆ ಚನ್ನಪಟ್ಟಣಕ್ಕೆ ಬಂದ ಎಂತಲೂ ಯಾರಿಗೂ ಗೊತ್ತಾಗುತ್ತಿಲ್ಲ. ಬೆಂಗಳೂರಿನಲ್ಲಿ ಬ್ಯುಸಿನೆಸ್ ಮಾಡಿಕೊಂಡಿರುವ ರಘುನಂದನ್‌ಗೆ ನೇರ ರಾಜಕೀಯ ಇದೇ ಹೊಸದು. ಈತನ ತಾಯಿ ವಿಜಯಲಕ್ಷ್ಮಿ ರಾಮಣ್ಣ ಎಂಬುವರು ಎಐಸಿಸಿ ಮೆಂಬರ್ ಅಂತೆ ಎಂಬ ಸುದ್ದಿ ಹರಡಿದೆ. ಆದರೆ ಮತ ಹಾಕುವ ಪ್ರಜೆ ಅದನ್ನೆಲ್ಲಾ ಕೇರ್ ಮಾಡುವುದಿಲ್ಲ. ಇದಲ್ಲದೆ ಕಾಂಗ್ರೆಸ್ ನಾಯಕರು ಇಲ್ಲಿ ಪರಸ್ಪರ ಕಾಲೆಳೆಯುವ ಕೆಲಸದಲ್ಲಿ ಬ್ಯುಸಿಯಾಗಿದ್ದಾರೆ. ಮಾಜಿ ಸಂಸದೆ ಬಂದು ಡಿಕೆ ವಿರುದ್ಧ ಕೂಗಾಡಿ ಹೋಗಿದ್ದಾಳೆ. ಡಿಕೆಗೆ ತನ್ನ ಕಸಿನ್ ರವಿಗೆ ಅಥವಾ ತಮ್ಮ ಸೂರಿಗೆ ಇಲ್ಲಿ ಟಿಕೆಟ್ ಕೊಡಿಸಬೇಕೆಂದಿತ್ತು. ಟಿಕೆಟ್ ಸಿಗದ ಕಾರಣ ಡಿಕೆಗೂ ಈ ಎಲೆಕ್ಷನ್ ಅಷ್ಟು ಮುಖ್ಯ ಅನಿಸಿಲ್ಲ.



ನೀರಾವರಿ ಅಂದ ಯೋಗಿ

'ನಾನು ಕಳೆದ ಎರಡು ಬಾರಿ ಸೋತಿದೀನಿ. ಈ ಸಾರಿ ಗೆಲ್ಲಿಸಿದರೆ ಚನ್ನಪಟ್ಟಣಕ್ಕೆ ನೀರಾವರಿ ಸೌಕರ್ಯ ಮಾಡಿಸಿಕೊಡ್ತೀನಿ' ಎನ್ನುತ್ತಾ ಓಟು ಕೇಳುತ್ತಿದ್ದಾನೆ ಯೋಗೇಶ್ವರ್. ಜನ ಈ ಮಾತು ಕೇಳಿ ವಿಪರೀತವಾಗಿ ನಗುತ್ತಿದ್ದಾರೆ. ಯಾವ ನೀರಾವರಿ, ಎಲ್ಲಿಂದ, ಯಾರಿಗೆ ನೀರಾವರಿ ಸೌಲಭ್ಯ ಕಲ್ಪಿಸುತ್ತಾನೆ ಇವನು ಎಂದು ಆಶ್ಚರ್ಯಪಡುತ್ತಿದ್ದಾರೆ. ಒಂದಿಡೀ ತಾಲ್ಲೂಕಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದೆಂದರೆ ಅದೇನು 'ಆಪರೇಷನ್ ಕಮಲ'ದಷ್ಟು ಸಲೀಸಾದ ಕೆಲಸವಾ? ಹಾಗೆ ನೋಡಿದರೆ ಯೋಗೇಶ್ವರ್‌ಗೆ ತೀರಾ ಜನಬೆಂಬಲ ಇಲ್ಲವೇ ಇಲ್ಲ ಎನ್ನುವಂತಿಲ್ಲ. ಬೇವೂರು, ಮಳೂರು ಹೋಬಳಿಗಳಲ್ಲಿ ಮೇಲ್ನೋಟಕ್ಕೆ ಬಿಜೆಪಿ ಜೋರಾಗಿದ್ದಂತೆ ಕಾಣುತ್ತಿದೆ. ಆದರೆ ಮತದಾರರು ಒಳಗೊಳಗೆ ಜೆಡಿಎಸ್ ಪರವಿದ್ದಾರೆ.

ಅಕ್ಕೂರು, ಕೋಡಂಬಳ್ಳಿ ಹೋಬಳಿಗಳಂತೂ ಪೂರಾ ಜನತಾದಳದ ಪರವಾಗಿದೆ. ದಳದ ಸೇನಾಧಿಪತಿಗಳಂತೆ ಗರಿಕಳ್ಳಿ ಕೃಷ್ಣೇಗೌಡ, ಬೋರ್‌ವೆಲ್ ರಾಮಚಂದ್ರ, ಸಿಂಗರಾಜಪುರ ರಾಜಣ್ಣ, ಪುಟ್ಟಸ್ವಾಮಪ್ಪ ಬಿರುಸಾಗಿ ಓಡಾಡುತ್ತಿದ್ದಾರೆ. ಸ್ವತಃ ಕುಮಾರಸ್ವಾಮಿಯೇ ಕ್ಷೇತ್ರದಲ್ಲಿ ಓಡಾಡುತ್ತಿರುವುದನ್ನು ನೋಡಿ ದಳದ ನಾಯಕರಿಗೆ ರಣೋತ್ಸಾಹ ಬಂದುಬಿಟ್ಟಿದೆ. ಚನ್ನಪಟ್ಟಣ ಟೌನ್ ಸೇರಿದಂತೆ ಸುತ್ತಮುತ್ತಲಿನ 25 ಸಾವಿರ ಮುಸ್ಲಿಂ ಮತದಾರರನ್ನು ದಳದತ್ತ ಸೆಳೆಯಲು ಜಬೀಉಲ್ಲಾ ಖಾನ್, ರೇಷ್ಮಾ ಮುಂತಾದ ಮುಸ್ಲಿಂ ಲೀಡರ್‌ಗಳು ಬಿರುಸಾಗಿ ಓಡಾಡುತ್ತಿದ್ದಾರೆ. ಆದರೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಎಸ್‌ಡಿಪಿಐ ಪಕ್ಷದಿಂದ ಸೈಯದ್ ಚಾಕ್ರಿ ಸ್ಪರ್ಧಿಸಿರುವುದು ಮುಸ್ಲಿಮರ ಮತ ವಿಭಜನೆಯಾಗಲಿದೆ. ನ್ಯಾಷನಲ್ ಟ್ರಾವಲ್ಸ್‌ನ ಮಾಲೀಕ ಹಾಗೂ ಚಾಮರಾಜಪೇಟೆಯ ಜೆಡಿಎಸ್ ಶಾಸಕ ಜಮೀರ್ ಅಹ್ಮದ್ ಖಾನ್ ಧಾರಾಳವಾಗಿ ಹಣ ಖರ್ಚು ಮಾಡುತ್ತಿರುವ ಸುದ್ದಿಗಳಿವೆ. ಹಾಗೆ ನೋಡಿದರೆ ಈ ಇಡೀ ಎಲೆಕ್ಷನ್‌ನ ಖರ್ಚಿನ ಬಾಬ್ತನ್ನು ದಳದ ನಾಯಕರೇ ಭರಿಸಬೇಕೆ ವಿನಃ ಅಭ್ಯರ್ಥಿ ನಾಗರಾಜ್‌ಗೆ ಆ ಶಕ್ತಿಯಿಲ್ಲ. ಒಳ್ಳೆಯತನವೊಂದೇ ನಾಗರಾಜ್‌ಗಿರುವ ಆಸ್ತಿ. ಕುಮಾರಸ್ವಾಮಿಯಂತೂ ನಾನೇ ದಳದ ಅಭ್ಯರ್ಥಿ ನಾಗರಾಜ್ ಅಲ್ಲ ಅಂದುಕೊಂಡು ದಳಕ್ಕೆ ಓಟು ಹಾಕಿ' ಎಂದು ಹೇಳುತ್ತಿದ್ದಾರೆ ಅದರ ಬದಲಾಗಿ 'ನಾಗರಾಜ್ ಒಳ್ಳೆಯ ಮನುಷ್ಯ ಅವರನ್ನು ಗೆಲ್ಲಿಸಿ' ಅಂತಾ ಯಾಕೆ ಹೇಳುತ್ತಿಲ್ಲವೊ ಗೊತ್ತಿಲ್ಲ.

ನಾಗರಾಜ್‌ಗಿರುವ ಇನ್ನೊಂದು ಅನುಕೂಲ ಏನೆಂದರೆ ಚನ್ನಪಟ್ಟಣದ ನಾಲ್ಕು ಜಿಲ್ಲಾ ಪಂಚಾಯತಿ ಕ್ಷೇತ್ರಗಳ ಪೈಕಿ ನಾಲ್ಕನ್ನೂ ಜೆಡಿಎಸ್ ಗೆದ್ದಿದೆ. 18 ತಾಲ್ಲೂಕು ಪಂಚಾಯತಿಗಳಲ್ಲಿ 16 ದಳ ಸದಸ್ಯರು ಗೆದ್ದುಬಂದಿದ್ದಾರೆ. ಗ್ರಾಮ ಪಂಚಾಯತಿಗಳ ಪೈಕಿ ಮೆಜಾರಿಟಿ ಮೆಂಬರ್‌ಗಳು ದಳದವರಿದ್ದಾರೆ. ಹೀಗೆ ಒಂದು ರೀತಿಯಲ್ಲಿ ಇಡೀ ಚನ್ನಪಟ್ಟಣ ಕ್ಷೇತ್ರವೇ ಈಗಾಗಲೇ ಜನತಾದಳಮಯವಾಗಿ ಬಿಟ್ಟಿದೆ. ಜೆಡಿಎಸ್‌ನ ವಿರೋಧಿಗಳೂ ಸಹ ಇಲ್ಲಿ ನಾಗರಾಜ್ ಗೆಲ್ಲಬೇಕೆಂದು ಬಯಸುತ್ತಿದ್ದಾರೆ.

ಯೋಗೇಶ್ವರ್‌ನ ತರಲೆಗಳು, ಪಕ್ಷಾಂತರಿ ಅಶ್ವಥ್‌ನ ಜನದ್ರೋಹ ನೋಡಿ ಜನ ಅಸಹ್ಯಿಸಿಕೊಳ್ಳುತ್ತಿದ್ದಾರೆ. ಏಪ್ರಿಲ್ 9 ರ ಚುನಾವಣೆಯಲ್ಲಿ ನಾಗರಾಜ್ ಗೆದ್ದರೆ ಯೋಗೇಶ್ವರ್ ಹಾಗೂ ಅಶ್ವಥ್ ಪುನಃ ಚನ್ನಪಟ್ಟಣದಲ್ಲಿ ತಲೆ ಎತ್ತುವುದು ಕಷ್ಟ. ಚನ್ನಪಟ್ಟಣದ ಪ್ರಜ್ಞಾವಂತ ಮತದಾರರು ಸಿಂ.ಲಿಂ. ನಾಗರಾಜ್‌ಗೆ ಬೆಂಬಲ ಸೂಚಿಸುವುದು ನಿಜಕ್ಕೂ ಒಳ್ಳೆಯ ತೀರ್ಮಾನ.

• ಪಾರ್ವತೀಶ




ಬಿಜೆಪಿ ಬಕಾಸುರರ ಮತ್ತೊಂದು ಸಾಧನೆ

BBMP ದಿವಾಳಿ

• ರಾ.ಸೋಮನಾಥ್

ಬೆಂಗಳೂರಿನ ಅಭಿವೃದ್ಧಿಗೆ ಅಂತ 22 ಸಾವಿರ ಕೋಟಿ ಖರ್ಚು ಮಾಡ್ತಾ ಇದ್ದೀವಿ, ಬೆಂಗಳೂರನ್ನು ...ಾನ್ ಸಿಟಿ ಮಾಡ್ತೀವಿ, ಅಂತರರಾಷ್ಟ್ರೀಯವಾಗಿ ...ಗಳೂರನ್ನು ಬೆಳೆಸ್ತೀವಿ, ಬಜೆಟ್ಟೇ ...ಾವಿರ ಕೋಟಿ ಅದಕ್ಕೆ ಸರ್ಕಾರ ...ತೋದು 3 ಸಾವಿರ ಕೋಟಿ... ...ೃದಿಯಾಗಿ ಬೆಂಗಳೂರಿಗೆಂದು ...ಟಿ ಕೋಟಿಯ ಬೊಗಳೆ ಬಿಟ್ಟ ...ಖ್ಯಮಂತ್ರಿ ಯಡ್ಡಿಯ ಬಣ್ಣ ...ಬಲಾಗಿದೆ.



ಬಿಬಿಎಂಪಿ ದಿವಾಳಿಯಾಗಿದೆ!

...ಸದ್ಯ ಬಿಬಿಎಂಪಿಯ ಖಾತೆಯಲ್ಲಿ 1 ಕೋಟಿ ರೂಪಾಯಿ ಕೂಡ ಇಲ್ಲ!

...ಕಳೆದ ಒಂದೂಕಾಲು ವರ್ಷದಿಂದ ಗುತ್ತಿಗೆದಾರರ ಬಿಲ್ಲೇ ಪಾವತಿಯಾಗಿಲ್ಲ!

ವಿವಿಧ ಬ್ಯಾಂಕುಗಳಿಂದ ಪಾಲಿಕೆ ಪಡೆದ ಸಾವಿರಾರು ಕೋಟಿ ರೂಪಾಯಿಗಳ ಸಾಲಕ್ಕೆ ಬಡ್ಡಿಯನ್ನೆ ಕಟ್ಟಲಾಗುತ್ತಿಲ್ಲ.

ತಮ್ಮ ಬಿಲ್ಲು ಪಾವತಿ ಮಾಡಿ ಎಂದು ಗುತ್ತಿಗೆದಾರರು ಪಾಲಿಕೆ ಕಚೇರಿಯೆದುರು ಪ್ರತಿಭಟಿಸಿದರೆ ಮೇಯರ್ ಅಡ್ರೆಸ್ಸಿಗೇ ಇಲ್ಲ!

...150 ಕೋಟಿಯ ಮೇಯರ್ ಫಂಡಿನಲ್ಲೀಗ ನಯಾ ಪೈಸೆ ಉಳಿದಿಲ್ಲ!

...ಇನ್ನು ಬೇಸಿಗೆಯಲ್ಲಿ ನೀರು ಪೂರೈಸಬೇಕೆಂದರೆ ಪಾಲಿಕೆ ಮತ್ತೆ ಸಾಲ ಮಾಡಬೇಕೇ ಹೊರತು ಬೇರೆ ದಾರಿ ಇಲ್ಲ.


...ಇದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ...ರ್ಫ್ತ್ ಬಿಬಿಎಂಪಿಯ ಸದ್ಯದ ದುರ್ಗತಿ. ಮೊನ್ನೆ ...ರೆ ಮಾರ್ಚ್ 28 ರ ಸೋಮವಾರ ಎರಡು ...ರಕ್ಕೂ ಅಧಿಕ ಕಂಟ್ರಾಕ್ಟರುಗಳು ಪಾಲಿಕೆಗೆ ಮುತ್ತಿಗೆ ... ತಮ್ಮ ಬಿಲ್ ಪಾವತಿಸುವಂತೆ ಎದೆ ...ದುಕೊಂಡರೆ ಮೇಯರ್ ನಟರಾಜ್ ಅತ್ತ ತಲೆ ...ಲೇ ಇಲ್ಲ. ಈ ರೀತಿ ಗುತ್ತಿಗೆದಾರರಿಗೆ ಪಾಲಿಕೆ ...ತಿಸಬೇಕಾದ ಬಾಕಿ ಮೊತ್ತವೇ ಸಾವಿರದ ಐನೂರು ...ಟಿಗೂ ಅಧಿಕ. ತಲಾ ಗುತ್ತಿಗೆದಾರನಿಗೆ ಎರಡು ...ಟಿಯಿಂದ ಹಿಡಿದು ಐದು ಕೋಟಿ, ಹತ್ತು ಕೋಟಿಯ ... ಬಿಬಿಎಂಪಿ ಬಾಕಿ ಕೊಡಬೇಕು.

...ಕೇವಲ ಗುತ್ತಿಗೆದಾರರ ಬಾಕಿಯಷ್ಟೇ ಆಗಿದ್ದರೆ ಆ ...ು ಬೇರೆ. ಇದಕ್ಕಿಂತಲೂ ದೊಡ್ಡ ಮೊತ್ತದ ಸಾಲವನ್ನು ... ಬಿಬಿಎಂಪಿ ವಿವಿಧ ಬ್ಯಾಂಕುಗಳಿಂದ ಎತ್ತಿದೆ. ...ರ್ಪೊರೇಷನ್ ಬ್ಯಾಂಕಿನಿಂದ 300 ಕೋಟಿ, ಸಿಂಡಿಕೇಟ್ ...ಕಿನಿಂದ 380 ಕೋಟಿ, ಕೆನರಾ ಬ್ಯಾಂಕಿನಿಂದ ಸಾವಿರ ಕೋಟಿಗೂ ಅಧಿಕ; ಹೀಗೆ ಥರೇವಾರಿ ಬ್ಯಾಂಕುಗಳಿಂದ ಬಿಬಿಎಂಪಿ ಎತ್ತಿರುವ ಒಟ್ಟು ಸಾಲದ ಮೊತ್ತವೇ ಹತ್ತಿರ ಹತ್ತಿರ ನಾಲ್ಕು ಸಾವಿರ ಕೋಟಿ!

ಹಾಗಾದರೆ ನರ್ಮ್ ಯೋಜನೆಯಿಂದ ಬಂದ 22 ಸಾವಿರ ಕೋಟಿ ರೂಪಾಯಿಯ ಕತೆ ಏನಾಯಿತು? ಇಷ್ಟೆಲ್ಲಾ ದುಡ್ಡು ಪಾಲಿಕೆಗೆ ಹರಿದುಬಂದ ನಂತರವೂ ಬ್ಯಾಂಕ್ ಸಾಲ ತೀರಿಲ್ಲ ಎಂದು ಬಂದ ದುಡ್ಡು ಎಲ್ಲಿಗೆ ಹೋಯಿತು? ವರ್ಷವೊಂದಕ್ಕೆ ಈ ರೀತಿ ಬ್ಯಾಂಕುಗಳಿಂದ ಪಡೆದ ಸಾಲಕ್ಕೆಂದೇ ಪಾಲಿಕೆ ಇನ್ನೂರ ಐವತ್ತೆಂಟು ಕೋಟಿ ರೂಪಾಯಿಗಳಷ್ಟು ಬಡ್ಡಿ ಕಟ್ಟುತ್ತದೆಯೆಂದರೆ ಬಿಬಿಎಂಪಿಯ ದಿವಾಳಿಕೋರತನಕ್ಕೆ ಏನೆನ್ನಬೇಕು?

ಇದು ಬಿಜೆಪಿ ಅಧಿಕಾರಕ್ಕೆ ಬಂದ ನಂತರದ ಲೆಕ್ಕಾಚಾರ. ಮುಖ್ಯಮಂತ್ರಿ ಯಡಿಯೂರಪ್ಪನವರೇ ತಮ್ಮ ಭಾಷಣದಲ್ಲಿ ಬೆಂಗಳೂರಿನ ಅಭಿವೃದ್ಧಿಗೆ 22 ಸಾವಿರ ಕೋಟಿ ಮೀಸಲಿಟ್ಟಿದ್ದೇನೆ ಎಂದಿದ್ದರಲ್ಲ; ಅಷ್ಟೆಲ್ಲಾ ದುಡ್ಡಿದ್ದೂ ಪಾಲಿಕೆಗೇಕೆ ಇಂಥಾ ಗತಿ?


ಅಸಲಿಗೆ ಸಾವಿರಾರು ಕೋಟಿಯ ನರ್ಮ್ ದುಡ್ಡಿರುವುದು ನಿಜವಾದರೂ ಅದನ್ನು ಬಳಸಿಕೊಳ್ಳುವ ಶಕ್ತಿ ಪಾಲಿಕೆಗಿಲ್ಲ, ಬಹುಶಃ ಸರ್ಕಾರಕ್ಕೂ ಇದ್ದಂತಿಲ್ಲ. ನಮ್ಮ



ಯೋಜನೆಯ ಕಾಯ್ದೆ ಪ್ರಕಾರ ಯಾವುದೇ ನಗರಾಭಿವೃದ್ಧಿ ಯೋಜನೆಗೆಂದು ರಾಜ್ಯ ಸರ್ಕಾರಗಳು ನರ್ಮ್ ನಿಧಿಯನ್ನು ಬಳಸಿಕೊಳ್ಳಬೇಕೆಂದರೆ ಅದರ ಕಾಲುಭಾಗದಷ್ಟು ದುಡ್ಡನ್ನು ಮೊದಲೇ ಎತ್ತಿಡಬೇಕು. ರಾಜ್ಯ ಸರ್ಕಾರ ಶೇ. 25 ರಷ್ಟನ್ನು ಭರಿಸಿದರಷ್ಟೇ ಕೇಂದ್ರ ಉಳಿಕೆ ಶೇ. 75 ರಷ್ಟನ್ನು ಭರಿಸುತ್ತದೆ.

ಇಲ್ಲಿ ಪಾಲಿಕೆಯ ದುಸ್ಥಿತಿ ಎಂಥಾದ್ದೆಂದರೆ ನರ್ಮ್‌ನ ದುಡ್ಡು ದಕ್ಕಿಸಿಕೊಳ್ಳಲು ಅದರ ನಾಲ್ಕಾಣೆಯಷ್ಟನ್ನು ಭರಿಸುವಷ್ಟೂ ಶಕ್ತಿ ಇಲ್ಲ. ಹೀಗಾಗಿ ನರ್ಮ್‌ನ ಸಾವಿರಾರು ಕೋಟಿ ಬಳಕೆಯಾಗದೆ ಉಳಿದು ಬಿಟ್ಟಿದೆ. ಇನ್ನು ಗೆದ್ದ ಶಾಸಕರು, ಅವರ ಅಧಿಪತಿಗಳು, ಸರ್ಕಾರದ ಅಧಿನಾಯಕರು ದೋಚಬೇಕಲ್ಲ, ಅದಕ್ಕೆ ತಕ್ಕಂತೆ 2008-09 ನೇ ಸಾಲಿನಲ್ಲಿ ಮತ್ತು 2009-10 ನೇ ಸಾಲಿನಲ್ಲಿ ಪಾಲಿಕೆಗೆ ಚುನಾವಣೆಯಾಗದೇ ಶಾಸಕರ ಪ್ರಭುತ್ವವಿತ್ತಲ್ಲ, ಇದೇ ಸಮಯ ಕಾದು ಮೂರ್ನಾಲ್ಕು ಸಾವಿರ ಕೋಟಿಯ ಬೃಹತ್ ಕೊಳ್ಳೆಯೊಂದಕ್ಕೆ ಪಾಲಿಕೆ ಅಣಿಯಾಯಿತು.

ಅದು ಬೋಗಸ್ ಬಿಲ್ ದಂಧೆ. TVCC ಅಂದರೆ Technical vigilence co-ordination committee ನೀಡಿದ ವರದಿ ಪ್ರಕಾರ 2008-09 ಮತ್ತು 2009-10 ರ ಸಾಲಿನಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಬೋಗಸ್ ಬಿಲ್ ದಂಧೆಯ ಮೂಲಕ ಕಬಳಿಸಲಾಗಿದೆ. ತಾಂತ್ರಿಕ ತಪಾಸಣಾ ಸಮಿತಿಯೇ ಪತ್ತೆಹಚ್ಚಿದ ಒಂದು ಪ್ರಕರಣದಲ್ಲಿ 12 ಕೋಟಿಯಷ್ಟನ್ನು ಕಾಮಗಾರಿ ನಡೆಸದೆಯೇ ದೋಚಲಾಗಿತ್ತು. ಮತ್ತೊಂದು ಪ್ರಕರಣದಲ್ಲಿ 200 ಕೋಟಿಯಷ್ಟರಲ್ಲಿ ಕೇವಲ 50 ಕೋಟಿಯಷ್ಟನ್ನೇ ವ್ಯಯಿಸಿ ಉಳಿಕೆ 150 ಕೋಟಿಗೆ ಕಳ್ಳಬಿಲ್ಲು ಹಾಕಲಾಗಿತ್ತು. ಅಂದರೆ ಡಾಂಬರು ಹಾಕಿದ್ದಕ್ಕೇ ಮತ್ತೆ ಡಾಂಬರು ಹಾಕಿದಂತೆ, ಮೋರಿಯ ಹೂಳೆತ್ತಿದ್ದನ್ನೇ ಮತ್ತೆಮತ್ತೆ ಹೂಳೆತ್ತಿದಂತೆ ದಾಖಲೆ ಸೃಷ್ಟಿಸಲಾಗಿತ್ತು.



ನಟರಾಜ್

ಕಾಯ್ದೆ ಪ್ರಕಾರ ಬಜೆಟ್‌ನ ಮೊತ್ತಕ್ಕಿಂತ ಹೆಚ್ಚಿನ ದುಡ್ಡನ್ನು ವ್ಯಯಿಸುವಂತಿಲ್ಲ, ಹಾಗೊಮ್ಮೆ ವ್ಯಯಿಸಬೇಕೆಂದರೆ ಅದಕ್ಕೆ ಸರ್ಕಾರದ ಲಿಖಿತ ಆದೇಶ ಬೇಕು. ಹೀಗೆ ಸರ್ಕಾರದ ಆದೇಶ ಮತ್ತು ಬಜೆಟ್‌ನ ಮೊತ್ತದ ಶೇ. 25 ರಷ್ಟನ್ನು ಅಗತ್ಯಬಿದ್ದಲ್ಲಿ ಬ್ಯಾಂಕ್‌ನಿಂದ ಸಾಲ ಪಡೆಯಬಹುದು.

ಸುಬ್ರಹ್ಮಣ್ಯಂ ಪಾಲಿಕೆ ಕಮಿಶನರಾಗಿದ್ದಾಗ ಆಯಾ ಎಮ್ಮೆಲ್ಲೆಗಳ ಹೊಟ್ಟೆ ತುಂಬಿಸಲೆಂದೇ ಯಡ್ಡಿ ನಗರಾಭಿವೃದ್ಧಿ ಸಚಿವಾಲಯದ ಮೂಲಕ ಭ್ರಷ್ಟ ಅವಕಾಶವೊಂದನ್ನು ಕಲ್ಪಿಸಿಕೊಟ್ಟರು. ಅದು ಬಜೆಟ್ಟಿಗಿಂತಲೂ ಶೇ. 60 ರಷ್ಟು ಹೆಚ್ಚುವರಿ ಕಾಮಗಾರಿ ನಡೆಸಬಹುದೆಂಬ ಸರ್ಕಾರಿ ಆದೇಶ. ಇದೇ ಆದೇಶ ಹಿಡಿದ ಕಮಿಷನರ್ ಸುಬ್ರಹ್ಮಣ್ಯ ಬಜೆಟ್ಟಿನ ಅಂಕೆಯೇ ಇಲ್ಲದೆ ಸಾವಿರಾರು ಕೋಟಿ ರೂಪಾಯಿಗಳ ವರ್ಕ್‌ಕೋಡ್ ಮಂಜೂರು ಮಾಡಿಬಿಟ್ಟರು.

ಈ ರೀತಿ ಸುಬ್ರಹ್ಮಣ್ಯ ಮಂಜೂರು ಮಾಡಿದ ಬಹುತೇಕ ವರ್ಕ್‌ಕೋಡ್‌ಗಳು ಡಾಂಬರೀಕರಣ, ಮೋರಿ ಶಿಲ್ಟು, ಫುಟ್‌ಪಾತಿನ ಹಳೇ ಕಲ್ಲಿಗೆ ಬಿಲ್ಲು ಮಾದರಿಯ ರೊಕ್ಕ ನುಂಗುವ ಕಾಮಗಾರಿಗಳೆ. ಬೆಂಗಳೂರಿನ ಎಲ್ಲಾ ಬಿಜೆಪಿ ಶಾಸಕರಿಗೂ ಇದು ಯಡ್ಡಿ ಕಲ್ಪಿಸಿದ ದರೋಡೆಯ ಮಹಾಗೋಪಾಯವಾಗಿತ್ತು, ಇದು ಹೇಗೋ ಮಾಧ್ಯಮಗಳಿಗೆ ಗೊತ್ತಾಗಿ ಇನ್ನೇನು ರಾದ್ಧಾಂತವಾಗುತ್ತದೆ ಎನ್ನುವಾಗ ಮುಖ್ಯಮಂತ್ರಿ ಯಡ್ಡಿಯೇ ತಲೆ ಓಡಿಸಿ ಭರತ್ ಲಾಲ್ ಮೀನಾರನ್ನು ತಂದರು.

ಆದರೆ ಮೀನಾ ಕೂಡ ಸುಬ್ರಹ್ಮಣ್ಯರ ಕೋಡ್ ಕೈಚಳಕವನ್ನೇ ಮುಂದುವರಿಸಿದ್ದರು. ಮೀನಾ ಮತ್ತೆ ಒಂದೂವರೆ ಸಾವಿರ ಕೋಟಿಯಷ್ಟು ವರ್ಕ್‌ಕೋಡ್ ಕೊಟ್ಟರು. ಇಬ್ಬರೂ ಪಾಲಿಕೆ ಕಮಿಷನರ್‌ಗಳ ಒಟ್ಟು ವರ್ಕ್‌ಕೋಡ್ ಕೈಚಳಕದ ಫಲವಾಗಿ ರಾಜರಾಜೇಶ್ವರಿನಗರದ ಶಾಸಕ ಎಂ. ಶ್ರೀನಿವಾಸ್ ಒಬ್ಬರಿಗೇ 750 ಕೋಟಿ ರೂಪಾಯಿಗಳಷ್ಟು ಅನುದಾನ ಸಿಕ್ಕಂತಾಗಿತ್ತು, ದಾಸರಹಳ್ಳಿ ಶಾಸಕ ಮುನಿರಾಜು ತನ್ನ ಕ್ಷೇತ್ರಕ್ಕೊಂದು 700 ಕೋಟಿ ರೂಪಾಯಿ ಬಾಚಿಕೊಂಡರೆ, ಯಲಹಂಕ ಶಾಸಕ ವಿಶ್ವನಾಥ್ ಮತ್ತೆ 700 ಕೋಟಿ ದಕ್ಕಿಸಿಕೊಂಡಿದ್ದ, ಕೃಷ್ಣರಾಜಪುರದ ನಂದೀಶ್ ರೆಡ್ಡಿ 450 ಕೋಟಿ, ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ 325 ಕೋಟಿ, ಮಲ್ಲೇಶ್ವರಂ ಶಾಸಕ ಅಶ್ವತ್ಥನಾರಾಯಣ 400 ಕೋಟಿ, ಹೆಬ್ಬಾಳಕ್ಕೊಂದು ಕಟ್ಟಾ 600 ಕೋಟಿಯಷ್ಟು ವರ್ಕ್ ಕೋಡ್ ಗಿಟ್ಟಿಸಿದ್ದರು.

ಲೆಕ್ಕಕ್ಕಿದು ಸಾವಿರಾರು ಕೋಟಿಯ ಕಾಮಗಾರಿಯಾದರೂ ಹೇಳಿಕೊಳ್ಳುವಂಥ, ಜನ ಗುರುತಿಸುವಂಥ, ಕಣ್ಣಿಗೆ ಕಾಣುವಂಥ ಒಂದೇ ಒಂದು ಕಾಮಗಾರಿ ನಡೆಯಲಿಲ್ಲ, ಡಾಂಬರು ಹಾಕಿದ ರಸ್ತೆಗೇ ಮತ್ತೆ ಡಾಂಬರು ಹಾಕಿದಂತೆ, ಹೂಳೇ ಇಲ್ಲದ ಮೋರಿಗೆ ಮತ್ತೆ ಹೂಳೆತ್ತಿದಂತೆ, ಫುಟ್‌ಪಾತಿಗೆ ಮತ್ತೆ ಮತ್ತೆ ಹಳೇ ಕಲ್ಲನ್ನೇ ಜೋಡಿಸಿದಂತೆ ಕಳ್ಳ ಬಿಲ್ಲು ಹಾಕಲಾಯ್ತು, ಇನ್ನು ವಿಚಿತ್ರವೆಂದರೆ ಬಿಡಿಎ ಈಗಾಗಲೇ ಮುಗಿಸಿದ್ದ ಕಾಮಗಾರಿಗಳನ್ನೇ ಪಾಲಿಕೆ ವತಿಯಿಂದ ಮಾಡಿದಂತೆ ಬಿಲ್ಲು ಸೃಷ್ಟಿಸಲಾಯ್ತು.

ಚುನಾವಣೆ ನಡೆದು ಹೊಸ ಕೌನ್ಸಿಲರ್‌ಗಳು ಬರುವ ಹೊತ್ತಿಗೆ ಹಿಂದೆ ನಡೆದಿದ್ದ ಕಾಮಗಾರಿಗಳ ಲೆಕ್ಕದಲ್ಲೇ ಸಾವಿರಾರು ಕೋಟಿಯ ಬಿಲ್ಲು ಬಾಕಿಯಿದ್ದು ಇನ್ನು ಮೇಯರ್ ನಟರಾಜ್ ತಾನೇ ಏನು ಮಾಡಲು ಸಾಧ್ಯ? ಹೇಗೂ ಬ್ಯಾಂಕಿನಿಂದ ಸಾಲ ಎತ್ತಬೇಕಲ್ಲ, ಅದಕ್ಕೊಂದು ಬಜೆಟ್ಟಿನ ಮೊತ್ತ ಏರಿಸಿಬಿಟ್ಟರು. ಇದು ಎಂಥಾ ಗೋಲ್‌ಮಾಲ್ ಬಜೆಟ್ಟಾಗಿತ್ತೆಂದರೆ ಪಾಲಿಕೆಯಲ್ಲಿ ದುಡ್ಡೇ ಇಲ್ಲದಿದ್ದರೂ 8 ಸಾವಿರ 400 ಕೋಟಿಯ ಬಜೆಟ್ಟೆಂದು ಕಳ್ಳ ಲೆಕ್ಕ ತೋರಿಸಿದ್ದರು. ಏಕೆಂದರೆ ಬಜೆಟ್ಟಿನ ಶೇ. 25 ರಷ್ಟು ಸಾಲವನ್ನಷ್ಟೇ ಮಾಡಬೇಕೆಂಬುದು ಕಾನೂನು.

ಶೇ. 25 ರಷ್ಟು ಸಾಲ ಮಾಡಿ ಸಾಧ್ಯವಾದಷ್ಟು ದೊಡ್ಡ ಮೊತ್ತದ ನಿಧಿ ಗಿಟ್ಟಿಸಬೇಕೆಂದರೆ ಬಜೆಟ್ ಮೊತ್ತವನ್ನು ತಾನೇ ಏರಿಸಬೇಕು?

ಯಾವುದೇ ಆದಾಯವಿಲ್ಲದೆ, ಸಂಪನ್ಮೂಲದ ಲಭ್ಯತೆಯಿಲ್ಲದೇ 8400 ಕೋಟಿಯ ಬಜೆಟ್ ಸೃಷ್ಟಿಸಿ ಅದಕ್ಕೆ ಮುಖ್ಯಮಂತ್ರಿಗಳು ಸರ್ಕಾರದಿಂದ ಕೊಡುತ್ತೇನೆಂದು ಭರವಸೆ ಕೊಟ್ಟಿದ್ದ 1300 ಕೋಟಿಯ ಲೆಕ್ಕವನ್ನು ಸೇರಿಸಿ ಸರಿಸುಮಾರು 10 ಸಾವಿರ ಕೋಟಿಯ ಲೆಕ್ಕ ತೋರಿಸಿ ಅದರ ಶೇ. 25 ರಷ್ಟು ಸಾಲವೆಂದರೆ ಅದೇ 2500 ಕೋಟಿಯಾಗುತ್ತದೆ. ಇಲ್ಲಿ ಬ್ಯಾಂಕ್ ಸಾಲವಾಗಿ ಕೊಡುವ 2500 ಕೋಟಿಯಷ್ಟೇ ಗಟ್ಟಿಯೆ ಹೊರತು ಬಜೆಟ್ ಮೊತ್ತವಾದ 8400 ಕೋಟಿಯೇನಿದ್ದರೂ ಕೇವಲ ಕಾಲ್ಪನಿಕ.

ಬ್ಯಾಂಕುಗಳೇನೋ ಸಾಲ ಕೊಟ್ಟವಾದರೂ ಮುಖ್ಯಮಂತ್ರಿಗಳು ಕೊಡುತ್ತೇನೆಂದಿದ್ದ 1300 ಕೋಟಿಯಲ್ಲಿ ನಯಾಪೈಸೆ ಕೂಡ ಬರಲಿಲ್ಲ, ಮೊದಲೇ ಗುತ್ತಿಗೆದಾರರಿಗೆಂದು ಮೂರ್ನಾಲ್ಕು ಸಾವಿರ ಕೋಟಿಯ ಬಿಲ್ ಬೇರೆ ಬಾಕಿಯಿತ್ತು, ಈಗ ಬ್ಯಾಂಕ್‌ನಿಂದ ಪಡೆದ ಸಾಲದಲ್ಲಿ ಮೇಯರ್ ಫಂಡಿನ ನೂರೈವತ್ತು ಕೋಟಿ, ಉಪ ಮೇಯರ್‌ನ ನಿಧಿಯಿಂದು

▶▶ 7

ವಿರೋಧಿ ನಾಯಕ ನಾಗರಾಜ್ ಛಾಲೆಂಜ್

ನನ್ನ ಆರೋಪ ಸುಳ್ಳಾದ್ರೆ ರಾಜಕೀಯದಿಂದಲೇ ನಿವೃತ್ತಿಯಾಗ್ತೀನಿ...!

ಪಾಲಿಕೆಯ ವಿರೋಧ ಪಕ್ಷದ ನಾಯಕ ಕುರುಬರಹಳ್ಳಿ ನಾಗರಾಜ್ ...ರುವಿನಿಂದಲೂ ಬೋಗಸ್ ಬಿಲ್ ದಂಧೆ ವಿರುದ್ಧ ಬೊಬ್ಬೆ ಹಾಕುತ್ತಲೇ ...ಂದರು. ಅಧಿಕಾರಸ್ಥ ಬಿಜೆಪಿಯವರು ನಾಗರಾಜ್ ಕಾರಣವಿಲ್ಲದೇ ...ಚಾರದ ಆರೋಪ ಮಾಡುತ್ತಿದ್ದಾರೆಂದೇ ಹೀಯಾಳಿಸಿದರು. ಈಗ ...ಲಿಕೆ ಆಯುಕ್ತರೇ ಬಹಿರಂಗವಾಗಿ ಪಾಲಿಕೆಯು ದಿವಾಳಿಯಾಗಿದ್ದನ್ನು ...ಘೋಷಿಸಿದ ಮೇಲೆ ನಾಗರಾಜ್ ಹೋರಾಟಕ್ಕೆ ಅರ್ಥ ಬಂದಂತಾಗಿದೆ. ...ದನ್ನು ನಾಗರಾಜ್ ತಮ್ಮದೇ ದಾಟಿಯಲ್ಲಿ ಬಿಚ್ಚಿಡುವ ರೀತಿಯಿದು.

...... ನಾನು ಕಾಟಾಚಾರಕ್ಕೆ ಆರೋಪ ಮಾಡ್ತೀನಿ ಅಂತ ತಾನೇ ...ಜೆಪಿಯವ್ರು ಹೇಳುತ್ತಾ ಬಂದದ್ದು? ಈಗ ನೋಡಿ ಪಾಲಿಕೆ ಕಮೀಷನರೇ ...ನ್ನ ಮಾತನ್ನು ಸಮರ್ಥಿಸುತ್ತಿದ್ದಾರೆ. ನಾನು ದಾಖಲೆ ಇಟ್ಟೇ ಮಾತಾಡಿದ್ದೆ, ...ಜೇಕಾದ್ರೆ ಲೋಕಾಯುಕ್ತ ತನಿಖೆಗೆ ಒತ್ತಾಯ ಮಾಡಿದ್ದೆ, ಈಗಲೂ ಅಷ್ಟೇ; ...ತ್ತೆ ಹೇಳ್ತಾ ಇದ್ದೀನಿ ಏನು ಬೋಗಸ್ ಬಿಲ್ ಹಗರಣ ನಡೆದಿದೆಯೋ ಈ ಬಗ್ಗೆ ಲೋಕಾಯುಕ್ತ ತನಿಖೆಯಾಗಲಿ. ಸುಬ್ರಹ್ಮಣ್ಯಂ ಪಾಲಿಕೆಗೆ ಬಂದ ನಂತರ ಮತ್ತು ಆನಂತರ ಭರತ್‌ಲಾಲ್ ಮೀನಾ ಪಾಸ್ ಮಾಡಿದ ಟೆಂಡರ್‌ಗಳ ಬಗ್ಗೆ ಈಗಲಾದರೂ ಲೋಕಾಯುಕ್ತ ತನಿಖೆಯಾಗಲಿ. ಬೆಂಗಳೂರಿನ ಬಹುತೇಕ ಬಿಜೆಪಿ ಶಾಸಕರು ಮತ್ತು ಮಂತ್ರಿಗಳೇ ಇವತ್ತು ಪಾಲಿಕೆಯನ್ನು ದಿವಾಳಿಯೆಬ್ಬಿಸಿದ ಅಸಲೀ ಅಪರಾಧಿಗಳು.

ನಾನಿದನ್ನು ರಾಜಕೀಯವಾಗಿ ಹೇಳ್ತಿದ್ದೀನಿ ಅನ್ನೋದೇ ಆದ್ರೆ ಮೊದಲು ನಮ್ಮದೇ ಪಕ್ಷದ ಶಾಸಕರಿರುವ ಮಹಾಲಕ್ಷ್ಮಿ ಲೇಔಟ್ ಕ್ಷೇತ್ರದ ಕಾಮಗಾರಿಗಳ ಬಗ್ಗೆ ಲೋಕಾಯುಕ್ತ ತನಿಖೆಯಾಗಲಿ. ಆನಂತರವೇ ಬೆಂಗಳೂರಿನ ಬಿಜೆಪಿ ಶಾಸಕರ ಕ್ಷೇತ್ರಗಳಲ್ಲಿ ನಡೆದಿರುವ ಹಗರಣಗಳ ಕುರಿತು ತನಿಖೆ ನಡೆಯಲಿ. ಕೆಟಿಟಿಪಿ ಕಾಯ್ದೆ ಪ್ರಕಾರ ಟೆಂಡರ್ ನಡೆದೇ ಇಲ್ಲ, ವಿರೋಧ ಪಕ್ಷದ ಶಾಸಕರ ಕ್ಷೇತ್ರಗಳಿಗೆ ನೂರೋ ಐವತ್ತೋ ಕೋಟಿಯ ಪುಡಿಕಾಸಿನ ಅನುದಾನ ಕೊಟ್ಟು, ಅದೇ ಬಿಜೆಪಿ ಶಾಸಕರ ಕ್ಷೇತ್ರಕ್ಕೆ ಮುನ್ನೂರರಿಂದ ಏಳುನೂರು ಕೋಟಿ ರೂಪಾಯಿಗಳ ತನಕ ಮಂಜೂರು ಮಾಡಿದ್ದಾರೆ. ಇದರರ್ಥ ಬಿಜೆಪಿ ಶಾಸಕರಿಗೆ ದುಡ್ಡು ದೋಚಲು ಅನುಕೂಲವಾಗಲಿ ಎಂದೇ ತಾನೆ?



ಇದರ ಪರಿಣಾಮವೇನು ಗೊತ್ತೆ? ಬೆಂಗಳೂರಿನ ಪ್ರತಿಯೊಬ್ಬ ಬಿಜೆಪಿ ಶಾಸಕನೂ ಇವತ್ತು ಕೋಟ್ಯಾಧಿಪತಿ. ಮಂತ್ರಿಗಳು ಮಿಲಿಯನೇರ್‌ಗಳಾಗಿದ್ದಾರೆ. ಎಮ್ಮೆಲ್ಲೇ-ಮಂತ್ರಿಗಳಿಗೆ ಕಳ್ಳಬಿಲ್ಲು ಬರೆದು ಕೋಟಿಕೋಟಿ ದೋಚಿದ್ದಾರೆ. ಹತ್ತು ಕೋಟಿಯ ಬಿಲ್ಲು ಹಾಕಿದ ಜಾಗದಲ್ಲಿ ವಾಸ್ತವವಾಗಿ ಕೆಲಸ ಆಗಿರುವುದು ಕೇವಲ ಒಂದು ಕೋಟಿ ಮಾತ್ರ. ಮಿಕ್ಕ ಒಂಭತ್ತು ಕೋಟಿಯನ್ನು ಇಂಜಿನಿಯರ್‌ಗಳು, ಅಧಿಕಾರಿಗಳು, ಶಾಸಕರು, ಮಂತ್ರಿಗಳು ಸೇರಿ ನುಂಗಿ ನೀರು ಕುಡಿದಿದ್ದಾರೆ. ಇದನ್ನೇ ಲೋಕಾಯುಕ್ತ ತನಿಖೆ ಮಾಡಬೇಕು. ಹಾಗೊಮ್ಮೆ ಲೋಕಾಯುಕ್ತ ತನಿಖೆಯಲ್ಲೇನಾದರೂ ಭ್ರಷ್ಟಾಚಾರ ನಡೆದಿಲ್ಲ ಎಂದು ಸಾಬೀತಾದರೆ ನಾನು ರಾಜಕೀಯದಿಂದಲೇ ನಿವೃತ್ತಿಯಾಗ್ತೀನಿ.


ಸಾಬೀತಾದರೆ ಏನು ಮಾಡ್ತೀರಿ? ಇದು ಬಿಜೆಪಿ ಸರ್ಕಾರಕ್ಕೆ ನನ್ನ ಬಹಿರಂಗ ಸವಾಲು. ಈಗಲಾದರೂ ಮುಖ್ಯಮಂತ್ರಿಗಳು ಲೋಕಾಯುಕ್ತ ತನಿಖೆಗೆ ಆದೇಶಿಸುತ್ತಾರಾ? ತಾಕತ್ತಿದೆಯಾ?

ಇದು ಪಾಲಿಕೆ ವಿರೋಧಿ ನಾಯಕ ನಾಗರಾಜ್ ಹಾಕುವ ಬಹಿರಂಗ ಸವಾಲು. ಉತ್ತರಿಸುವವರ್ಯಾರು?

ಬಾದಾಮಿ: ಸಮ್ಮೇಳನದ ನೆಪದಲ್ಲಿ ಕೇಸರಿ ಕಥಕ್ಕಳಿ!


ಬಿಜೆಪಿ ದರ್ಬಾರಿನಲ್ಲಿ ಶವಸಂಸ್ಕಾರ ನಡೆದರೂ ಕೇಸರಿ ಮಯವಾಗಿ ಸಮಾಪ್ತಿ ಹೊಂದುವಂಥ ಸನ್ನಿವೇಶ ನಿರ್ಮಾಣವಾಗಿದೆ. ಸಕಲ ಸರ್ಕಾರಿ ಕಾರ್ಯಕ್ರಮಗಳೂ ಇಂಥ ಕೇಸರಿ ಕಾಯಿಲೆಗೆ ಸಿಕ್ಕು ನರಳಿರುವುದು ಕಣ್ಣೆದುರಿನ ಸತ್ಯ. ದುರಂತವೆಂದರೆ, ಇತ್ತೀಚೆಗೆ ಅಕ್ಷರದ ಘಮವನ್ನು ಪಸರಿಸಬೇಕಿರುವ ಸಾಹಿತ್ಯ ಸಂಬಂಧಿ ಸಮಾರಂಭಗಳೂ ಅದಕ್ಕೆ ತುತ್ತಾಗುತ್ತಿವೆ. ಬಾದಾಮಿಯಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನವೂ ಕೇಸರಿಯಲ್ಲಿ ಮುಳುಗೆದ್ದು ಮುಗಿದುಹೋಗಿದೆ.

ಬಾದಾಮಿ ಸೀಮೆಯಲ್ಲಿ ಹೇಳಿಕೇಳಿ ಬಣಜಿಗ ಲಿಂಗಾಯತರದ್ದೇ ಕಾರುಬಾರು. ಇಲ್ಲಿ ಸಹಜವಾಗಿಯೇ ಬಿಜೆಪಿ ದಂಡಪಿಂಡ ಮಹಾಗುಂಡಪ್ಪನೆಂಬ ಕಟ್ಟಾ ಬಣಜಿಗ ಶಾಸಕನಾಗಿದ್ದಾನೆ. ತನ್ನ ತಲೆ, ಅಧಿಕಾರ ಸೇರಿದಂತೆ ಸಕಲವನ್ನೂ ತನ್ನ ಹೆಂಡತಿ ಶಾಂತಾಬಾಯಿಯ ಪದತಲದಲ್ಲಿಟ್ಟಿರುವ ಈತ ಪಕ್ಕಾ ನಾಲಾಯಕ್ ಆಸಾಮಿ. ಶಾಂತಾಬಾಯಿ ಯಾವ ಪರಿ ಡೀಲಿಗಿಳಿದಿದ್ದಾಳೆಂದರೆ, ತನ್ನ ಸುತ್ತ ಬಕೀಟು ಅಧಿಕಾರಿಗಳದ್ದೊಂದು ದಂಡು ಕಟ್ಟಿಕೊಂಡಿದ್ದಾಳೆ. ಸದಾ ಯಾವುದರಲ್ಲಿ ಮೇಯಬಹುದೆಂಬ ಅಂದಾಜಿನಲ್ಲಿರುವ ಈ ದುಷ್ಟಕೂಟ ಮೊನ್ನೆ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಭರ್ಜರಿ ಉಂಡು ತೇಗಿದೆ.


ಮಹೇಶ್ ಕಾಜರ್ಕಿ


ಶಾಸಕ ಪಟ್ಟಣಶೆಟ್ಟಿ ಬಾದಾಮಿಯಲ್ಲೇ ಸಮ್ಮೇಳನ ನಡೆಸಬೇಕೆಂದು ಪಟ್ಟು ಹಿಡಿದಾಗ, ಅದಕ್ಕೆ ಕೆಲ ಅಧಿಕಾರಿಗಳು ಸಾಥ್ ನೀಡಿದಾಗ ಮತ್ತು ಅದು ಬಾದಾಮಿಯಲ್ಲೇ ನಡೆಯುತ್ತದೆಂದು ಖಾತ್ರಿಯಾದಾಗ ಸಾಹಿತ್ಯಾಸಕ್ತರು ವಿಪರೀತ ಸಂಭ್ರಮಿಸಿದ್ದರು. ಆದರೆ ಇಲ್ಲಿನ ತಹಶೀಲ್ದಾರ್ ಮಹೇಶ್ ಕರ್ಜಗಿ ಸಖತ್ತಾಗಿ ಕಮಾಯಿಸಬಹುದೆಂದು ಶಾಂತಾಬಾಯಿಯ ತಲೆ ತುಂಬಿದ್ದ. ತಕ್ಷಣ ಅಖಾಡಕ್ಕಿಳಿದ ಶಾಂತಾಬಾಯಿಗೆ ಪೊಲೀಸ್ ಇನ್ಸ್‌ಪೆಕ್ಟರ್ ಡಿ.ಡಿ. ಧೂಳಖೇಡನೆಂಬ ಮುಖೇಡಿಯೂ ಸಾಥ್ ನೀಡಿದ್ದ.

ತದನಂತರ ಶುರುವಾದದ್ದು ಪಕ್ಕಾ ವಸೂಲಿ ಕೈಂಕರ್ಯ. ಬಾದಾಮಿ ತಾಲೂಕು ಕಸಾಪ ಅಧ್ಯಕ್ಷ ವೆಂಕಟೇಶ್-ಇನಾಂದಾರನ ಸಾರಥ್ಯದಲ್ಲಿ ಒಂದಿಡೀ ದುಷ್ಟಕೂಟ ಸಾಹಿತಿಗಳ ಹೆಸರಲ್ಲಿ ಎತ್ತುವಳಿ ಶುರುವಿಟ್ಟಿತು. ಇನ್ನು ತಹಶೀಲ್ದಾರ್ ಕರ್ಜಗಿ ವೀರಾವೇಶದಿಂದ ಅಕ್ರಮ ದಂಧೆಗಳ ಅಂಗಳಕ್ಕಿಳಿದು ರಾಜಾರೋಷವಾಗಿ ಹಣ ಸಂಗ್ರಹಿಸಿದ. ಗ್ರಾನೈಟ್ ದಂಧೆ, ಅಕ್ರಮ ಕೆರೋಸಿನ್ ಉಸುಕಿನ ವ್ಯವಹಾರಗಳಿಂದೆಲ್ಲ ಹಣ ಪೀಕಿ ಬೀದಿ ವ್ಯಾಪಾರಿಗಳನ್ನೂ ಬಿಡದೆ ಗೆಬರಿದ. ಜೊತೆಗೆ ಈತನ ಚೇಲಾ ಪಡೆಯೂ ಮನಬಂದಂತೆ ಸಾಹಿತ್ಯ ಸೇವೆಯಲ್ಲಿ ನಿರತವಾಗಿ ಜೇಬು ತುಂಬಿಸಿಕೊಂಡು ನಿಟ್ಟುಸಿರಿಟ್ಟಿತು. ಜಿಲ್ಲಾ ಕಸಾಪ ಅಧ್ಯಕ್ಷ ಕೋಟಿಯೆಂಬ ನಿವೃತ್ತ ಶಿಕ್ಷಕನೂ ಸಾಹಿತ್ಯದ ನೆಪದಲ್ಲಿ ಒಂದಷ್ಟು ಕೊಬ್ಬಿದ.


ಪಟ್ಟಣ ಶೆಟ್ಟಿ

ಬಾದಾಮಿ ಪಟ್ಟಣದ ಪ್ರಮುಖ ವರ್ತಕನಾಗಿರುವ ಎಸಿ ಪಟ್ಟಣದ ಎಂಬ ಐನಾತಿಯಂತೂ ಸಾಹಿತ್ಯದ ಗಂಧ ಗಾಳಿಯಿಲ್ಲದಿದ್ದರೂ ಆ ನೆಪದಲ್ಲೇ ಕಮಾಯಿ ನಡೆಸಿದ್ದಾನೆ. ಶಾಸಕನ ಸಂಬಂಧಿಯಾದ ಈತ ಊಟವೂ ಸೇರಿದಂತೆ ಯಾವ್ಯಾವುದಕ್ಕೆ ಏನೇ ಐಟಮ್ಮುಗಳು ಬೇಕಿದ್ದರೂ ತನ್ನ ಅಂಗಡಿಯಲ್ಲೇ ಖರೀದಿಸಬೇಕೆಂದು ಫತ್ವಾ ಹೊರಡಿಸಿದ. ಯೋಗ್ಯತೆಯೇ ಇಲ್ಲದಿದ್ದರೂ ಸಮ್ಮೇಳನ ಸಂದರ್ಭದಲ್ಲಿ ಖಜಾಂಚಿಯಾಗಿ ಮೆರೆದ ಪಟ್ಟಣದ ತನ್ನ ಒಡೆತನದ ಕಾಲೇಜು ಆವರಣದಲ್ಲೇ ಸಭೆ ನಡೆಯುವಂತೆಯೂ ನೋಡಿಕೊಂಡ. ಉಸಿರೆತ್ತುವ ಧಮ್ಮು ಯಾವೊಬ್ಬನಿಗೂ ಇಲ್ಲದಂತಾಗಿದ್ದು ಮಾತ್ರ ವಿಪರ್ಯಾಸ.

ಇದೆಲ್ಲಾ ಹಾಳುಬಿದ್ದೋಗಲಿ, ಸಮ್ಮೇಳನವಾದರೂ ನೆಟ್ಟಗೆ ನಡೆಯಿತಾ ಅಂತ ನೋಡಹೋದರೆ ಅಲ್ಲಿ ನಡೆದದ್ದು ಕೇಸರೀಕರಣದ ಭರಾಟೆ ಮತ್ತು ಶಾಸಕನ ಹೆಂಡತಿ ಶಾಂತಾಬಾಯಿಯ ಮಿಂಚಿಂಗು. ಇದರೊಂದಿಗೆ ಸ್ವಯಂಘೋಷಿತ ಪ್ರಖ್ಯಾತ ಸಾಹಿತಿಗಳಾದ ಆರ್. ಬಿ. ಸಂತನಾಳ, ನರಸಾಪುರ, ಚಂದ್ರಕಾಂತ ತಾಳಿಕೋಟಿಯೆಂಬ ಶಿಕ್ಷಕನೂ ಸೇರಿದಂತೆ ಒಂದು ದಂಡು ಅಬ್ಬೇಪಾರಿಗಳು ನೆರೆದು, ಅನ್ನದಾತ ಶಾಸಕನನ್ನು ಹೀನಾಮಾನ ಹೊಗಳಿ ಕಾರ್ಯಕ್ರಮಕ್ಕೊಂದು ಬಕೀಟುಗಿರಿಯ ರಂಗು ಮತ್ತು ಕೇಸರೀ ವರ್ಣದ ತಿದಿಯೊತ್ತಿ ಕೃತಾರ್ಥರಾದರು.


ವೆಂಕಟೇಶ್ ...ದಾರ

ಒಟ್ಟಾರೆಯಾಗಿ ಇದೀ ಸಮ್ಮೇಳನ ಶಾಸಕ ಮತ್ತವನ ಚೇಲಾಪಡೆಯ ಸ್ವಯಂ ವಿಜೃಂಭಣೆಗೆಂದೇ ಮೀಸಲಿಟ್ಟಂತಾಗಿತ್ತು, ಬಿಜೆಪಿ ಹೊರತುಪಡಿಸಿದರೆ ಬೇರ್‍ಯಾವ ಪಕ್ಷಗಳ ಮುಖಂಡರ ಮುಖಗಳೂ ಕಾಣಿಸುವಂತಿರಲಿಲ್ಲ, ಗುಳೇದಗುಡ್ಡದ ಭಾಗದವರಾದ ಕಂದಗಲ್ ಹನುಮಂತ ರಾಯರು ಕರ್ನಾಟಕದ ಶೇಕ್ಸ್‌ಪಿಯರ್ ಅಂತಲೇ ಹೆಸರಾಗಿದ್ದವರು. ಇವರನ್ನು ಕಿಂಚಿತ್ತೂ ನೆನೆಸಿಕೊಂಡಿಲ್ಲ. ನಾಟಕಕಾರ ಎಚ್.ಆರ್. ಭಸ್ಮೆ ಹಾಗೂ ಅಶೋಕ ಸಮಗುಂಡಿಯವರದ್ದೂ ಇದೇ ಕಥೆ. ಇನ್ನುಳಿದಂತೆ ಇಲ್ಲಿಯವರೇ ಆದ ಶಿಶು ಸಾಹಿತಿ ಟಿ.ಜಿ. ಚಿತ್ರಗಾರ, ಛಾಯಾಗ್ರಾಹಕ-ಸಾಹಿತಿ ಹಡಪದರನ್ನು ಕಡೆಗಣಿಸಲಾಗಿದೆ. ಈ ಬಗ್ಗೆ ಯಾವೊಬ್ಬ ಸಾಹಿತಿಗಳೂ ಸಾಹಿತ್ಯಾಸಕ್ತರೂ ಸೊಲ್ಲೆತ್ತದಿರುವುದು ಸಕಲ ಸಂವೇದನೆಗಳೂ ಸರ್ಕಾರಕ್ಕೆ ಋಣಿಯಾಗಿರುವುದರ ಸಂಕೇತ.

ಇಂಥ ಸಮ್ಮೇಳನಗಳಿಂದ ಏನನ್ನು ಸಾಧಿಸಿದಂತಾಗುತ್ತದೆ? ಸಾಹಿತ್ಯದ ಕಾರ್ಯಕ್ರಮವನ್ನು ಸರ್ಕಾರಿಮಯ ಮಾಡುವುದು ಎಷ್ಟು ಸರಿ? ಅಷ್ಟಕ್ಕೂ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಬಲ್ಲಂಥ ಛಾತಿ ಇರುವವರು ಈ ಭಾಗ ಸಾಹಿತ್ಯ ವಲಯದಲ್ಲಿ ಯಾರೂ ಇಲ್ಲವೇ? ಎಂಬುದು ಮುಖ್ಯ ಪ್ರಶ್ನೆ.

ಶಾಸಕನ ಪಟಾಲಂ ಎಷ್ಟು ಹಣ ಎತ್ತಿತ್ತು, ಯಾರ್‍ಯಾರು ನುಂಗಿದರೆಂಬುದು ಅದಕ್ಕಿಂತಲೂ ಮುಖ್ಯವಾದ ಪ್ರಶ್ನೆ. ಉತ್ತರಿಸೋರ್‍ಯಾರು?

• ಮೇಘರಾಜ್

▶▶ 3 ರೇವತಿ ಎಂಬ ತಂಗಿಯ ಆತ್ಮಕಥನ

'ಸ್ವಾಮಿ ಬಿಟ್ಬಿಡಿ, ನಾನು ಹೆಂಗಸಲ್ಲ, ಪೊಟೈ. ಹೊಟ್ಟೆಪಾಡಿಗೆ ಈ ಕೆಲಸ ಮಾಡ್ತಿದೀನಿ, ದಯವಿಟ್ಟು ಬಿಟ್ಬಿಡಿ!' ಎಂದು ಕೈ ಮುಗಿದೆ. ಅದಕ್ಕೆ ಆತ ಕನ್ನಡದಲ್ಲಿ 'ಹೋ ನೀನು ಖೋಜಾನಾ? ಆದ್ರೆ ಹಾಗೆ ಕಾಣಲ್ಲ?!' ಎಂದ.

'ನಾನು ಹೇಳ್ತಿರೋದು ನಿಜಾ ಸಾರ್' ಎಂದೆ.

'ಸರಿಸರಿ, ನಿನ್ನ ಹತ್ರ ಏನಿದೆಯೋ ಅದನ್ನೆಲ್ಲ ಕೊಡು' ಎಂದು ಹೇಳಿ, ನನ್ನ ಪರ್ಸ್‌ನೆಲ್ಲ ನೋಡಿ ಅದರಲ್ಲಿದ್ದ 250 ರೂಪಾಯಿಯನ್ನು ತಗೊಂಡ. ಅದೂ ಸಾಲದು ಅಂತ ನನ್ನ ಕುತ್ತಿಗೆಯಲ್ಲಿದ್ದ ತಾಮ್ರದ ಸರವನ್ನು ಚಿನ್ನದ್ದು ಅಂದ್ಕೊಂಡು ಕಿತ್ಕೊಂಡ. ಕೈನಲ್ಲಿದ್ದ ಬಳೇನು ತೆಗಿ ಅಂದ. ಅದು ತಾಮ್ರದ್ದು ಅಂತ ಹೇಳಿದರೂ ಬೆಂಕಿಕಡ್ಡಿ ಗೀರಿ ನೋಡಿ ಪರೀಕ್ಷೆ ಮಾಡಿದ. ನಂತರ ಆ ಕತ್ತಲಲ್ಲಿ ಗೊತ್ತಿಲ್ಲದ ಜಾಗದಲ್ಲಿ ನನ್ನನ್ನು ಬಿಟ್ಟು ಅವನು ಹೊರಟುಹೋದ.

ಎಲ್ಲಾನೂ ಕಿತ್ಕೊಂಡಿದ್ದೂ ಅಲ್ಲದೆ, ಒಬ್ಬಳನ್ನೇ ಬಿಟ್ಟು ಹೋಗಿದ್ದಕ್ಕೆ ಅವನಿಗೆ ಆಗಬಾರದ್ದು ಆಗಲಿ, ಅವನ ಮನೇಲಿ ಪೊಟೈ ಹುಟ್ಟಲಿ ಅಂತ ಶಾಪ ಹಾಕಿದೆ..."

ಇನ್ನೊಂದು ಪ್ರಕರಣ ಹೀಗಿದೆ:

"ಗಣೇಶ ಹಬ್ಬದ ಸಂದರ್ಭದಲ್ಲಿ ಸೆಕ್ಸ್‌ವರ್ಕ್‌ನಿಂದ ನನಗೆ ಸ್ವಲ್ಪ ಬಿಡುವು ಸಿಗೋದು. ಆ ಸಂದರ್ಭದಲ್ಲಿ ಹಳ್ಳಿಗಳು ಮತ್ತು ಸಣ್ಣ ಪಟ್ಟಣಗಳಲ್ಲಿ ಜರುಗುವ ಮದುವೆ ಮತ್ತು ದೇವಸ್ಥಾನದ ಉತ್ಸವಗಳಲ್ಲಿ ಡ್ಯಾನ್ಸ್ ಮಾಡಲು ಹೋಗುತ್ತಿದ್ದವು.

ಹಳ್ಳಿಯ ಹಿರಿಯರು ಬಂದು ನಮ್ಮನ್ನು ನೋಡಿ ಯಾರು ಈ ವರ್ಷ ಡ್ಯಾನ್ಸ್ ಮಾಡಬೇಕೆಂಬುದನ್ನು ಆಯ್ಕೆ ಮಾಡುತ್ತಿದ್ದರು. 'ನೋಡಿ ಎಷ್ಟ್ ಚೆನ್ನಾಗಿದ್ದಾಳೆ. ಬೇರೆಯವರ ತರ ಅಲ್ಲ ಅವಳು. ಅವಳನ್ನು ನಿಮ್ಮ ಹಳ್ಳಿಗೆ ಡ್ಯಾನ್ಸ್ ಮಾಡೋಕೆ ಕರೆಸಬೇಕೆಂದರೆ ಚೆನ್ನಾಗಿ ದುಡ್ ಕೊಡ್ಬೇಕು. ಸುಲಭ ಅಲ್ಲ!' ಅಂದು ಗುರು ನನ್ನನ್ನು ಪ್ರದರ್ಶಿಸಿದರು.

'ಒಹೋಹೋ, ನಿನ್ನ ಹತ್ರ ಊರ್ವಶಿ, ರಂಭೆಯರಿದಾರಾ? ಮೊಲೆಗಳಿದಾವ ಅವಳಿಗೆ ಅಥವಾ ಹತ್ತಿ ತುಂಬ್ಕೋಬೇಕಾ?'

'ಇಲ್ಲ ಇಲ್ಲ, ನಿಜವಾದ್ದು. ಬೇಕೆಂದರೆ ನೀವೇ ಪರೀಕ್ಷೆ ಮಾಡ್ಕೊಳ್ಳಿ' ಎಂದು ಹೇಳಿ ನನ್ನ ಮೊಲೆಗಳನ್ನು ತೋರಿಸು ಎನ್ನುತ್ತಿದ್ದರು ನನ್ನ ಗುರು. ಆ ನಂತರವೇ ರೇಟನ್ನು ಕುದುರಿಸುತ್ತಿದ್ದರು. ಎಲ್ಲ ಮಾರ್ಕೆಟ್‌ನಲ್ಲಿ ತರಕಾರಿ ಖರೀದಿ ಮಾಡಿದ ಹಾಗೆ. ತರಕಾರಿಯನ್ನ ತಗೋಳೋಕೆ ಮುಂಚೆ ಜಿಗುಟಿ, ಹಿಚುಕಿ, ಗುಣಮಟ್ಟ ಪರೀಕ್ಷಿಸೋ ಹಾಗೆ ನಮ್ಮನ್ನ ಪರೀಕ್ಷೆ ಮಾಡ್ತಾ ಇದ್ದರು. ಹೊಟ್ಟೆ ಹೊರೆಯೋಕೆ ಆತ್ಮಗೌರವವನ್ನು ಹರಾಜು ಹಾಕ್ಕೋಬೇಕು. ನಿಜವಾದ್ದಾ ಅಂತ ಪರೀಕ್ಷೆ ಮಾಡೋಕೆ ಮೊಲೆಗಳನ್ನು ಹಿಡಿದು ಹಿಸುಕೋದನ್ನು ಕಲ್ಪಿಸಿಕೊಳ್ಳಿ.'

ಇಷ್ಟೆಲ್ಲದರ ನಡುವೆಯೂ ರೇವತಿಯ ಬದುಕಿನಲ್ಲಿ ಕೆಲವೇ ಕೆಲವು ಒಳ್ಳೆಯ ಘಟನೆಗಳೂ ನಡೆದಿವೆ. ಅವುಗಳಲ್ಲಿ ನನಗೆ ಇಷ್ಟವಾದ ಪ್ರಕರಣ ದೇವಸ್ಥಾನದಲ್ಲಿ ಜರುಗುತ್ತದೆ. ಅದು ಹೀಗಿದೆ:



ದೇವಸ್ಥಾನದ ಒಳಗೆ ಹೋದೆ. ಪೂಜಾರಿ ಎಲ್ಲಿಂದ ಬಂದಿದೀಯಾ ಅಂತ ಕೇಳಿದ. ನಮ್ಮ ಹಳ್ಳಿ ಹೆಸರು ಹೇಳಿದೆ. ಅಪ್ಪ-ಅಮ್ಮನ ಹೆಸರು ಹೇಳಿದರೆ ನಾನು ಯಾರೂಂತ ಗೊತ್ತಾಗುತ್ತೆ ಅಂತ ಹೇಳೋಕೆ ಹೋಗ್ಲಿಲ್ಲ, ನಮ್ಮ ಮನೆ ದೇವತೆ ಕನ್ಯೆ, ಹೆಂಗಸರು ಆ ದೇವತೆಯನ್ನು ನೋಡಬಾರದಿತ್ತು, ದೇವಸ್ಥಾನದ ಸಮೀಪ ಬರಬಾರದಾಗಿತ್ತು, ಮುಟ್ಟುನಿಂತ ಹೆಂಗಸರು ಮಾತ್ರ ದೇವಸ್ಥಾನಕ್ಕೆ ಹೋಗಬಹುದಾಗಿತ್ತು, ಗಂಡಸರು ಹೋಗಬಹುದಿತ್ತು.

ಆ ದಿವಸ ಹೆಂಗಸರು, ಗಂಡಸರು ಸೇರಿ ಒಂದಿಪ್ಪತ್ತು ಜನ ಇದ್ದರು. ಪೂಜಾರಿ ಮೊದಲು ಗಣೇಶನ ಗುಡೀಲಿ ಪೂಜೆ ಮಾಡಿ ನಂತರ ದೇವಿ ಗುಡಿಗೆ ಬಂದರು. ಹೆಂಗಸರು ಅಲ್ಲಿಯೇ ನಿಂತರು. ಗಂಡಸರು ಮುಂದೆ ಹೋದರು. ನನ್ನ ಪಾಲಿಗೆ ಮುಟ್ಟಿನ ಪ್ರಶ್ನೆಯೇ ಇಲ್ಲದಿದ್ದರಿಂದ ಹೋಗಬಹುದು ಎಂದು ಹೊರಟೆ.

ಪೂಜಾರಿ ಮತ್ತು ಹೆಂಗಸರು 'ಅಮ್ಮಾ, ಅಮ್ಮಾ ನೀವು ಅಲ್ಲಿಗೆ ಹೋಗಬಾರದು' ಎಂದು ಕೂಗಿಕೊಂಡರು. ಕೆಲವರು 'ಎಂತ ಹೆಂಗ್ಸಪ್ಪಾ ಇಷ್ಟೂ ಗೊತ್ತಿಲ್ವಾ' ಎಂದು ಗೊಣಗಿದರು.

'ನಾನು ಹೋಗಬಹುದು' ಎಂದೆ.

ಎಲ್ಲರಿಗೂ ಆಶ್ಚರ್ಯವಾಯಿತು. ಗುಂಪಿನಲ್ಲಿದ್ದವರೊಬ್ಬರು ನನ್ನನ್ನು ಗುರುತು ಹಿಡಿದು 'ಹೌದು ಅವರು ಹೋಗಬಹುದು, ತಪ್ಪೇನಿಲ್ಲ' ಎಂದು ಹೇಳಿ ಪೂಜಾರಿಗೆ ನನ್ನ ತಂದೆ-ತಾಯಿಯ ಹೆಸರು ಹೇಳಿದರು. ಪೂಜಾರಿಗೆ ತಕ್ಷಣ ಅರ್ಥವಾಗಿ 'ಅಯ್ಯಾ ದೊರೈಸಾಮಿ, ನೀನೆಲ್ಲೋ ಮುಂಬೈನಲ್ಲಿದೀಯಾ ಅಂತ ಹೇಳಿದ್ರು. ಯಾವಾಗ ವಾಪಸ್ಸು ಬಂದೆ? ಚೆನ್ನಾಗಿದೀಯಾ? ಬಾ ದೇವಿ ಗುಡಿಗೆ ಬಂದು ನೀನು ಪ್ರಾರ್ಥನೆ ಮಾಡಬಹುದು!' ಎಂದರು.

ಗುಂಪಲ್ಲಿದ್ದ ಕೆಲವರಿಗೆ ಏನಾಗ್ತಾ ಇದೆ ಅಂತ ಗೊತ್ತಾಯ್ತು, ಗೊತ್ತಾದವರು ಗೊತ್ತಿಲ್ಲದವರಿಗೆ ನಾನ್ಯಾರು ಅಂತ ವಿವರಿಸಿದರು. ಎಲ್ಲರೂ ನನ್ನನ್ನೇ ದಿಟ್ಟಿಸತೊಡಗಿದರು. ಪೂಜೆ ಆದ ಮೇಲೆ ಕೆಲವು ಭಕ್ತರು ಹೂವಿನ ಪ್ರಸಾದ ಕೇಳಬೇಕೆಂದಿದ್ದರು. ಅಂದ್ಕೊಂಡ ಕೆಲ್ಸ ಆಗುತ್ತಾ ಅಂತ ತಿಳಿಬೇಕಾದವರು ಕೆಂಪದೊಂದು, ಬಿಳಿದೊಂದು ಹೂಗಳನ್ನು ಪ್ರತ್ಯೇಕವಾಗಿ ಪೇಪರ್‌ನಲ್ಲಿ ಸುತ್ತಿ ತರ್ತಾ ಇದ್ರು. ಅವೆರಡನ್ನು ಕಲೆಸಿ ದೇವಿ ಮುಂದೆ ಇಡೋರು. ಪೂಜಾರಿ ಎರಡರಲ್ಲಿ ಯಾವುದಾದರೂ ಒಂದನ್ನು ತೆಗೆದು ಬಿಚ್ಚೋರು. ಬಿಚ್ಚಿದ ಪೇಪರ್‌ನಲ್ಲಿದ್ದ ಹೂವಿನ ಬಣ್ಣ ನೋಡಿ ಕೆಲ್ಸ ಆಗುತ್ತೋ ಇಲ್ವೋ ಅಂತ ಹೇಳೋರು.

ಆ ದಿವಸ ಪೂಜಾರಿ ಹೂವನ್ನ ಎತ್ತೋಕೆ ನನಗ ಹೇಳಿದರು. ನಾನು ಹಿಂಜರಿದೆ. 'ಇರ್ಲಿ ತೆಗಿ, ನೀನು ಆ ದೇವಿ ಇದ್ದ್ರೂ ಒಂದೇ' ಹೇಳಿದ. ನಾನು ಸುತ್ತ ನೋಡಿ ಸುಮ್ಮೆ ನಿಂತೆ.

ಯಾರೋ ಒಬ್ಬರು 'ತಪ್ಪೇನಿಲ್ಲ, ತೆಗಿ. ನೀನು ನಮ್ಮ ಹಾಗಲ್ಲ. ನೀನೂ ದೇವಿಯ ಹಾಗೆ ನಿಷ್ಕಳಂಕಿತಳು. ನಮ್ಮ ಹಾಗೆ ತಪ್ಪು ಮಾಡಿರೋಳಲ್ಲ. ಮುಂದೆ ಹೋಗು ಹಿಂಜರಿಯಬೇಡ, ನಮಗಾಗಿ ಹೂ ತೆಗಿ' ಎಂದರು. ಅವತ್ತು ಸುಮಾರು ಹತ್ತು ಜನ ಹೂವಿನ ಪರೀಕ್ಷೆ ಮಾಡಿದ್ರು. ಅವರೆಲ್ಲರಿಗೂ ಹೂ ನಾನೇ ತೆಗೆದುಕೊಟ್ಟೆ. ಎಲ್ಲರೂ ಸ್ವಲ್ಪ ಹೊತ್ತು ಕೂತಿದ್ದು ನಂತರ ಹೊರಟರು."

ಮೊನ್ನೆ ಫೋನ್ ಮಾಡಿದ ರೇವತಿ "ಅಕ್ಕಾ ಪುಸ್ತಕ ಯಾವಾಗ ರೆಡಿ ಆಗುತ್ತೆ, ಅದರ ಬಿಡುಗಡೆಗೆ ಯಾರನ್ನ ಕರೀಬೇಕು ಅಂತಿದ್ದೀರಿ" ಎಂದು ಕೇಳಿದಳು.

"ಇನ್ನೂ ಪ್ರೂಫ್ ನೋಡುತ್ತಿದ್ದೇನೆ. ಲೇಟೆಸ್ಟ್ ಆಗಿ ಮತ್ತೊಮ್ಮೆ ಪ್ರೂಫ್ ಆಗಬೇಕು ರೇವತಿ. ಅದಿರಲಿ, ಬಿಡುಗಡೆಗೆ ಯಾರನ್ನು ಕರೆಯಬೇಕು ಅಂತ ನಿನಗೆ ಇಷ್ಟ ಇದೆ?" ಎಂದೆ.

"ಅಕ್ಕಾ, ಇದು ಬರೀ ಹಿಜ್ರಾಗಳನ್ನು ಕುರಿತ ಸಭೆ ಆಗಬಾರ್ದು. ನನ್ನ ಬದುಕಿಗೂ, ಇತರೆ ಶೋಷಿತರ ಬದುಕಿಗೂ ಅಷ್ಟೇನು ವ್ಯತ್ಯಾಸ ಇಲ್ಲ, ಆದ್ದರಿಂದ ಬೇರೆ ಶೋಷಿತ ವರ್ಗಗಳೂ ಅದರಲ್ಲಿ ಭಾಗವಹಿಸಿದರೆ ಚೆನ್ನಾ" ಎಂದಳು!

"ನೀನು ಹೇಳೋದು ಸರಿ. ಯೋಚಿಸೋಣ" ಎಂದೆ.

ಫೋನ್ ಇಡುವ ಮುನ್ನ ರೇವತಿ "ನಿಮ್ಮನ್ನು ಅಕ್ಕಾ ಅಂತ ಕರೆದರೆ ಬೇಸರ ಇಲ್ಲಾ ತಾನೆ?" ಎಂದು ಕೇಳಿದಳು.

"ಬೇಸರ ಯಾತಕ್ಕೆ, ನೀನು ನನ್ನನ್ನು ಅಕ್ಕಾ ಅಂತ ಕರೆದರೇ ನನಗಿಷ್ಟ" ಎಂದೆ.

ಈ ನನ್ನ ತಂಗಿ ರೇವತಿಯ 'ಬದುಕು ಬಯಲು-ಹಿಜ್ರಾ ಒಬ್ಬಳ ಆತ್ಮಕಥನ'ವನ್ನು ಸದ್ಯದಲ್ಲೇ ಬಿಡುಗಡೆ ಮಾಡುತ್ತೇವೆ. ಅದು ನಿಜವಾಗಲೂ ಮನಮುಟ್ಟುವ ಜೀವನಗಾಥೆ.

• ಗೌರಿ ಲಂಕೇಶ್


ಕಾಮಾಕ್ಷಿಪಾಳ್ಯ ಕೌನ್ಸಿಲರ್ ರಂಗಣ್ಣನ ಮಗನ ಅಟ್ಟಹಾಸ

ಕಾಮಾಕ್ಷಿಪಾಳ್ಯದ ಜನಕ್ಕೆ ಕೌನ್ಸಿಲರ್ ಪೀಡೆ ಶುರುವಾಗಿದೆ!

ಹಿಂದಾದರೆ ರೌಡಿಗಳಿದ್ದರು. ಮಚ್ಚ ಕೊಲೆಯಾದ ನಂತರ ಬಹುತೇಕ ರೌಡಿಗಳೆಲ್ಲ ಏರಿಯಾಬಿಟ್ಟರು. ಕೆಲವರು ಕೊಲೆಯಾದರು. ಇನ್ನೂ ಕೆಲವರು ಜೈಲು ಸೇರಿ ತೀರ ಇತ್ತೀಚೆಗೆ ಪೆದ್ದಗುಂಡನ ಎನ್‌ಕೌಂಟರ್ ಆಗುವ ಮೂಲಕ ರೌಡಿಗಳ ಹಾವಳಿ ಕಾಮಾಕ್ಷಿಪಾಳ್ಯದ ಮಟ್ಟಿಗೆ ಕಂಟ್ರೋಲಿಗೆ ಬಂದಿತ್ತು. ಹಾಗಂತ ಜನ ಇನ್ನೇನು ನಿಟ್ಟುಸಿರಿಡಬೇಕು-ಅಷ್ಟರಲ್ಲೇ ಬಿಜೆಪಿ ಕೌನ್ಸಿಲರ್ ರಂಗಣ್ಣನ ಮಗ ಅನಿಲ್ ರಂಗಣ್ಣ ಎಂಬ ಪೋರ್ಕಿಯೊಬ್ಬ ಅವತಾರವೆತ್ತಿದ್ದಾನೆ.


ಕಾಮಾಕ್ಷಿಪಾಳ್ಯದಿಂದ ಜೆಡಿಎಸ್‌ನ ಜೈಕುಮಾರ್ ಗೌಡರ ವಿರುದ್ಧ ಬಿಜೆಪಿಯಿಂದ ಗೆದ್ದ ಕೆ. ರಂಗಣ್ಣ ಸದ್ಯ ಬಿಬಿಎಂಪಿಯ ತೋಟಗಾರಿಕಾ ಸ್ಥಾಯಿ ಸಮಿತಿಯ ಅಧ್ಯಕ್ಷ. ಪಾರ್ಕು, ಕಾಂಪೌಂಡು, ಮೋರಿ, ಶಿಲ್ಪ, ಗಿಡ, ಕುಂಡ, ಗರಿಕೆ ಇತ್ಯಾದಿ ಪ್ರತಿಯೊಂದರಲ್ಲೂ ತರಹೇವಾರಿಯ ಕಮೀಷನ್ ಬಾಚಿಕೊಳ್ಳುವ ರಂಗಣ್ಣನಿಗೆ ಮಗನನ್ನು ಬಿಟ್ಟು ಬಡವರನ್ನು ದೋಚುವ ದಾರಿದ್ರ್ಯವಂತೂ ಖಂಡಿತಾ ಇಲ್ಲ. ಆದರೆ ದೌಲತ್ತು, ಪೊಗರು, ಸೊಕ್ಕು ಬಿಡಬೇಕಲ್ಲ?

ಮಗ ಅನಿಲ್ ರಂಗಣ್ಣ ಹುಟ್ಟಾ ಪುಂಡ. ಯಾರೆಲ್ಲ ಅಪ್ಪನ ವಿರುದ್ಧ ಎಲೆಕ್ಷನ್ನಿಗೆ ನಿಲ್ಲುತ್ತಾರೋ ಅಂಥವರನ್ನೇ ನಡುರಸ್ತೆಯಲ್ಲಿ ಅಟ್ಟಾಡಿಸಿದ ಪೊಲೀಸ್ ಕೇಸುಗಳು ಅನಿಲನ ಮೇಲಿದೆ. ರಾಜಕೀಯವಾಗಿ ಅಪ್ಪನನ್ನು ವಿರೋಧಿಸಿದವರ ಮನೆ ಮುಂದೆ ನಿಲ್ಲಿಸಿದ್ದ ಕಾರನ್ನು ಚಿಂದಿಯೆಬ್ಬಿಸುವುದು, ಸಂಜೆಯಾದರೆ ಪುಂಡರ ಗ್ಯಾಂಗ್ ಕಟ್ಟಿ ಪಾರ್ಟಿ ಮಾಡುವುದು, ದಿಕ್ಕಿಲ್ಲದವರ ಮಕ್ಕಳನ್ನು ಹಿಡಿದು ಬಡಿಯುವುದು ಅನಿಲನ ಹಳೇ ಚಾಳಿ. ಇನ್ನು ಅಪ್ಪನೇ ಗೆದ್ದು ಕೌನ್ಸಿಲರ್ ಆದನೆಂದರೆ; ತಮ್ಮದೇ ಸರ್ಕಾರ, ಪೊಲೀಸು ಇದೆಯೆಂದ ಮೇಲೆ ಕೇಳಬೇಕೆ?


ಗ್ಯಾಸ್ ಖದೀಮ ನಿರಂಜನ್

ಕಾಮಾಕ್ಷಿಪಾಳ್ಯದ ಜನಕ್ಕೀಗ ನೀರಿನ ಸಮಸ್ಯೆಗಿಂತಲೂ ರಂಗಣ್ಣನ ಮಗ ಅನಿಲನ ಹಾವಳಿಯೇ ದೊಡ್ಡ ಪೀಡೆ. ಕಳೆದ ಪಾಲಿಕೆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಜೈಕುಮಾರ್ ಗೌಡರ ಪರ ಓಡಾಡಿದನೆಂಬ ಒಂದೇ ಕಾರಣಕ್ಕೆ ಇಲ್ಲಿಗೆ ತಿಂಗಳ ಹಿಂದಷ್ಟೇ ಕರೇಕಲ್ ನಿವಾಸಿ ತೋಪೇಗೌಡರ ಮನೆ ಮುಂದೆ ನಿಲ್ಲಿಸಿದ್ದ ಅವರ ಕಾರನ್ನು ಚಿಂದಿಯೆಬ್ಬಿಸಿದ. ಕೌನ್ಸಿಲರ್ ಮಗನಾದ್ದರಿಂದ ಅನಿಲನ ವಿರುದ್ಧ ಪೊಲೀಸರು ದೂರು ದಾಖಲಿಸುವುದಿಲ್ಲ, ಇದು ಮೊದಲೇ ಗೊತ್ತಿರುವುದರಿಂದ ಜನ ದೂರು ಕೊಡುವುದಕ್ಕೂ ಹೋಗುವುದಿಲ್ಲ. ಅನಿಲ್ ರಂಗಣ್ಣನ ಪುಂಡಾಟಿಕೆ ಬರುಬರುತ್ತ ಯಾವ ಪರಮಾವಧಿ ಮುಟ್ಟಿದೆಯೆಂದರೆ ಇಲ್ಲಿಗೆ ಮೂರು ತಿಂಗಳ ಹಿಂದೆ ತನ್ನ ಪೋಲಿ ಪಟಾಲಮ್ಮಿನ ಸಮೇತ ಇದೇ ತೋಪೇಗೌಡರ ಮನೆ ಮೇಲೆ ದಾಳಿ ನಡೆಸಿ ಅವರ ಕೊಳಾಯಿ ಕಿತ್ತು ಹಾಕಿದ.

ಹಾಗೊಮ್ಮೆ ತೋಪೇಗೌಡ ಅಕ್ರಮ ಕೊಳಾಯಿ ಹಾಕಿಕೊಂಡಿದ್ದರೆ ಅದರ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿರುವುದು ಜಲಮಂಡಳಿಯ ಅಧಿಕಾರಿಗಳು. ಅನಿಲ್ ರಂಗಣ್ಣ ಜಲಮಂಡಳಿಗೆ ದೂರು ಕೊಡಬೇಕಿತ್ತು, ಬದಲಿಗೆ ತಾನೇ ರೌಡಿ ಪಡೆ ಕಟ್ಟಿಕೊಂಡು ಕೊಳಾಯಿ ಕಿತ್ತು ಹಾಕುತ್ತಾನೆಂದರೆ ಏನರ್ಥ?


ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರಸ್ತೆ ಆಕ್ರಮಿಸಿದ ವಿರುದ್ಧ ಪಾಲಿಕೆ ನೋಟೀಸ್

ಇದು ರಂಗಣ್ಣ ಮತ್ತು ಮಗ ಅನಿಲನ ಅಟ್ಟಹಾಸಕ್ಕೆ ಸಣ್ಣ ಸ್ಯಾಂಪಲ್ಲಷ್ಟೆ. ಇಡೀ ಕಾಮಾಕ್ಷಿಪಾಳ್ಯದಲ್ಲಿ ತನ್ನ ಅಪ್ಪನ ಫೋಟೋ ಹಾಕದೇ ಯಾರಾದರೂ ಬ್ಯಾನರ್-ಫ್ಲೆಕ್ಸ್ ಹಾಕಿಸಿದನೆಂದರೆ ಅನಿಲನೇ ನಿಂತು ಬ್ಯಾನರ್ ಕುಯ್ದು ಹಾಕುತ್ತಾನೆ. ಅಪ್ಪನ ಹೆಸರು ಫೋಟೊ ಹಾಕದೇ ಯಾರೇ ಗಣೇಶ, ಅಣ್ಣಮ್ಮ ಮಾಡುತ್ತಾರೆಂದರೆ ಅಂಥವರ ವಿರುದ್ಧ ಪೊಲೀಸರನ್ನು ಛೂಬಿಡುತ್ತಾನೆ. ಯಾರೇ ಮನೆ ಕಟ್ಟಿಸುತ್ತಿದ್ದಾರೆಂದರೆ ತಾನೇ ಹಾವಳಿಯಿಟ್ಟು ಕಪ್ಪ ವಸೂಲಿ ಮಾಡುತ್ತಾನೆ. ಇನ್ನು ಫುಟ್‌ಪಾತ್ ವ್ಯಾಪಾರಿಗಳಂತೂ ಪ್ರತಿನಿತ್ಯ ಅನಿಲನ ಬಂಟರ ಕೈಗೆ ಪುಡಿ ರೋಲ್‌ಕಾಲ್ ಮಡಗಲೇಬೇಕು.

ಇಷ್ಟೆಲ್ಲ ಸುಲಿಗೆ ನಡೆಸಿಯೂ ಅನಿಲನ ದುಡ್ಡಿನ ದಾಹ ಇಂಗುತ್ತಿಲ್ಲ. ಶಾರದ ಕಾಲೋನಿಯ ಶಿವಶಕ್ತಿ ಗ್ಯಾಸ್ ಏಜೆನ್ಸಿಯ ಖದೀಮ ಎಲ್.ಆರ್. ನಿರಂಜನ ಜೊತೆ ಸೇರಿ ಸಾರ್ವಜನಿಕ ರಸ್ತೆಗೇ ಬೇಲಿ ಹಾಕಿಸಿದ್ದು ಅನಿಲನ ಲೇಟೆಸ್ಟ್ ಹಾವಳಿಗೊಂದು ನಿದರ್ಶನವಷ್ಟೆ. ಕಾಮಾಕ್ಷಿಪಾಳ್ಯದ ಶಾರದಾ ಕಾಲೋನಿಯ ಕೆಎಚ್‌ಬಿಸಿಎಸ್ ಬಡಾವಣೆಯ 267ನೇ ಸೈಟಿನಲ್ಲಿರುವ ಶಿವಶಕ್ತಿ ಗ್ಯಾಸ್ ಏಜೆನ್ಸಿಯ ಮಾಲೀಕ ನಿರಂಜನ ಸಾರ್ವಜನಿಕರಿಗೆ ಗ್ಯಾಸ್ ವಂಚಿಸಿಯೇ ಕೋಟ್ಯಾಧಿಪತಿಯಾದವನು. ಯಾರೋ ಬಡವನೊಬ್ಬ ಈತನ ಗ್ಯಾಸ್ ಅಡ್ಡೆಯ ಪಕ್ಕದ ರಸ್ತೆಯಲ್ಲಿ ಮೊಟ್ಟೆ ಆಮ್ಲೆಟಿನ ಗಾಡಿ ಇಟ್ಟುಕೊಂಡಿದ್ದ, ಅನಿಲ್ ರಂಗಣ್ಣನಿಗೆ ಈತ ತಾನೇ ಎಲ್ಲಿಂದ ರೋಲ್‌ಕಾಲ್ ಕೊಟ್ಟಾನು?

ಅದಕ್ಕೆ ಅನಿಲ್ ಗ್ಯಾಸ್ ಖದೀಮ ನಿರಂಜನ್‌ನನ್ನು ಛೂಬಿಟ್ಟು ರಸ್ತೆಗೇ ಗ್ರಿಲ್ ಕಾಂಪೌಂಡ್ ಹಾಕಿಸಿಬಿಟ್ಟ. ಕಾಂಪೌಂಡ್ ಹಾಕಿದ ಜಾಗದಲ್ಲಿ ಆಟೋ ಸ್ಟ್ಯಾಂಡ್ ಇತ್ತು, ಸಾರ್ವಜನಿಕರ ಪಾಲಿಗದು ಪಾರ್ಕಿಂಗ್‌ಗೂ ಬಳಕೆಯಾಗುತ್ತಿತ್ತು, ಅದಕ್ಕೇ ಗ್ರಿಲ್ ಕಾಂಪೌಂಡ್ ಹಾಕಿಸಿದ ಅನಿಲ್ ರಂಗಣ್ಣ ಪ್ರತಿಭಟಿಸಿದ ಜನಕ್ಕೆ 'ಅಲ್ರೀ ಅಲ್ಲಿ ಆಮ್ಲೇಟ್ ಗಾಡಿ ಇರೋದ್ರಿಂದ ಪೋಲಿ ಪಕಾಳಿಗಳು ಗ್ಯಾಂಗ್ ಕಟ್ತಾರೆ. ಹೆಣ್ಣು ಮಕ್ಕಳು ಓಡಾಡೋಕ್ಕಾಗುತ್ತೇನ್ರಿ' ಎಂದು ದಬಾಯಿಸಿಬಿಟ್ಟ. ಜನ ತೆಪ್ಪಗಾದರು. ಇದಾಗಿ ವಾರಕ್ಕೇ ಜನಕ್ಕೆ ಎಂಥಾ ಆಘಾತ ಕಾದಿತ್ತೆಂದರೆ ಹಿಂದಿದ್ದ ಒಂದು ಫುಟ್‌ಪಾತ್ ಗಾಡಿಯ ಬದಲು ಈಗ ಐದಾರು ಫುಟ್‌ಪಾತ್ ಗಾಡಿಗಳು ಬಂದಿದ್ದವು!

ಜನಕ್ಕೆ ತೊಂದರೆಯೆಂದು ಇದ್ದ ಒಂದು ಗಾಡಿಯನ್ನು ಖಾಲಿ ಮಾಡಿಸಿದ್ದೇನೋ ಸರಿ. ಈಗ ಒಂದಲ್ಲ ಎರಡಲ್ಲ ಐದು ಗಾಡಿಗಳಿವೆಯಲ್ಲ, ಜನ ಓಡಾಡೋಕ್ಕಾಗುತ್ತಾ? ರಸ್ತೆಯಲ್ಲಿ ನಡಿಯೋಕ್ಕಾಗುತ್ತಾ? ಎಂದು ಜನ ರೊಚ್ಚಿಗೆದ್ದರೆ, ಪ್ರಶ್ನಿಸಿದ ಜನರನ್ನೇ ಅನಿಲನ ರೌಡಿ ಗ್ಯಾಂಗ್ ಗುರಾಯಿಸುತ್ತದೆ.


ಶಿವಶಕ್ತಿ ಗ್ಯಾಸ್‌ನವರು ರಸ್ತೆಗೆ ಹಾಕಿದ ಗ್ರಿಲ್ ಕಾಂಪೌಂಡ್

ಹೀಗೆ ಅನಿಲನ ಕುಮ್ಮಕ್ಕಿನಿಂದ ಯಾರ್‍ಯಾರು ಫುಟ್‌ಪಾತ್ ಆಕ್ರಮಿಸಿದ್ದಾರೋ ಅವರೆಲ್ಲ ಪ್ರತಿನಿತ್ಯ ರಂಗಣ್ಣನ ಮಗನಿಗೆ ನೂರು ರೂಪಾಯಿ ರೋಲ್‌ಕಾಲ್ ಕೊಡುತ್ತಾರೆ.

ಒಂದೆಡೆ ಸಾರ್ವಜನಿಕ ರಸ್ತೆ ಶಿವಶಕ್ತಿ ಗ್ಯಾಸ್ ಏಜೆನ್ಸಿಯ ಖದೀಮ ನಿರಂಜನ ಪಾಲಾದಂತಾಯ್ತು, ಮತ್ತೊಂದೆಡೆ ಫುಟ್‌ಪಾತ್ ಕಬಳಿಸಿದ ಗಾಡಿಗಳಿಂದ ರೋಲ್‌ಕಾಲೂ ಬಂದಂತಾಯ್ತು. ಇನ್ನೊಂದೆಡೆ ಹಫ್ತಾ ಕೊಡದ ಬಡಪಾಯಿಯನ್ನೂ ಎತ್ತಿಸಿದಂತಾಯ್ತು, ಮಗದೊಂದೆಡೆ ಸಾರ್ವಜನಿಕ ರಸ್ತೆಯನ್ನೂ ಕಬಳಿಸಿದಂತಾಯ್ತು.

ಕಾಮಾಕ್ಷಿಪಾಳ್ಯದ ಕರ್ಮಕ್ಕೆ ಇದಕ್ಕಿಂತ ಬೇಕೆ?

• ರಾ.ಸೋಮನಾಥ್

▶▶ 5

25 ಕೋಟಿ, ಮೇಯರ್ ಕಾರಿಗೆಂದೇ 28 ಲಕ್ಷ, ಆಯಾ ಸ್ಥಾಯಿ ಸಮಿತಿಗಳ ಅಧ್ಯಕ್ಷರಿಗೆಂದು ಮತ್ತೆ ತಲಾ 12 ಲಕ್ಷದ ವರ್ನಾ ಕಾರು, ಅದಕ್ಕೆ ಲಕ್ಷಾಂತರ ರೂಪಾಯಿಗಳ ಪೆಟ್ರೋಲು, ಸ್ಥಾಯಿ ಸಮಿತಿಗಳ ಇನ್ಸ್‌ಪೆಕ್ಷನ್ನಿಗೆಂದೇ ಮತ್ತೆ ನಾಲ್ಕು ಕಾರುಗಳು, ಪ್ರತಿ ಕೌನ್ಸಿಲ್ ಸಭೆಯಲ್ಲಿ ಬಿರಿಯಾನಿ, ಕಬಾಬು, ಚಿಲ್ಲಿ ಚಿಕನ್‌ಗೆಂದು ಲಕ್ಷಾಂತರ ಪೋಲು, ತೀರ ಇತ್ತೀಚೆಗೆ ಕೌನ್ಸಿಲರ್‌ಗಳ ಕ್ರಿಕೆಟ್ ಮ್ಯಾಚ್ ಎಂದೂ ಅದರ ಪ್ರಾಕ್ಟೀಸಿಗೆಂದೂ ಕಾಲುಸೂಪು, ಬಿರಿಯಾನಿ, ಕಬಾಬು ಎಂದು ಮತ್ತೆ ಲಕ್ಷಾಂತರ ರೂಪಾಯಿ, ಪ್ರತಿ ಸ್ಥಾಯಿ ಸಮಿತಿಯ ಸಭೆಯಲ್ಲಿ ಡ್ರೈಫ್ರೂಟ್ಸ್, ಐಸ್‌ಕ್ರೀಮ್, ಮಿಲ್‌ಸೇಕ್ ಎಂದು, ಕೌನ್ಸಿಲರ್‌ಗಳ ಪ್ರವಾಸಕ್ಕೆಂದು, ಉಳಿಕೆ ದುಡ್ಡೆಲ್ಲ ಪೋಲಾಗಿ ಹೋಗಿದೆ.


ಹಳೇ ಬೋಗಸ್ ಬಿಲ್ಲಿನ ಪುಡಿ ಆರೋಪ ಹೊರಿಸಿ ಕಮಿಷನರ್ ಸಿದ್ದಯ್ಯ, ಸಣ್ಣಪುಟ್ಟ ಅಧಿಕಾರಿಗಳನ್ನು ಹಿಡಿದು ಸಸ್ಪೆಂಡ್ ಮಾಡಿ ಬೆನ್ನು ತಟ್ಟಿಕೊಳ್ಳುತ್ತಿದ್ದಾರೆ ನಿಜ. ಬಜೆಟ್



ಮಿತಿಯನ್ನೂ ಮೀರಿ ವರ್ಕ್‌ಕೋಡ್ ಕೊಡುವಂತೆ ಆದೇಶ ಹೊರಡಿಸಿದ ನಗರಾಭಿವೃದ್ಧಿ ಸಚಿವಾಲಯದ ಹಿರಿಯ ಅಧಿಕಾರಿಗಳನ್ನು ತಾನೇ ಮೊದಲು ಶಿಕ್ಷಿಸಬೇಕು. ಸಚಿವಾಲಯ ಇಂಥ ಸಚಿವಾಲಯ ಮುಖ್ಯಸ್ಥರಿಗೆ ಆದೇಶ ಕೊಟ್ಟ ಮುಖ್ಯಮಂತ್ರಿಯನ್ನು ತಾನೇ ಮೊದಲು ಜೈಲಿಗೆ ಹಾಕಬೇಕು? ಹಿಂದಿದ್ದ ಇಬ್ಬರೂ ಕಮಿಷನರ್‌ಗಳು ಕಾಯ್ದೆ ಮೀರಿ ವರ್ಕ್‌ಕೋಡ್ ಹಂಚಿದ್ದಕ್ಕೆ ಶಿಕ್ಷೆಯಿಲ್ಲವೆಂದ ಮೇಲೆ ಪಾಲಿಕೆಯ ಹುಡಿಪುಡಿ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಏನು ಪ್ರಯೋಜನ?

ಇವತ್ತು ನೀರಿಗೆ ಹಾಹಾಕಾರವೆದ್ದರೆ ಅದಕ್ಕೇ 300 ಟ್ಯಾಂಕರ್ ಖರೀದಿಸುತ್ತೇವೆಂದು ಕಮೀಷನರ್ ಸಿದ್ದಯ್ಯ ಹೇಳುತ್ತಿದ್ದಾರೆ. ಆದರೆ ಕಳೆದೆರಡು ವರ್ಷದಿಂದ ಲೂಟಿಯಾದ ಪಾಲಿಕೆ ದುಡ್ಡಿತ್ತಲ್ಲ, ಅದನ್ನೇ ವಸೂಲಿ ಮಾಡಿದರೆ ಆ ದುಡ್ಡಲ್ಲಿ ಕಾವೇರಿ ನದಿಗೇ ಹೊಸದೊಂದು ಡ್ಯಾಮ್ ಕಟ್ಟಬಹುದು. ಅಥವಾ ಐವತ್ತು ಕಬ್ಬನ್ ಪಾರ್ಕ್ ನಿರ್ಮಿಸಬಹುದು. ಮೂವತ್ತು ವಿಕ್ಟೋರಿಯಾ ಆಸ್ಪತ್ರೆ ಕಟ್ಟಿಸಬಹುದು. ಸಮುದ್ರಕ್ಕೆ ಸೇರುವ ಯಾವುದಾದರೂ ನದಿಗೆ ಡ್ಯಾಮ್ ಕಟ್ಟಿಸಿ ಅಲ್ಲಿಂದ ಕೊಳವೆ ಮೂಲಕ ಬೆಂಗಳೂರಿಗೆ ನೀರು ತರಬಹುದು. ಇವ್ಯಾವುದನ್ನೂ ಮಾಡಲಾಗದ ಬಿಜೆಪಿ ಸರ್ಕಾರದ ಕೈಲಾಗಿದ್ದು ಬಿಬಿಎಂಪಿಯ ದಿವಾಳಿ ಮಾತ್ರ!

ಲಜ್ಜೆಗೆಟ್ಟ ಸರ್ಕಾರದ ಬೇಡಿತನಕ್ಕೆ ಇಷ್ಟು ಸಾಕಲ್ಲವೆ? •



ಕಂತ್ರಿ ಕಾಗೇರಿ ಕರ್ಮ


ಹೈಗರ ಮಠಕೆ ಸರ್ಕಾರಿ ಭೂಮಿ ಬಳುವಳಿ!!

ಮಂತ್ರಿ ಕಾಗೇರಿ ತನ್ನ ರಾಜಕೀಯ ಲಾಭಕ್ಕಾಗಿ ಸ್ವರ್ಣವಲ್ಲಿ ಮಹಾಸಂಸ್ಥಾನಕ್ಕೆ ಕೊಡುತ್ತಿರುವ ಜಮೀನಿದೆಯಲ್ಲ, ಅದು ಯಲ್ಲಾಪುರ ಅಗ್ನಿಶಾಮಕ ಠಾಣೆಗೆಂದು ಮಂಜೂರು ಮಾಡಲಾಗಿರುವ ಜಾಗ! ಕಾಗೇರಿಯ ಕರಾಮತ್ತು ಯಲ್ಲಾಪುರದ ತಾಲ್ಲೂಕಿಗೆ ಗಂಡಾಂತರಕಾರಿ ಆಗಿಬಿಟ್ಟಿದೆ. ಏಪ್ರಿಲ್ 7, 2007ರಂದು ಈ 26 ಗುಂಟೆ ಎಂಟಾಣೆ ಸರ್ಕಾರಿ ಪಡಭೂಮಿಯನ್ನು ಅಗ್ನಿಶಾಮಕ ದಳಕ್ಕೆ ಸರ್ಕಾರ ಲೀಸ್ ಮೇಲೆ ಕೊಟ್ಟಿತ್ತು. ಇದೇ ಜಾಗ ಕೊಡಲು ಮುಖ್ಯ ಕಾರಣ ಎದುರಿನಲ್ಲೇ ಸದಾ ನೀರೊದಗಿಸುವ ಕೆರೆಯೊಂದು ಇರುವುದಾಗಿತ್ತು.

ಉತ್ತರ ಕನ್ನಡದ ವಿಪ್ರ ಸಂಕುಲದ ಒಂದು ಬಣದ ಪೀಠಾಧಿಕಾರಿ ಸ್ವರ್ಣವಲ್ಲಿ ಸ್ವಾಮಿ ಗಂಗಾಧರೇಂದ್ರ ಸರಸ್ವತಿ ಏಕ್‌ದಂ ಸದ್ದು-ಸುದ್ದಿಗೆ ಬಿದ್ದಿದ್ದಾರೆ! ಅಡಿಕೆ ಬೆಲೆ ಕುಸಿತವೆಂಬ 'ಹುಸಿ ಈಶ್ಯೂ' ಇಟ್ಟುಕೊಂಡು ಈ ಸಾಧು ಮೊನ್ನೆ ಶಿರಸಿಯಲ್ಲೊಂದು ಭರ್ಜರಿ ತೋಟಿಗರ ಸಮಾವೇಶದಲ್ಲಿ ಮಿಂಚಿದ್ದರು. ಆ ಸಭೆಯಲ್ಲಿ ಆತ ರೈತ-ತೋಟಿಗರಿಗೆ ಬೆಳೆ ಸಾಲ ತುಂಬದಂತೆ ಪರೋಕ್ಷ ಫರ್ಮಾನು ಹೊರಡಿಸಿದ್ದು ವಿವಾದಕ್ಕೆಡೆ ಮಾಡಿಕೊಟ್ಟಿತ್ತು, ಅದರ ಬೆನ್ನಿಗೆ ಅಗ್ನಿಶಾಮಕ ಠಾಣೆಗೆಂದು ಮೀಸಲಿಟ್ಟ ಯಲ್ಲಾಪುರದ ಸುಮಾರು ಮುಕ್ಕಾಲು ಎಕರೆ ಸರ್ಕಾರಿ ಭೂಮಿ ಸ್ವಾಹಾ ಮಾಡಲು ಸ್ವಾಮಿ ಹವಣಿಸುತ್ತಿರುವುದು ದೊಡ್ಡ ಗದ್ದಲ ಎಬ್ಬಿಸಿಬಿಟ್ಟಿದೆ!

ಸ್ವರ್ಣವಲ್ಲಿ ಸ್ವಾಮಿ 'ಹಸಿರು ಸಂತ'ನೆಂಬ 'ಆರೋಪ'ಕ್ಕೆ ತುತ್ತಾಗಿರುವಾತ. ಪೀಠಕ್ಕೆ ಬರುತ್ತಿದ್ದಂತೆಯೇ ಈ ಬಿರುದು ಸ್ವಾಮಿಗೆ ಸ್ವಜಾತಿ ಬ್ರಾಹ್ಮಣ ಬಂಧುಗಳಿಂದ ಪ್ರಾಪ್ತವಾಗಿತ್ತು. ಇದಕ್ಕೆ ಕಾರಣವೂ ಇತ್ತು ಬಿಡಿ! ಸರ್ಕಾರಿ ಯೋಜನೆಗಳಿಂದ ಶಿರಸಿ ಸೀಮೆಯ 'ತನ್ನವರ' ತೋಟಪಟ್ಟಿಗೆ ಗಂಡಾಂತರ ಬಂದಾಗಲಷ್ಟೇ ಸ್ವರ್ಣವಲ್ಲಿ ಸ್ವಾಮಿಯ ಪರಿಸರ ಪ್ರೀತಿ-ಕಾಳಜಿ-ಹೋರಾಟ ಉಕ್ಕುತ್ತದೆ! ಈ ಸ್ವಾಮೀಜಿಯದು ಅನುಕೂಲಸಿಂಧು ಪರಿಸರ ಪರಾಕ್ರಮ. ಕೈಗಾ ಅಣುಸ್ಥಾವರ ವಿರೋಧಿ ಹೋರಾಟದ ಮುಂಚೂಣಿಯಲ್ಲಿದ್ದ ಸ್ವರ್ಣವಲ್ಲಿ ಸ್ವಾಮಿ ಅದೇ ಅಣುಸ್ಥಾವರ ರಾಷ್ಟ್ರಕ್ಕೆ ಸಮರ್ಪಿಸಲು ಅಂದಿನ ಪ್ರಧಾನಿ ವಾಜಪೇಯಿ ಬಂದಾಗ ಕೈಗಾಕ್ಕೆ ಹೋಗಿ ಅವರನ್ನು ಭೇಟಿಯಾಗಿ ಬಂದಿದ್ದರು. ಕೋಮುವಾದಿ ಬಿಜೆಪಿ ಒಲವಿನ ಗಂಗಾಧರೇಂದ್ರ ಸ್ವಾಮಿಯ ಪರಿಸರ ನೀತಿ-ನಿಲುವಿದು!

ಉತ್ತರ ಕನ್ನಡದ ಹೈಗರಲ್ಲಿ ಎರಡು ಗುಂಪು. ಶಿರಸಿ-ಯಲ್ಲಾಪುರ ಮತ್ತು ಒಂದಿಷ್ಟು ಸಿದ್ದಾಪುರ ಭಾಗದ ಹೈಗರಿಗೆ ಸ್ವರ್ಣವಲ್ಲಿ ಗುರುಪೀಠ. ಘಟ್ಟದ ಮೇಲಿನ ಸಿದ್ದಾಪುರ ಮತ್ತು ಕರಾವಳಿಯ ಹೈಗರು (ಬ್ರಾಹ್ಮಣರು) ರಾಮಚಂದ್ರಾಪುರ ಮಠಕ್ಕೆ ನಿಷ್ಠರು. ಅರ್ಥಾತ್ ಸೋಂದಾ ಸ್ವರ್ಣವಲ್ಲಿ ಮಠಾಧೀಶ ಗಂಗಾಧರೇಂದ್ರ ಸರಸ್ವತಿ ಮತ್ತು ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಬದ್ಧ ವೈರಿಗಳು. ಶೂದ್ರರನ್ನು ಹಣಿಯಬೇಕೆಂದಾಗಲಷ್ಟೇ ಈ ಹಾರುವ ಮಠಗಳೆರಡು ಒಂದಾಗುತ್ತವೆ. ಉಳಿದಂತೆ ಮೇಲಾಟ-ಶೀತಲ ಸಂಘರ್ಷ ನಿತ್ಯ ನಿರಂತರ. ಹೈಗರ ಮೇಲಿನ ಪ್ರಭುತ್ವಕ್ಕಾಗಿ ಈ ಕಾವಿಧಾರಿದ್ವಯರು ಮಾಡದ ಮಸಲತ್ತೇ ಇಲ್ಲ.



ಗೋಕರ್ಣ ಬ್ರಾಹ್ಮಣ ಆದಾಯ-ಐಶ್ವರ್ಯದ ದೇವಾಲಯವನ್ನು ರಾಘವೇಶನ ಜೋಳಿಗೆಗೆ ಯಡ್ಡಿ ಮತ್ತವನ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಕಿದಾಗ ಸ್ವರ್ಣವಲ್ಲಿ ತಿರುಗಿ ಬಿದ್ದಿದ್ದರು. ಒಂದಿಷ್ಟು ಚಿತ್ರ-ವಿಚಿತ್ರ ಸ್ವಾಮಿಗಳ ಕಟ್ಟಿಕೊಂಡು ಗೋಕರ್ಣದಲ್ಲೇ ಸರ್ಕಾರದ ನಿರ್ಧಾರದ ವಿರುದ್ಧ ಪ್ರತಿಭಟನಾ ಸಭೆ ನಡೆಸಿದ್ದರು. ತನ್ನ ಆಶೀರ್ವಾದದಿಂದ ನಾಲ್ಕು ಬಾರಿ ಶಾಸಕನಾದ, ಮಂತ್ರಿಯಾದ ಕಾಗೇರಿ ಎದುರಾಳಿ ರಾಘವೇಶನ ಪರ ನಿಂತಿದ್ದಕ್ಕೆ ಕೆರಳಿ ಕೆಂಡವಾಗಿದ್ದರು. ಕಾಗೇರಿಗೆ ಬುದ್ಧಿ ಕಲಿಸಲೆಂದೇ ಆತನ ವಿರೋಧಿ ಶಾಂತರಾಮ ಹೆಗಡೆ ಎಂಬ ಕಾಂಗ್ರೆಸ್ಸಿಗನನ್ನು ಬಗಲಲ್ಲಿ ಇಟ್ಟುಕೊಂಡು ಓಡಾಡತೊಡಗಿದರು. ಮಠದ ಪಾರುಪತ್ಯದಲ್ಲಿ ಕಾಗೇರಿಗಿಂತ ಶಿರಸಿ ಸೀಮೆಯ ಅಡಿಕೆ ತೋಟಗರ ಜೀವನಾಡಿಯಾದ ಟಿಎಸ್‌ಎಸ್ ಸಂಸ್ಥೆಯನ್ನು ದಿವಾಳಿ





ಮಾಡಿರುವ ಕುಲಘಾತುಕ ಶಾಂತಣ್ಣನಿಗೆ ಹೆಚ್ಚು ಪ್ರಾಮುಖ್ಯತೆ ಕೊಡಹತ್ತಿದರು.

ಈ ಕಾಗೇರಿ-ಶಾಂತಾರಾಮ್ ಹೆಗಡೆ ಇಬ್ಬರೂ ಶಿರಸಿ ಸೀಮೆಯ ಅಡಿಕೆ ತೋಟಗರ ಪಾಲಿಗೆ ಕಾಡುವ ಸಾಡೇಸಾತ್ ಶನಿಗಳೇ. ಅಡಿಕೆ ಬೆಳೆಗಾರರ ಹಿತ ರಕ್ಷಿಸುವ ಧೀರೋದಾತ ಮಾತಾಡುವ ಸ್ವರ್ಣವಲ್ಲಿ ಸ್ವಾಮಿ ಮಾತ್ರ ತನ್ನ ಹಿಡನ್ ಅಜೆಂಡಾ ಸಾಧಿಸಲು ಒಮ್ಮೆ ಕಾಗೇರಿ, ಇನ್ನೊಮ್ಮೆ ಶಾಂತಣ್ಣನ ಹೆಗಲ ಮೇಲೆ ಕೈಹಾಕಿ 'ಭಿಕ್ಷೆ'ಗೆ ಹೊರಡುತ್ತಾರೆ. ಅದಿರಲಿ, ಯಾವಾಗ ಕಾಗೇರಿ ನಿಷ್ಠೆ ರಾಮಚಂದ್ರಾಪುರ ಮಠದತ್ತ ವಾಲಿತೋ, ಆಗ ಸ್ವರ್ಣವಲ್ಲಿ ಸ್ವಾಮಿಯೂ ಸೆಡ್ಡು ಹೊಡೆದು ನಿಂತುಬಿಟ್ಟರು. ಕಾಗೇರಿಯ ಇಮೇಜು ತನ್ನ ಭಕ್ತ ಸಮುದಾಯದಲ್ಲಿ ಕುಗ್ಗುವಂತೆ ತಂತ್ರ ಮಾಡತೊಡಗಿದರು. ಇದಕ್ಕೆ ಪ್ರತಿಯಾಗಿ ಯಡ್ಡಿ ಸರ್ಕಾರದ ಪ್ರಭಾವಿ ವಿಪ್ರ ಮಂತ್ರಿಯಾದ ಕಾಗೇರಿ ಸರ್ಕಾರಿ ಮಟ್ಟದಲ್ಲಿ ಸ್ವರ್ಣವಲ್ಲಿ ಸ್ವಾಮಿಯ ಕೆಲಸ-ಬೇಡಿಕೆಗಳಿಗೆಲ್ಲ ಕೊಕ್ಕೆ ಹಾಕಹತ್ತಿದರು.

ಈ ಕಾವಿ-ಖಾದಿಗಳ ಕ್ಷುಲ್ಲಕ ಕಾದಾಟ ಅದ್ಯಾವ ಮಟ್ಟಕ್ಕೆ ಹೋಯಿತೆಂದರೆ ಸ್ವರ್ಣವಲ್ಲಿ ಮಠ ಹುಲೇಕಲ್ ಎಂಬಲ್ಲಿ ನಡೆಸುತ್ತಿದ್ದ ಹೈಸ್ಕೂಲ್‌ನ ಗ್ರ್ಯಾಂಟ್‌ಗೂ ಶಿಕ್ಷಣ ಮಂತ್ರಿ ಆದ ಕಾಗೇರಿ ಅಡ್ಡಗಾಲು ಹಾಕಿ ಕುಂತುಬಿಟ್ಟರು. ಈ ಬಗ್ಗೆ ಮಾತಾಡಲು ಬಂದ ಮಠದ ಪಾರುಪತ್ಯಗಾರರಿಗೆ 'ಮಂತ್ರಿಯಾಗಿ ಯಾವಾಗ ಏನು ಮಾಡಬೇಕು ಎಂದು ಗೊತ್ತು... ಗ್ರ್ಯಾಂಟ್ ಬಗ್ಗೆ ಒತ್ತಡ ಹಾಕಬೇಡಿ....' ಎಂದು ಪರೋಕ್ಷವಾಗಿ ಸ್ವಾಮೀಜಿಗೆ ಮುಖಭಂಗ ಆಗುವಂತೆ ಮಾಡಿದರು. ಸ್ವಾಮಿ ಮತ್ತು ಮಂತ್ರಿ ಮಧ್ಯೆ ರಾಜಿ ಮಾಡಲು ಮಠದ ಪ್ರತಿಷ್ಠಿತ ಭಕ್ತಾಗ್ರೇಸರು ಪ್ರಯತ್ನಿಸಿದರೂ ಅದು ಕೈಗೂಡಲೇ ಇಲ್ಲ.

ಕಾಗೇರಿ ಸ್ವರ್ಣವಲ್ಲಿ ಸ್ವಾಮಿಯನ್ನು ದೂರಮಾಡಿ ರಾಮಚಂದ್ರಾಪುರ ಮಠಾಧೀಶರ ಹತ್ತಿರವಾಗಲು ಓಟ್ ಬ್ಯಾಂಕ್ ರಾಜಕಾರಣವೇ ಕಾರಣ. ಹಿಂದೆ ಕಾಗೇರಿ ಅಂಕೋಲಾ-ಯಲ್ಲಾಪುರದ ಶಾಸಕನಾಗಿದ್ದಾಗ ಆತನಿಗೆ ಸ್ವರ್ಣವಲ್ಲಿ ಸ್ವಾಮಿಯ 'ರಾಜಕೀಯ ಕೃಪೆ' ಬೇಕೇಬೇಕಾಗಿತ್ತು, ಏಕೆಂದರೆ ಯಲ್ಲಾಪುರ ಭಾಗದಲ್ಲಿ ಸ್ವರ್ಣವಲ್ಲಿ ಮಠದ ಶಿಷ್ಯವರ್ಗವೇ ತುಂಬಿಕೊಂಡಿದೆ. ಆದರೆ ಈಗಾತ ಪ್ರತಿನಿಧಿಸುವ ಶಿರಸಿ-ಸಿದ್ದಾಪುರದಲ್ಲಿ ಸ್ವರ್ಣವಲ್ಲಿಗಿಂತ ರಾಮಚಂದ್ರಾಪುರ ಮಠ-ಪೀಠ ಪ್ರಭಾವವೇ ಜಾಸ್ತಿ! ಅಸೆಂಬ್ಲಿ ಕ್ಷೇತ್ರದ ದೊಡ್ಡ ಭಾಗವಾದ ಸಿದ್ದಾಪುರದಲ್ಲಂತೂ ರಾಮಚಂದ್ರಾಪುರ ಮಠ ಅನುಯಾಯಿಗಳದೇ ಮೆಜಾರಿಟಿ! ಹೀಗಾಗಿ ಗುಳ್ಳೇನರಿ ಕಾಗೇರಿ ಸ್ವರ್ಣವಲ್ಲಿ ಸ್ವಾಮಿಗೆ ಕಿರಿಕಿರಿ ಮಾಡಿ ಆತನ ಶತ್ರು ರಾಘವೇಶ್ವರ ಭಾರತಿಯ ಅನುಗ್ರಹ ಗಿಟ್ಟಿಸಿಕೊಂಡಿದ್ದಾರೆ.


ಕಾಗೇರಿ-ಸ್ವರ್ಣವಲ್ಲಿ ಸ್ವಾಮಿ ಇಬ್ಬರೂ ಒಟ್ಟೊಟ್ಟಿಗೆ ಸಾರ್ವಜನಿಕರ ಕಣ್ಣಲ್ಲಿ ಕಳ್ಳರಂತೆ ಕಾಣಿಸುತ್ತಿದ್ದಾರೆ.!!

ಶ್ರೀಮಂತ ಗೋಕರ್ಣ ಮಹಾಬಲೇಶ್ವರವನ್ನು ರಾಘವೇಶ್ವರ ಸ್ವಾಮಿಗೆ ರಾತ್ರಿ ಬೆಳಗಾಗುವುದರಲ್ಲಿ ಕಾಗೇರಿ- ಯಡ್ಡಿ ಕೊಟ್ಟು ಕೈ ತೊಳೆದುಕೊಂಡಾಗ ಸ್ವರ್ಣವಲ್ಲಿ ಸ್ವಾಮಿಗೆ ಏರಿದ್ದ ಸಿಟ್ಟು ತಣ್ಣಗಾಗಿಸಲೆಂದೇ ಈಗ ಯಲ್ಲಾಪುರ ಬಾಳ್ಗಿ ಮನೆ ಸರ್ವೆ ನಂ:ಜಿ.ಆರ್. 4 ಮತ್ತು ಜಿ.ಆರ್.5ರ 0-26-8 ಸರ್ಕಾರಿ ಜಾಗವನ್ನು ಸ್ವರ್ಣವಲ್ಲಿ ಮಠಕ್ಕೆ ಕೊಡಲಾಗಿದೆ. ಲೋಪ್ರೋಫೈಲ್ ಸ್ವರ್ಣವಲ್ಲಿ ಸ್ವಾಮಿ ಇಷ್ಟಕ್ಕೆ ಅಲ್ಪತೃಪ್ತರಾಗಿದ್ದಾರೆ! ಕಾಗೇರಿ-ರಾಮಚಂದ್ರಾಪುರ ಸ್ವಾಮಿ ವಿರುದ್ಧದ ತನ್ನ ಹೋರಾಟಕ್ಕೆಲ್ಲ ಎಳ್ಳುನೀರುಬಿಟ್ಟು ಸದ್ರಿ ಜಾಗದಲ್ಲಿ ಒಂದು ಆಸ್ಪತ್ರೆ-ಸಮಾಜ ಮಂದಿರ ಕಟ್ಟಿ ಕಾವಿ ಹೀರೋ ಆಗಲು ಹೊರಟಿದ್ದಾರೆ. ತನ್ಮೂಲಕ ಎದುರಾಳಿ ರಾಘವೇಶ್ವರ ಭಾರತಿಗೆ ತನ್ನ ಪ್ರತಿಷ್ಠೆ ಬಿಂಬಿಸುವ ಹಠಕ್ಕೆ ಬಿದ್ದಿದ್ದಾರಂತೆ. ಹಾಗಂತ ಶಿರಸಿ ಸೀಮೆಯ ಹೈಗರೇ ಮಾತಾಡಿಕೊಳ್ಳುತ್ತಿದ್ದಾರೆ.

ಈ ದಗಲ್ಬಾಜಿ ಧರ್ಮಕಾರಣದ ನಡುವೆಯೂ ಮಂತ್ರಿ ಮತ್ತು ಸ್ವಾಮಿ ಇಬ್ಬರಿಗೂ 'ರಾಜಿ' ತುಡಿತ ಶುರುವಾಯ್ತು. ಪರಸ್ಪರ ಅಸ್ತಿತ್ವಕ್ಕೆ ದೋಸ್ತಿ ಅನಿವಾರ್ಯವಾಗಿತ್ತು! ಸಿದ್ದಾಪುರದಲ್ಲಿ ಅಲ್ಲವಾದರೂ ಶಿರಸಿಯಲ್ಲಿ ಒಂದಿಷ್ಟು ಶಿಷ್ಯವರ್ಗ ಸ್ವರ್ಣವಲ್ಲಿ ಸ್ವಾಮಿಗೆ ಇದೆ. ಆ ಮಠ ಕಾಗೇರಿಗೆ ಬೇಕಾಗಿತ್ತು, ಹಾಗೆಯೇ ಸರ್ಕಾರದ 'ಧರ್ಮದಾನ' ಗ್ರ್ಯಾಂಟ್, ಭೂಮಿ ಪಡೆಯಲು ಕಾಗೇರಿ ಸಹಕಾರ ಸ್ವರ್ಣವಲ್ಲಿ ಸ್ವಾಮಿಗೆ ಅವಶ್ಯವಾಗಿತ್ತು, ಅಷ್ಟೊತ್ತಿಗೆ ಅದ್ಯಾಕೋ ಸ್ವಾಮಿಯ ಗೋಕರ್ಣ ದೇವಾಲಯ ಹಸ್ತಾಂತರ ವಿರೋಧಿ ಹೋರಾಟವೂ ತಣ್ಣಗಾಗಿತ್ತು. ಯಾಕೆಂದರೆ ಸ್ವರ್ಣವಲ್ಲಿ ಸ್ವಾಮಿ ರಾಘವೇಶ್ವರ ಭಾರತಿಗೆ ಶರಣಾದರೆಂಬುದು ಆತನು ಆರಾಧ್ಯ ದೈವ ಚಂದ್ರಮೌಳೇಶ್ವರನಿಗೆ ಮಾತ್ರ ಗೊತ್ತು!

ಒಟ್ಟಿನಲ್ಲಿ ಪಕ್ಕಾ ಸಮಯಸಾಧಕ ಸ್ವಾಮಿ ಮತ್ತು ಕಾಗೇರಿ ಮಧ್ಯೆ ಈಗ 'ಎಂಗ್ರ ಮಾಣಿ-ಎಂಗ್ರ ಗುರು' ಸಂಬಂಧ ಗಾಢವಾಗಿ ಬೆಳೆಯುತ್ತಿದೆ. ಸ್ವಾಮಿಯ ಕೃಪಾಶೀರ್ವಾದಕ್ಕಾಗಿ ಕಾಗೇರಿ ಈಗ ಕೋಟಿ-ಕೋಟಿ ಸರ್ಕಾರಿ ಹಣ, ಸರ್ಕಾರಿ ಜಾಗ ಎತ್ತೆತ್ತಿ ಕೊಡುತ್ತಿದ್ದಾರೆ. ಸ್ವಾಮೀಜಿಯ ರೈತ ಸಮಾವೇಶದಲ್ಲಿ ಕಾಗೇರಿ ಮಿಂಚಿದ್ದೇ ಮಿಂಚಿದ್ದು. ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟ ಸರ್ಕಾರಿ ನೆಲವನ್ನು ಕಾಗೇರಿ ಕಣ್ಣುಮುಚ್ಚಿ ಸ್ವರ್ಣವಲ್ಲಿ ಮಠಕ್ಕೆ ಧಾರೆಯೆರೆಯುತ್ತಿದ್ದಾರೆ. ಸ್ವಾರ್ಥ ಸಾಧನೆಗಾಗಿ ಮನೆಮುರುಕ ಮಂತ್ರಿ ಕಾಗೇರಿ ಸ್ವಜಾತಿ ಮಠಕ್ಕೆ ಯಲ್ಲಾಪುರದ 26 ಗುಂಟೆ ಸರ್ಕಾರಿ ಜಾಗ ಬಳುವಳಿಯಾಗಿ ಕೊಟ್ಟಿರುವುದೀಗ ದೊಡ್ಡ ಭಾನ್ಗಡಿಯನ್ನೇ ಮಾಡಿಬಿಟ್ಟಿದೆ.


ಮಂತ್ರಿ ಕಾಗೇರಿ ತನ್ನ ರಾಜಕೀಯ ಲಾಭಕ್ಕಾಗಿ ಸ್ವರ್ಣವಲ್ಲಿ ಮಹಾಸಂಸ್ಥಾನಕ್ಕೆ ಕೊಡುತ್ತಿರುವ ಜಮೀನಿದೆಯಲ್ಲ, ಅದು ಯಲ್ಲಾಪುರ ಅಗ್ನಿಶಾಮಕ ಠಾಣೆಗೆಂದು ಮಂಜೂರು ಮಾಡಲಾಗಿರುವ ಜಾಗ! ಕಾಗೇರಿಯ ಕರಾಮತ್ತು ಯಲ್ಲಾಪುರದ ತಾಲ್ಲೂಕಿಗೆ ಗಂಡಾಂತರಕಾರಿ ಆಗಿಬಿಟ್ಟಿದೆ. ಏಪ್ರಿಲ್ 7, 2007ರಂದು ಈ 26 ಗುಂಟೆ ಎಂಟಾಣೆ ಸರ್ಕಾರಿ ಪಡಭೂಮಿಯನ್ನು ಅಗ್ನಿಶಾಮಕ ದಳಕ್ಕೆ ಸರ್ಕಾರ ಲೀಸ್ ಮೇಲೆ ಕೊಟ್ಟಿತ್ತು, ಇದೇ ಜಾಗ ಕೊಡಲು ಮುಖ್ಯ ಕಾರಣ ಎದುರಿನಲ್ಲೇ ಸದಾ ನೀರೊದಗಿಸುವ ಕೆರೆಯೊಂದು ಇರುವುದಾಗಿತ್ತು.



ಭೂಮಿ ಬಳುವಳಿಗಾಗಿ ಕಾಗೇರಿ ರವಾನಿಸಿದ ಪತ್ರಗಳು...


ಈ ಜಾಗದ ಮೇಲೆ ಸ್ವರ್ಣವಲ್ಲಿ ಮಹಾಸಂಸ್ಥಾನ ಪೀಠಾಧ್ಯಕ್ಷ ಗಂಗಾಧರೇಂದ್ರ ಸರಸ್ವತಿ ಮತ್ತವರ ಸಲಹೆಗಾರ ಗಣದ ಕೆಟ್ಟ ಕಣ್ಣು ಅದ್ಯಾವಾಗ ಬಿದ್ದಿತ್ತೋ? ಈ ಜಾಗದಲ್ಲಿ ಆಸ್ಪತ್ರೆ, ಸಮಾಜ ಮಂದಿರ ಕಟ್ಟಿದರೆ 'ಬಿಜಿನೆಸ್' ಭರ್ಜರಿಯಾಗಿ ನಡೆಸಬಹುದೆಂಬ ದೂರಾಲೋಚನೆ ಮಠದ ಮಹಾಮಹಿಮರು ಹಾಕಿದ್ದರು. ಸ್ವರ್ಣವಲ್ಲಿ ಸ್ವಾಮಿಯೊಂದಿಗೆ ಸೌಹಾರ್ದ ಸಂಬಂಧಕ್ಕಾಗಿ ಹಾತೊರೆಯುತ್ತಿದ್ದ ಕಾಗೇರಿ ಮಠದವರ ಆಸೆ ಅರಿತು ಸಹಕರಿಸಿದರು. ಜಿಲ್ಲಾ ಉಸ್ತುವಾರಿ ಮಂತ್ರಿಯಾದ ತನಗೊಂದು 'ಬೇಡಿಕೆ ಮನವಿ' ಮಠದಿಂದ ಬರುವಂತೆ ನೋಡಿಕೊಂಡರು.

ಮಠದಿಂದ ಬೇಡಿಕೆ ಬಂದಿದ್ದೇ ತಡ, ಶರವೇಗದಲ್ಲಿ ಮಂತ್ರಿ ಕಾಗೇರಿ ಜಾಗ ಮಂಜೂರಿಗೆ ಸರ್ಕಾರಿ ಯಂತ್ರವನ್ನು ಸಜ್ಜುಗೊಳಿಸಿಬಿಟ್ಟರು. 31-3-2010ರಂದು ತರಾತುರಿಯಲ್ಲಿ



ಯಲ್ಲಾಪುರದ ತಹಶೀಲ್ದಾರರಿಗೆ ಮಂತ್ರಿಜೀ ಪತ್ರವೊಂದನ್ನು ಗೀಚಿದರು. 'ಯಲ್ಲಾಪುರದ ಬಾಳ್ಗಿಮನೆ ಸರ್ವೆನಂ: ಜಿಆರ್4 ಮತ್ತು ಜಿಆರ್5 ಸರ್ಕಾರಿ ಪಡವನ್ನು ಅಗ್ನಿಶಾಮಕ ದಳದವರಿಗೆ ಲೀಸ್ ಮೇಲೆ ಮಂಜೂರಿ ಮಾಡಲಾಗಿತ್ತು, ಈ ಬಗ್ಗೆ ವಿವಾದವಿದೆಯೆಂಬುದು ನನ್ನ ಗಮನಕ್ಕೆ ಬಂದಿದೆ. ಸದ್ರಿ ಜಾಗದಲ್ಲಿ ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠದವರು ಆರೋಗ್ಯ ಚಿಕಿತ್ಸಾಲಯ ಸ್ಥಾಪಿಸಲು ಉದ್ದೇಶಿಸಿದ್ದು ಮಂಜೂರಾತಿಗೆ ಕೋರಿದ್ದಾರೆ. ಅಗ್ನಿಶಾಮಕ ದಳದವರಿಗೆ ಈ ಜಾಗದ ಲೀಸ್ ರದ್ದುಪಡಿಸಿ ಬೇರೆ ನಿವೇಶನ ನೀಡಲು ಅಗತ್ಯ ಕ್ರಮ ಜರುಗಿಸಬೇಕು ಹಾಗೂ ಸದರಿ ಜಾಗವನ್ನು ಶ್ರೀ ಸ್ವರ್ಣವಲ್ಲಿ ಮಹಾಸಂಸ್ಥಾನದವರಿಗೆ ಕೊಡಲು ಕ್ರಮ ಕೈಗೊಳ್ಳಬೇಕು' ಹಾಗಂತ ಮಂತ್ರಿಗಳು ತಹಶೀಲ್ದಾರ್‌ಗೆ ಲಿಖಿತವಾಗೇ 'ಆಜ್ಞೆ' ಮಾಡಿದರು! ಅಷ್ಟೇ ಅಲ್ಲ ಬಾಯ್ಮಾತಿನ ಕಟ್ಟಪ್ಪಣೆಯೂ ಮಾಡಿಬಿಟ್ಟರು!!

ಇಷ್ಟಕ್ಕೆ ಸುಮ್ಮನಾಗದ ಮಂತ್ರಿ ಕಾಗೇರಿ ಅಗ್ನಿಶಾಮಕ ದಳಕ್ಕೆ ಕೊಟ್ಟ ಜಾಗ ಕಸಿದುಕೊಂಡು ಸ್ವರ್ಣವಲ್ಲಿ ಮಠಾಧೀಶರಿಗೆ ನೀಡಲು ವಿಧಿಬದ್ಧ ಕಾರ್ಯಾಚರಣೆಗೂ ಇಳಿದುಬಿಟ್ಟರು. ಅಂದಿನ ಮುಜರಾಯಿ-ಗೃಹ ಮಂತ್ರಿ ಡಾ.ವಿ.ಎಸ್.ಆಚಾರ್ಯರಿಂದ ಕಂದಾಯ ಮಂತ್ರಿ ಕರುಣಾಕರ ರೆಡ್ಡಿಗಾರುಗಳಿಗೂ 27-1-2010ರಂದು ಪತ್ರ ಬರೆಸಿದರು. ಅದರಲ್ಲಿ - 'ಯಲ್ಲಾಪುರದ ಬಾಳ್ಗಿ ಮನೆಯ 0-26-8 ಜಮೀನು ಅಗ್ನಿಶಾಮಕ ದಳದ ಠಾಣೆ ಮತ್ತು ವಸತಿ ಗೃಹ ನಿರ್ಮಾಣಕ್ಕೆಂದು ಕೊಡಲಾಗಿತ್ತು, ಆದರೆ ಆ ಉದ್ದೇಶಕ್ಕೆ ಈ ಜಾಗ ಸಾಕಾಗದಿರುವುದರಿಂದ ಪ್ರಸ್ತಾವನೆ ತಿರಸ್ಕೃತಗೊಂಡಿದೆ. ಹಾಗಾಗಿ ಈ ಜಾಗ ಶ್ರೀ ಸ್ವರ್ಣವಲ್ಲಿ ಮಹಾಸಂಸ್ಥಾನಕ್ಕೆ ಆರೋಗ್ಯ ಚಿಕಿತ್ಸಾಲಯ ಮತ್ತು ಸಮಾಜ ಮಂದಿರ ನಿರ್ಮಾಣಕ್ಕೆ ಮಂಜೂರಿ ಮಾಡಿ' ಎಂದು ಕೋರಿದ್ದಾರೆ ಅನಾಚಾರಿ ಆಚಾರ್ಯ!



ಮುಜರಾಯಿ ಮತ್ತು ಗೃಹ ಖಾತೆಗಳೆರಡೂ ಚಿಡ್ಡಿ ಬ್ರಾಹ್ಮಣ ಆಚಾರ್ಯನ ಹತ್ತಿರವೇ ಇದ್ದಿದ್ದು ಕಾಗೇರಿ ಸಂಚನ್ನು ಸುಲಭವಾಗಿಸಿಬಿಟ್ಟಿತು! ಅಗ್ನಿಶಾಮಕ ದಳಕ್ಕೆ ಕೊಟ್ಟ ಜಾಗ ಗೃಹಮಂತ್ರಿಯಾಗಿ ಕಸಿದುಕೊಳ್ಳುವ ಮತ್ತು ಅದನ್ನು ಮುಜರಾಯಿ ಮಂತ್ರಿಯಾಗಿ ಸ್ವರ್ಣವಲ್ಲಿ ಮಠಕ್ಕೆ ಬಳುವಳಿಯಾಗಿ ಕೊಡಲು ಆಚಾರ್ಯರಿಗೆ ಯಾವ ಅಡೆತಡೆಯೂ ಇರಲಿಲ್ಲ.

ಕಂದಾಯ ಮಂತ್ರಿಗಳಂತೂ ಈ ವಿಷಯದ ಬಗ್ಗೆ ಅಗತ್ಯ ಕ್ರಮಕೈಗೊಳ್ಳುವಂತೆ ಕಂದಾಯ ಇಲಾಖೆಯ ಕಾರ್ಯದರ್ಶಿ ಮತ್ತು ಉತ್ತರ ಕನ್ನಡದ ಜಿಲ್ಲಾಧಿಕಾರಿಗೆ ಸೂಚಿಸಿದ್ದೇನೆಂದು (26-3-2010) ಗೃಹ ಮತ್ತು ಮುಜರಾಯಿ ಮಂತ್ರಿ ಆಚಾರ್ಯರಿಗೆ ಪತ್ರ ಬರೆದರು. ಅಲ್ಲಿಗೆ ಕಾಗೇರಿಯ ಸ್ವಜಾತಿ ಮಠಕ್ಕೆ ಸರ್ಕಾರಿ ಜಾಗ ಕೊಡುವ ಪಾಪದ ಕಾರ್ಯ ಫಲ ಕೊಟ್ಟಂತಾಗಿತ್ತು!! ಇಷ್ಟಾದರೂ ಕಾನೂನು ನಿಷ್ಠ ಅಧಿಕಾರಿಗಳಿಂದಾಗಿ ಸದ್ಯ ಭೂಮಿ ಮಠದ ಕೈವಶವಾಗಿಲ್ಲ, ಇತ್ತ ಕಾಗೇರಿ ಕಟಪಿಟಿ ನಿಲ್ಲಿಸಿಲ್ಲ ಆದರೆ ಮಠದವರು ಮಾತ್ರ ಸೈಟ್ ಕಬ್ಜಾ ಮಾಡಿಕೊಂಡು ತಮ್ಮ 'ದಂಧೆ'ಗೆ ಬೇಕಾದ ಕಾಮಗಾರಿಗೆ ಶುರುಹಚ್ಚಿಕೊಂಡಿದ್ದಾರೆ.

ಇದು ಶಿರಸಿ ಸೀಮೆಯನ್ನು ಬ್ರಾಹ್ಮಣ ಸಾಮ್ರಾಜ್ಯ ಮಾಡುವ ಕಾಗೇರಿ ಕರ್ಮಕಾಂಡದ ಸಣ್ಣ ಸ್ಯಾಂಪಲ್ ಅಷ್ಟೇ. ಕಾನೂನು-ನೈತಿಕತೆ ಧಿಕ್ಕರಿಸಿ ವೈದಿಕಶಾಹಿ ವಿಸ್ತರಿಸಿ ಮಾಡುತ್ತಿರುವ ಕಾಗೇರಿಯಿಂದ ಉತ್ತರ ಕನ್ನಡ ತತ್ತರಿಸಿಹೋಗಿದೆ. ಈ ಶನಿಯಿಂದ ಜಿಲ್ಲೆಗೆಂದು ಬಿಡುಗಡೆ ಎಂದು ಜನ ಬಾಯಿಬಡಿದುಕೊಳ್ಳುತ್ತಿದ್ದಾರೆ.

ಈ ಬಂಗಾರಪ್ಪ ನಿಂತ ನೀರಲ್ಲ

ಅನಂತೇಶ್ವರಿ ಒಂದಾದ ಮೇಲೆ ಯಡ್ಡಿ ಕತೆ ಮುಗಿಯಿತು, ಮುಂದೆ "ನಮ್ಮ ಅನಂತೂನೇ ಮುಖ್ಯಮಂತ್ರಿ, ಈಶ್ವರಿನೇ ಉಪಮುಖ್ಯಮಂತ್ರಿ" ಎಂದು ಕರ್ನಾಟಕದ ವಿಪ್ರಸಮೂಹ ಮತ್ತು ಕುರುಬ ಕುಲದವರು ಖುಷಿಪಡುತ್ತಿದ್ದಾರಂತಲ್ಲಾ, ಆದರೆ ಅಟ್ಟದ ಮೇಲಿನ ಬಿಜೆಪಿಗಳು "ಎಡೂರಪ್ಪನನ್ನು ಇಳಿಸುವುದೂ ಒಂದೆ, ಬಿಜೆಪಿಯನ್ನು ತಿಪ್ಪೆಗೆಸೆಯುವುದೂ ಒಂದೇ. ಮೂರ್ಖನ ಕೈಗೆ ಚಂದ್ರಾಯುಧ ಸಿಕ್ಕಿಬಿಟ್ಟಿದೆ. ಆತನೇ ಕೆಳಗಿಳಿಸುವವರೆಗೆ ಮರೆಯಲ್ಲಿ ಕಾಯಿರಿ. ನಿಮ್ಮ ಮತ್ತು ಅವನ ಅಗ್ನಿಪರೀಕ್ಷೆಗೆಂದು ಉಪಚುನಾವಣೆ ಬಂದಿದೆ. ಅಲ್ಲಿ ಅವನ ಮತ್ತು ನಿಮ್ಮ ಅಗ್ನಿಪರೀಕ್ಷೆ ಆದ ನಂತರ ಯಡ್ಡಿ ಬದಲಾವಣೆ ಬಗ್ಗೆ ಯೋಚಿಸೋಣ" ಎಂದು ಹೇಳಿ ಕಳುಹಿಸಿದರಂತಲ್ಲಾ, ಇದರಿಂದ ಕಂಗಾಲಾದ ಅನಂತೇಶ್ವರಿ ಯಡ್ಡಿಯನ್ನು ಹುಡುಕುತ್ತ ಬಂದು, ಹಲ್ಲು ಕಿರಿದು ಆತನನ್ನು ಆಲಂಗಿಸಿ "ನೀವೇ ನಮ್ಮ ನಾಯಕ" ಎಂದವಂತಲ್ಲಾ, ಥೂತ್ತೇರಿ!

* * * * * * *

ಥೂತ್ತೇರಿ

ಯಾಹೂ

ಯಡ್ಡಿಯ ಎಗ್ಗಿಲ್ಲದ ಹಗಲು ದರೋಡೆ ನೋಡಿದ ಆತನ ಜಿಲ್ಲೆಯ ಅಧಿಕಾರಿಗಳೆಲ್ಲಾ ಹುಚ್ಚುಕಳ್ಳರಾಗಿ ಹೋಗಿದ್ದಾರಂತಲ್ಲಾ. ಈ ಪೈಕಿ ಪೊಲೀಸ್ ಪ್ಯಾದೆಯೊಬ್ಬ ಲಕ್ಷಾಂತರ ರೂಪಾಯಿ ಬೆಲೆಬಾಳುವ ಕಳ್ಳನಾಟಾದೊಂದಿಗೇ ಸಿಕ್ಕಿಬಿದ್ದನಂತಲ್ಲಾ. ಅರಣ್ಯ ಇಲಾಖೆಯವರು ಮತ್ತು ಲೋಕಾಯುಕ್ತರು ಜಂಟಿಯಾಗಿ ಸದರಿ ಪ್ಯಾದೆಯನ್ನು ವಿಚಾರಿಸಲಾಗಿ ಪ್ಯಾದೆ ತಮಿಳುನಾಡು ಮೂಲದ ಮುರುಗನ್ ಎಂಬುದು ಪತ್ತೆಯಾಯ್ತಂತಲ್ಲಾ. ಇನ್ನೂ ವಿಚಾರಿಸಲಾಗಿ, ಮನೆಕಟ್ಟಲೆಂದು ಪರವಾನಗಿ ಇಲ್ಲದ ನಾಟಾಗಳೇಬೇಕಾದಷ್ಟಿದ್ದು, ಸದರಿ ಪ್ಯಾದೆಗೆ ಈಚೆಗೆ ಬಡ್ತಿ ಸಿಕ್ಕಿ ಬೆಂಗಳೂರಿಗೆ ಮುಖ್ಯಪೇದೆಯಾಗಿ ವರ್ಗಾವಣೆಗೊಂಡಿದ್ದಾನೆಂದು ಪತ್ತೆಯಾಯ್ತಂತಲ್ಲಾ, ಕಳ್ಳನಾಟಾ ಪತ್ತೆಯಾದ ಮನೆ ಮುಂಭಾಗಕ್ಕೆ ಬಂದು ನೋಡಿದರೆ ಮನೆ ಬಾಗಿಲಲ್ಲಿ 'ಎಸ್. ಮುರುಗನ್, ಜಿಲ್ಲಾ ರಕ್ಷಣಾಧಿಕಾರಿ, ಶಿವಮೊಗ್ಗ' ಎಂಬ ಬೋರ್ಡು ನೇತಾಡುತ್ತಿತ್ತಂತಲ್ಲಾ, ಥೂತ್ತೇರಿ!!

* * * * * * *

ಎಡೂರಪ್ಪ ಮತ್ತು ದೇವೇಗೌಡ ತಮ್ಮ ಮಕ್ಕಳಿಗಾಗಿ ಮಾಡಬಾರದ್ದನ್ನೆಲ್ಲಾ ಮಾಡುತ್ತ ಸುಖ, ಸಂತೋಷಗಳಿಂದ ಮೆರೆಯುತ್ತಿರುವಾಗ ನಮ್ಮ ವರ್ಣರಂಜಿತ ರಾಜಕಾರಣಿ ಬಂಗಾರಪ್ಪ ಹಿರಿಮಗನ ಜೊತೆ ಜಗಳವಾಡಿಕೊಂಡು ಅಳುತ್ತಿದ್ದಾರೆಂಬ ಸುದ್ದಿ ಬಂತಲ್ಲಾ. ಎಂದೂ ಯಾವ ಕಾರಣಕ್ಕೂ ಕಣ್ಣೀರಾಕದ 'ಬಂ'ಗೆ ಇಂತಹ ಸ್ಥಿತಿ ಬರಬಾರದಿತ್ತು, ಒಂದೆರಡು ಸಾಂತ್ವನದ ಮಾತೇಳಲು ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಯಾರೇ ಕೂಗಾಡಲಿ, ಊರೇ ಹೋರಾಡಲಿ, ನಿನ್ನ ನೆಮ್ಮದಿಗೆ ಭಂಗವಿಲ್ಲ, ಎಮ್ಮೇ ನಿನಗೆ ಸಾಟಿಯಿಲ್ಲ..."

"ಹಲೋ ಯಾರು?"

"ನಾನು ಸಾರ್, ಯಾಹೂ ಅಂತ ಪತ್ರಕರ್ತ."

"ಏನ್ರಿ ಯಾಹೂ ಎಲ್ಲಿದ್ದಿರಿ? ಚನ್ನಾಗಿದ್ದೀರ?"

"ನಂದಿರ್ಲಿ, ನೀವೇಗಿದ್ದಿರಿ ಸಾರ್? ಕುಮಾರ್ ಹೇಗಿದಾರೆ?"

"ನಾನು ಚನ್ನಾಗಿದ್ದೀನಿ. ಕುಮಾರ್ ಮುಂದಿನ ಮುಖ್ಯಮಂತ್ರಿ ಕಂಣ್ರೀ."

"ಯಾವಾಗೊಂದಾದ್ರಿ ಸಾರ್?"

"ಯಾವ ಕುಮಾರ್ ವಿಷಯ ನೀವು ಹೇಳ್ತಾಯಿರದು?"

"ಕುಮಾರ್ ಬಂಗಾರಪ್ಪನ ವಿಷಯ ಸಾರ್."

"ಅವನ ಸುದ್ದಿ ಎತ್ತಬೇಡಿ ನನ್ನೆದುರಿಗೆ. ಬೇರೆ ಮಾತಾಡಿ."

"ಆತ ನಿಮ್ಮ ಹಿರಿ ಮಗ ಸಾರ್."

"ಇರಬಹುದು. ಯಾವಾಗ ಅವ್ರುನು ನನ್ನನ್ನ ಮನೆಯಿಂದ ಹೊರಗೋಗೋ ತರ ನಡಿಸಿಕೊಂಡನೊ, ಅವತ್ತೆ ಅವ್ರುನು ನನ್ನ ಭಾಗಕ್ಕೆ ಇಲ್ಲ, ಅವನ ಹೆಸರಿನವ್ರುನೆ ಒಬ್ಬ ಸಿಕ್ಕಿದಾನೆ. ಅವ್ರುನಿಗೋಸ್ಕರ ನನ್ನ ಮುಂದಿನ ರಾಜಕಾರಣನ ಮೀಸಲಿಟ್ಟಿದ್ದಿನಿ."

"ನಿಮ್ಮ ಮಾತಿನಿಂದ ದೇವೇಗೌಡ್ರು ಕುಟುಂಬ ಒಳಗೊಳಗೆ ನಗ್ತಾಯಿದಿಯಂತಲ್ಲಾ ಸಾರ್?"

"ನಗಲಿ, ಐ ಡೋಂಟ್ ಕೇರ್. ನಾನೀಗ ನನ್ನ ಮಗನ ಮೇಲೆ ಸೇಡು ತೀರಿಸಿಕೊಬೇಕಾಗಿದೆ. ಅದಕ್ಕೆ ಒಂದು ವೇದಿಕೆ ಸಿಕ್ಕಿದೆ ಸಾಕು."

"ಅಷ್ಟೊಂದು ಸೇಡು ಯಾಕೆ ಸಾರ್? ಅವ್ರುನು ನಿಮ್ಮ ಮಗ ಅಲ್ಲವಾ?"

"ಮಾತು ಮಾತಿಗೂ ಮಗ ಅನ್ನಬೇಡಿ."

"ಬಬ್ರುವಾಹನ ಸಿನಿಮಾದ ಡೈಲಾಗೇಳ್ತಿರಲ್ಲ ಸಾರ್?"

"ಸರಿಯಾದ ಪ್ರಶ್ನೆ ಕೇಳಿ, ತಲೆಹರಟೆ ಬೇಡಿ."

"ಸಾರಿ ಸಾರ್, ಕುಮಾರ್ ಬಂಗಾರಪ್ಪ ಇದುವರೆಗೂ ತಪ್ಪು ಮಾತಾಡಿಲ್ಲ. ಆತ ಒಂದಿಷ್ಟು ಸ್ವಾರ್ಥಿ ಇರಬಹುದು. ಆದ್ರೆ ಆತನ ತಾಯಿ ಗುಣ ಅವನಲ್ಲಿ ಬಂದಿರೋದ್ರಿಂದ ಸಹಜವಾಗಿ ನಿಮ್ಮನ್ನ ಎದುರಿಸೊ ಶಕ್ತಿ ಬಂದಿದೆ. ಸರಿಯಾಗಿರೊ ಮಗನೆದ್ರಿಗೆ ನೀವೇ ತಪ್ಪು ತಿದ್ದಿಕ್ಕೊಂಡು ಮಗನನ್ನು ಗೆಳೆಯನಂಗೆ ಕಂಡುಕೊಂಡು ಹೋಗಬವ್ರುದಿತ್ತಲ್ಲ ಸಾರ್?"

"ಈ ಬಂಗಾರಪ್ಪನ ಸ್ಟೈಲನ್ನು ಇಡೀ ಕರ್ನಾಟಕನೇ ಒಪ್ಪಿಕೊಂಡಿರುವಾಗ ಇವ್ರುನ್ದೇನ್ರಿ ಬದ್ನೆಕಾಯಿ ರಾಜಕಾರಣ? ನಿನ್ನ ರಾಜಕಾರಣ ಇರ್ಲಿ, ಮಧುಗೊಂದಿಷ್ಟು ಅವಕಾಶ ಮಾಡಿಕೊಡು ಅಂದ್ರೆ ನನಿಗೇ ಬುದ್ಧಿ ಹೇಳ್ತಾನೆ, ಸ್ಟುಪಿಡ್."

"ಸಾರ್, ನೀವು ಬೈದಂಗೆಲ್ಲಾ ಬೈಸಿಗೊಂಡು ಪುನಃ ನಿಮ್ಮತ್ರಕೆ ಬರಕ್ಕೆ ಅವ್ರುನೇನು ಕಾಗೋಡು ತಿಮ್ಮಪ್ಪಲ್ಲ. ನಾವು ಬಲವಂತವಾಗಿ ನಮ್ಮ ಅಭಿಪ್ರಾಯನ ಮಕ್ಕಳ ಮೇಲೆ ಹೇರಕ್ಕೋಗಬಾರ್ದು. ನಾವು ಸರಿಯಿದ್ರೆ ಹೇರಬವ್ರುದು ಅಲ್ಲವಾ?"

"ನಾನು ಸರಿಯಾಗೇ ಇದ್ದಿನಿ ಕಂಡ್ರೀ."

"ದೇವರಾಣೆ ಇಲ್ಲ ಸಾರ್. ನೀವು ಈ ಕ್ಷಣಕ್ಕೂ ಸರಿಯಿಲ್ಲ. ಸರಿ ಇದ್ದಿದ್ರೆ ಎಂಪಿಯಾಗಿರತಿದ್ರಿ ಇಲ್ಲ ಎಮ್ಮೆಲ್ಲೆ ಆಗಿರತಿದ್ರಿ."



"ಅವ್ರುನು ಕಳೆದ ಜಿಲ್ಲಾ ಪಂಚಾಯ್ತಿ ಯಲಕ್ಷನ್ ಟೈಮಲ್ಲಿ ಕಾಂಗ್ರೆಸ್ ಪಾರ್ಟಿ ಕೊಟ್ಟ ಹಣನೆಲ್ಲಾ ಲಪಟಾಯಿಸಿದ್ನಂತೆ. ಅದರಲ್ಲೇನಾರ ನಿಮಗೆ ಪಾಲ್ ಕೊಟ್ನೇನ್ರಿ?"

"ರಿಯಲಿ ಗ್ರೇಟ್ ಬಂಗಾರಪ್ಪ ಸಾರ್ ನೀವು. ಈ ದೇಶದ ರಾಜಕಾರಣದಲ್ಲಿ ಮಗನ ಮೇಲೆ ಇಂತ ಆಪಾದನೆ ಮಾಡಿದ ಏಕೈಕ ತಂದೆ ನೀವು."

"ಆಪಾದನೆ ಅಲ್ಲ ಕಂಡ್ರೀ, ನಿಜವಾಗ್ಲು ನಡದದ್ದು. ಈ ಕಾಂಗ್ರೆಸ್ ಲೋಫರ್‌ಗಳು ನನ್ನನ್ನ ಮುಗಸೋದಕ್ಕೆ ಅವ್ರುನನ್ನ ಎತ್ತಿ ಕಟ್ಟಿಕ್ಕೋಗಿ ದುಡ್ನು ಕಳಕೊಂಡ್ರು. ಮೊದ್ಲೆ ಅದು ಮುಳುಗ್ತಾಯಿರೊ ಹಡಗು, ಅದರಲ್ಲಿ ಇದು ಬೇರೆ."

"ಕಾಂಗ್ರೆ ಹಡಗು ಮುಳುಗಂಗೆ ಮಾಡಿರೋರಲ್ಲಿ ನೀವೂ ಒಬ್ಬರಲ್ಲವ ಸಾರ್?"

"ಅದರಲ್ಲೇನು ಅನುಮಾನ? ಆ ಪಾರ್ಟಿನ ಪವರ್‌ರಿಂದ ದೂರ ಇಟ್ಟರೋನೇ ನಾನು. ಇನ್ನು ಮುಂದು ಅದು ಬರದಂಗೆ ನೋಡಿಕೊಳ್ತಿನಿ."

"ಒಂದು ವೇಳೆ ಬಿಜೆಪಿನೆ ಬಂದ್ರೆ?"

"ಅವ್ರುರು ಬಂದ್ರು ಬರ್ಲಿ, ಕಾಂಗ್ರೆಸ್ ಬರಬಾರ್ದು."

"ಅಷ್ಟೊಂದು ಸೇಡ್ಯಾಕೆ ಸಾರ್ ಆ ಪಾರ್ಟಿ ಮೇಲೆ? ಅದು ನಿಮ್ಮನ್ನ ಮಂತ್ರಿ, ಮುಖ್ಯಮಂತ್ರಿ ಮಾಡಿತ್ತಲ್ಲವೆ?"

"ಮಾಡಿದ್ದಲ್ಲ ಕಂಡ್ರಿ, ನಾನೆ ಆದದ್ದು. ನರಸಿಂಗರಾಯನಿಗೆ ಹಣ ಕೊಡ್ಲಿಲ್ಲ, ಕೊಟ್ಟಿದ್ರೆ ನಾನೇ ಇರತಿದ್ದೆ. ಆಗ ಮೊಯಿಲಿ ಮದುವೆಗೋಗಿ ವಾಲಗ ಊದುಬೇಕಾಗಿತ್ತು ಗೊತ್ತ?"

"ನೋಡಿ, ಮೊಯ್ಲಿ ಕಾಂಗ್ರೆಸ್ ನಿಷ್ಠೆ ಆತನನ್ನು ಕೇಂದ್ರದಲ್ಲಿ ಮಂತ್ರಿ ಮಾಡಿದೆ, ನಿಮ್ಮ ಅಸಹನೆ ದೇವೇಗೌಡ್ರ ಪಾರ್ಟಿ ಆಫೀಸ್ ಬಾಗಲಲ್ಲಿ ನಿಲ್ಲಿಸಿದೆ. ಇದು ಸರಿ ಅಂತೀರಾ?"

"ಈ ಬಂಗಾರಪ್ಪ ನಿಂತ ನೀರಲ್ಲ"

"ಆ ನೀರು ಹೊಳೆ ಸೇರಬೇಕು. ದೇವೇಗೌಡ್ರ ಬಾವಿ ಸೇರಬಾರ್ದು."

"ಒಳ್ಳೆ ಬಾವಿಯಾದ್ರೆ ಯಾಕ್ ಸೇರಬಾರ್ದು?"

"ಅದು ಸಾರ್ವಜನಿಕರ ಬಾವಿಯಲ್ಲ, ಖಾಸಗಿ ಬಾವಿ."

"ಆ ಖಾಸಗಿ ಬಾವಿನ ಸಾರ್ವಜನಿಕರ ಬಾವಿ ಮಾಡೋ ಶಕ್ತಿ ಈ ಬಂಗಾರಪ್ಪನಿಗಿದೆ."

"ಅದು ಸಾಧ್ಯವಾಗದಿದ್ರೆ, ಅದ್ಕೆ ಬೀಳ್ತೀರ!"

"ಯೂ ರ್‍ಯಾಸ್ಕಲ್, ಇಡ್ರಿ ಫೋನ್!"

"ನೀವೇ ಇಟ್ರಾಯ್ತಲ್ಲ, ಸಾರ್?!"

"ಟಕ್."



ಭ್ರಷ್ಟ ಸ್ತ್ರೀ ಪೀಡಕ IPS ಮುರುಗನ್

ಹಾಲಿ ಡಿಐಜಿ ಮುರುಗನ್ ವಿರುದ್ಧ ಕೇವಲ ಕಳ್ಳ ನಾಟಾ ಸಾಗಾಣಿಕೆಯ ಕೇಸ್ ಮಾತ್ರವಲ್ಲದೆ ಇವನು ಶಿವಮೊಗ್ಗ, ಉಡುಪಿ, ಬಿಜಾಪುರ, ಮೈಸೂರು ಹಾಗೂ ಚಿತ್ರದುರ್ಗದಲ್ಲಿದ್ದಾಗ ನಡೆಸಿರಬಹುದಾದ ಸ್ತ್ರೀಪೀಡನೆ, ಮುಗ್ಧ ಮಹಿಳೆಯರ ಲೈಂಗಿಕ ಶೋಷಣೆಗಳ ಬಗ್ಗೆಯೇ ಒಂದು ವಿಶೇಷ ತನಿಖೆ ನಡೆಸಬೇಕಿದೆ.

• ಪಾರ್ವತೀಶ

ಮುರುಗನ್ ಮುಖವಾಡ ಕಳಚಿ ಬಿದ್ದಿದೆ.

ಕರ್ನಾಟಕ ಪೊಲೀಸ್ ಇಲಾಖೆಯ ಇತಿಹಾಸದಲ್ಲೇ ಕಂಡುಕೇಳರಿಯದಷ್ಟು ಕೆಟ್ಟ ಆರೋಪಗಳು ಈಗ ಐಪಿಎಸ್ ಅಧಿಕಾರಿ ಎಸ್. ಮುರುಗನ್ ವಿರುದ್ಧ ಕೇಳಿಬರುತ್ತಿವೆ.

ನಾಟಾ ಕಳ್ಳ ಸಾಗಾಣಿಕೆ


ಬ್ರಹ್ಮಾಂಡ ಭ್ರಷ್ಟಾಚಾರ

ಸ್ತ್ರೀಪೀಡನೆ...

ಇದರಲ್ಲಿ ಪ್ರಮುಖವಾದವುಗಳು.

ಸರ್ಕಾರದ ಕಣ್ಣಲ್ಲಿ ನಕ್ಸಲೀಯರನ್ನು ಬಗ್ಗುಬಡಿದ ಶೂರನಂತೆಯೂ, ಕೆಲ ಮಾಧ್ಯಮಗಳಿಗೆ ದಕ್ಷ ಅಧಿಕಾರಿಯಂತೆಯೂ ಇದುವರೆಗೆ ಕಂಡಿದ್ದ ಮುರುಗನ್ ಈಗ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾನೆ.

ಡಿಐಜಿ ಲೆವೆಲ್‌ನ ಪೊಲೀಸ್ ಅಧಿಕಾರಿಯೊಬ್ಬ ಹೀಗೆ ಕಳ್ಳ ನಾಟಾ ಸಾಗಿಸಿ ಸಿಕ್ಕಿಬಿದ್ದಿರುವುದು ಮಾತ್ರವಲ್ಲ ಸ್ತ್ರೀಲೋಲುಪತೆಗೂ ಕುಖ್ಯಾತಿ ಪಡೆಯುತ್ತಿರುವುದು ವಿಷಾದನೀಯ. ರಾಜ್ಯದ ಮುಖ್ಯಮಂತ್ರಿ ಯಡ್ಡಿ ಹಾಗೂ ಬಿಜೆಪಿ ಅಧ್ಯಕ್ಷ ಈಶ್ವರಪ್ಪನ ಜಿಲ್ಲೆ ಶಿವಮೊಗ್ಗದಲ್ಲೇ ಈ ಮುರುಗನ್ ಈ ಅಕ್ರಮಗಳನ್ನು ನಿರಾತಂಕವಾಗಿ ಮಾಡಿಕೊಂಡು ಬಂದಿರುವುದಂತೂ ದಿಗ್ಭ್ರಮೆ ಹುಟ್ಟಿಸುವಂತಿದೆ.




ತನ್ನ ಅಧಿಕೃತ ಕ್ವಾಟ್ರರ್ಸ್‌ನಲ್ಲೇ ಲಕ್ಷಾಂತರ ಬೆಲೆಯ ಕಳ್ಳನಾಟಾ ಸಂಗ್ರಹಿಸಿಟ್ಟುಕೊಂಡು ಈಗ ಸಿಕ್ಕಿಬಿದ್ದಿರುವ ಮುರುಗನ್ ವಿರುದ್ಧ ಇನ್ನೆರಡು ಪ್ರಕರಣಗಳು ದಾಖಲಾಗುವ ಹಂತದಲ್ಲಿದೆ. ಒಂದು ಸ್ತ್ರೀಪೀಡನೆಯದ್ದು ಇನ್ನೊಂದು ಗಣಿ ಲೈಸೆನ್ಸ್ ಕೊಡಿಸುತ್ತೇನೆಂದು ಚಿತ್ರದುರ್ಗದ ಮಹಿಳೆಯೊಬ್ಬಳಿಗೆ 50 ಲಕ್ಷ ವಂಚಿಸಿರುವುದು. ಇವೆರಡೂ ಕೇಸ್‌ಗಳು ಕ್ರಮವಾಗಿ ಲೋಕಾಯುಕ್ತ ಹಾಗೂ ರಾಜ್ಯ ಮಹಿಳಾ ಆಯೋಗದೆದುರು ಸದ್ಯಕ್ಕೆ ದೂರಿನ ರೂಪದಲ್ಲಿ ಪ್ರತ್ಯಕ್ಷವಾಗಲಿವೆ!

ಶಿವಮೊಗ್ಗದ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್‌ನ ಅಧಿಕೃತ ನಿವಾಸದಲ್ಲೇ ಎರಡು ಲಾರಿ ಲೋಡಿನಷ್ಟು ಹೆಬ್ಬಲಸು, ಬೀಟೆ ಹಾಗೂ ಟೀಕ್ ಮರದ ದಿಮ್ಮಿಗಳನ್ನು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡಿದ್ದ ಆರೋಪದ ಮೇಲೆ ಜಿಲ್ಲಾ ಅರಣ್ಯಾಧಿಕಾರಿಗಳು ಹಾಗೂ ಲೋಕಾಯುಕ್ತ ಪೊಲೀಸ್ ಆಫೀಸರ್‌ಗಳು ಮುರುಗನ್ ಮನೆಯ ಮೇಲೆ ಮಾರ್ಚ್ 30ರ ಸಂಜೆ ದಾಳಿ ಮಾಡಿದ್ದಾರೆ.

ಈ ನಾಟಾ ಸಾಗಾಣಿಕೆಗೆ ಅರ್ಧ ಭಾಗಕ್ಕೆ ಪರ್ಮಿಟ್ ಇತ್ತೆಂಬ ಸುದ್ದಿಯೂ ಇದೆ. ಅಂದರೆ ಉಳಿದರ್ಧ ನಾಟಾ ಕಳ್ಳತನದ್ದು ಎಂಬುದು ನಿಜ ಎಂದಾಯಿತು. ಅಷ್ಟೇ ಅಲ್ಲ, ಈ ಪರ್ಮಿಟ್ ಅಸಲಿಗೆ ಮುರುಗನ್ ಹೆಸರಿನಲ್ಲೇ ಇರಲಿಲ್ಲ, ಹಾಗಿದ್ದ ಮೇಲೆ ಈತನ ಮನೆಯ ಹಿತ್ತಲಲ್ಲಿ ಅಕ್ರಮ ನಾಟಾ ಹೇಗೆ ಬಂತೆಂಬ ಪ್ರಶ್ನೆ ಉಳಿದೇ ಉಳಿಯುತ್ತದೆ.

ಇದಕ್ಕಿಂತ ಮುಖ್ಯ ವಿಚಾರವೇನೆಂದರೆ ಈ IPS ಮುರುಗನ್ ಎಂತವನೆಂಬುದು.



ಹಿತೇಂದ್ರ ಪ್ರಸಾದ್

1997ರ ಕರ್ನಾಟಕ ಕೇಡರ್‌ನ ಐಪಿಎಸ್ ಆಫೀಸರ್ ಆಗಿ ರಾಜ್ಯಕ್ಕೆ ಬಂದಿರುವ ಮುರುಗನ್ ಈ ಹದಿಮೂರು ವರ್ಷಗಳಲ್ಲಿ ಚಿತ್ರದುರ್ಗ, ಉಡುಪಿ, ಮೈಸೂರು, ಬಿಜಾಪುರ ಹಾಗೂ ಶಿವಮೊಗ್ಗ ಎಸ್‌ಪಿಯಾಗಿ ಕೆಲಸ ಮಾಡಿದ್ದಾನೆ. ಅಧಿಕಾರದ ಮದ, ಅಹಂಕಾರಗಳ ಕತೆ ಒಂದಾದರೆ ಭಯಂಕರ ಭ್ರಷ್ಟಾಚಾರ ಹಾಗೂ ಸ್ತ್ರೀಪೀಡನೆಗಳ ಪ್ರಕರಣಗಳೂ ಮುರುಗನ್ ವಿರುದ್ಧ ಕೇಳಿ ಬರುತ್ತಿವೆ. ನಕ್ಸಲೀಯರ ದಮನದ ಹೆಸರಿನಲ್ಲಿ ಮುರುಗನ್ ಎಸಗಿದ ಅನ್ಯಾಯಗಳು, ಅಮಾಯಕರಿಗೆ ನೀಡಿದ ಕಿರುಕುಳಗಳಂತೂ ಅಸಂಖ್ಯ.

ಸ್ತ್ರೀಪೀಡನೆ–ಇಲಾಖೆಗೂ ದೂರು

2003ರಿಂದ 2007ರವರೆಗೂ ಉಡುಪಿ ಜಿಲ್ಲಾ ಎಸ್‌ಪಿಯಾಗಿದ್ದ ಮುರುಗನ್ ವಿರುದ್ಧ ದಿನಾಂಕ 25-10-2007ರಲ್ಲಿ ಮಹಿಳೆಯೊಬ್ಬರಿಂದ ಒಂದು ಲಿಖಿತ ದೂರು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸರ ಬಳಿ ದಾಖಲಾಗುತ್ತದೆ. ಆ ದೂರಿನಲ್ಲಿ ಮುರುಗನ್ ಒಬ್ಬ ಲಂಪಟನೆಂತಲೂ, ಫ್ಲರ್ಟ್ ಮಾಡುತ್ತಾ ತನ್ನನ್ನು ಎಸ್‌ಪಿ ಕಚೇರಿಯ ಚೇಂಬರ್‌ನಲ್ಲಿಯೇ ಬಲಾತ್ಕಾರ ಮಾಡಲು ಯತ್ನಿಸಿದನೆಂತಲೂ ಹೇಳಿದ್ದಾರೆ. ಅಷ್ಟಲ್ಲದೆ ಆಕೆಯನ್ನು ಮನೆಗೆ ಬಾ, ಮಂಗಳೂರಿನ ಹೋಟೆಲ್‌ಗೆ ಬಾ ಎಂತಲೂ ಮುರುಗನ್ ಪೀಡಿಸುತ್ತಿದ್ದನಂತೆ. ತನ್ನ ಕುಟುಂಬದ ಜಗಳವೊಂದರ ಸಂಬಂಧ ಪೊಲೀಸ್ ನೆರವು ಯಾಚಿಸಿ ಎಸ್‌ಪಿ ಮುರುಗನ್ ಬಳಿ ಆ ಮಹಿಳೆ ಹೋಗಿದ್ದರು. ಭೇಟಿಯಾದ ಮರು ನಿಮಿಷದಲ್ಲೇ 'ನೀವು ನೋಡೋಕೆ ಚೆನ್ನಾಗಿದ್ದೀರಿ' ಅಂದ. ಮುಂದಿನ ಭೇಟಿಗೆ ಆಕೆ ಬಂದಾಗ 'ಎಲ್ಲಿ ನಿಮ್ಮ ಕೈ ತೋರಿಸಿ, ನನಗೆ ಹಸ್ತರೇಖೆ ಶಾಸ್ತ್ರ ಗೊತ್ತು' ಅಂದು ಕೈಯನ್ನೇ ಹಿಡಿದೆಳೆದ. ಆ ಮಹಿಳೆ ಪ್ರತಿಭಟಿಸಿದಾಗ 'ನಾನ್ ಕೆಟ್ಟೋನಲ್ಲ ಸಾಫ್ಟ್‌ವೇರು, ನನಗಾಗಿ ಹುಡುಗೀರು ಕ್ಯೂ ನಿಲ್ತಾರೆ ಗೊತ್ತಾ' ಅಂತಲೂ ಉಡಾಫೆ ಮಾತಾಡಿದ್ದಾನೆ. ಮನೆಯ ಕಲಹ ಬಗೆಹರಿಯದೆ ಆ ಮಹಿಳೆ ಮತ್ತೊಮ್ಮೆ ಎಸ್‌ಪಿ ಆಫೀಸ್‌ಗೆ ಹೋದಾಗ ತಮ್ಮ ಆ್ಯಂಟಿ ಚೇಂಬರ್‌ಗೆ ಪುಸಲಾಯಿಸಿ ಕರೆದು ಆಕೆಯನ್ನು ಹಾಸಿಗೆ ಮೇಲಕ್ಕೆಸೆದು ಅರ್ಜೆಂಟಾಗಿ ಪ್ಯಾಂಟ್ ಬಿಚ್ಚಲು ಹೊರಟಿದ್ದ ಎಂತಲೂ ಆಕೆ ದೂರು ನೀಡಿದ್ದಳು. ನಂತರ ಏನಾಯಿತೆಂದರೆ ಪೊಲೀಸ್ ಇಲಾಖೆಯ ಉನ್ನತಾಧಿಕಾರಿಗಳು ಮುರುಗನ ವಿಕೃತ ಚೇಷ್ಟೆಗಳ ಬಗ್ಗೆ ಇಲಾಖಾ ತನಿಖೆ ನಡೆಸಲು ಒಂದು ಆದೇಶ ಹೊರಡಿಸಿದರು. (ಸಂಖ್ಯೆ ಮಾ.ಹ.6/ಹೇ.ಕೋ/102/2009 ದಿನಾಂಕ 16-3-2009) ತನಿಖೆ ನಡೆಸಿದ ಇಲಾಖಾ ಉನ್ನತಾಧಿಕಾರಿ ಆಗ ಪಶ್ಚಿಮ ವಲಯ ಡಿಐಜಿಯಾಗಿದ್ದ ಗೋಪಾಲ್ ಹೊಸೂರ್ ದೂರಿನಲ್ಲಿ ಸತ್ಯಾಂಶವಿಲ್ಲ ಎಂದು ಬಿಟ್ಟರು. ಆದರೆ ಅಷ್ಟರಲ್ಲಿ ಫನಿಷ್‌ಮೆಂಟ್ ವರ್ಗಾ ಆಗಿ ಮುರುಗನ್ ಶಿವಮೊಗ್ಗಕ್ಕೆ ಕಾಲಿಟ್ಟ. ಒಂದು ಪ್ರಕರಣದ ಬೆನ್ನು ಹತ್ತಿ ಪೊಲೀಸರು ಹೊರಗಿನವರೊಂದಿಗೆ ನಡೆಸುವ ತನಿಖೆಗೂ ಇಲಾಖೆಯ ಅಧಿಕಾರಿಗಳ ವಿರುದ್ಧ ಇಲಾಖೆಯವರೇ ನಡೆಸುವ ತನಿಖೆಗೂ ಅಗಾಧ ವ್ಯತ್ಯಾಸವಿರುತ್ತದೆ. ಒಂದು ಉದಾಹರಣೆಯ ಮೂಲಕ ಹೇಳಬೇಕೆಂದರೆ ಮುರುಗನ್ ವಿರುದ್ಧ ಇಲಾಖಾ ತನಿಖೆಯಾಗುವಾಗ ಆತನ ಸ್ತ್ರೀಪೀಡನೆಗೆ ಸಾಕ್ಷ್ಯ ನೀಡಬಲ್ಲ ಮೊಬೈಲ್ ಇತ್ತು, 9448144553 ನಂಬರಿನ ಆ ಮೊಬೈಲ್‌ನ ಜಾತಕ ತಡವಿದ್ದರೆ ಸಾಕಿತ್ತು ಮುರುಗನ್‌ನ ವಿಕೃತಿಗಳು ಹೊರಬೀಳುತ್ತಿದ್ದವು. 2006 ರ ಆಗಸ್ಟ್‌ನಲ್ಲಿ ನಡೆದ ಉಡುಪಿಯ ಹಾಯ್ ಮಾರುತ ಪತ್ರಿಕೆಯ ಹಿತೇಂದ್ರ ಶೆಟ್ಟಿಯ ಕೊಲೆಯ ಹಿಂದೆಯೂ ಪೊಲೀಸ್ ಟಾಗೂ ಹೆಂಗಸರ ದಂಧೆಯವರ ಕೈವಾಡವಿದೆಯೆನ್ನಲಾಗಿದೆ.

ಶಿವಮೊಗ್ಗ ರೆಡ್ ಲೈಟ್ ಚೇಂಬರ್‌ನಲ್ಲಿ

ಶಿವಮೊಗ್ಗದಲ್ಲಿ ಮುರುಗನ್ ಬರುವ ಮುನ್ನ ಎಸ್‌ಪಿಯಾಗಿದ್ದ ಅರುಣ್ ಚಕ್ರವರ್ತಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ತನ್ನ ಚೇಂಬರ್ ಅನ್ನು ಅಲಂಕರಿಸಿಕೊಂಡಿದ್ದರು. ಮುರುಗನ್ ಬಂದನಂತರ ಅದಿನ್ನೂ ಹೆಚ್ಚು ಫ್ಯಾನ್ಸಿ ರೂಪ ತಾಳಿತು. ಎಸ್‌ಪಿ ಕ್ವಾಟ್ರರ್ಸ್ ಸಹ ಲಕ್ಷಾಂತರ ರೂಪಾಯಿ ಸರ್ಕಾರಿ ಖರ್ಚಿನಲ್ಲಿ ನವೀಕರಣಗೊಂಡಿತು. ಕಚೇರಿಯಲ್ಲಿ ಮುರುಗನ್ ಸಾಹೇಬರ ದರ್ಬಾರು ಯಾವ ರೀತಿ ಶುರುವಾಯಿತೆಂದರೆ ಕೆಲ ಹೆಂಗಸರು ಈತನ ಕ್ಯಾಬಿನ್ ಹೊಕ್ಕರೆ ಗಂಟೆಗಟ್ಟಲೆ ಹೊರಬರುತ್ತಿರಲಿಲ್ಲ, ಇತರ ವಿಸಿಟರ್‌ಗಳು

ಮುರುಗನ್‌ನ ಪಿಂಪ್ ನೆಟ್‌ವರ್ಕ್

ಹೆಂಗಸರ ಶಿಕಾರಿಯನ್ನೇ ಫುಲ್‌ಟೈಂ ಕೆಲಸ ಮಾಡಿಕೊಂಡಿದ್ದ ಮುರುಗನ್ ತಾನು ಹೋದಲೆಲ್ಲಾ ಸರಬರಾಜುದಾರರನ್ನೂ ಸೆಟ್ ಮಾಡಿಕೊಳ್ಳುತ್ತಿದ್ದ. ಚಿತ್ರದುರ್ಗ, ಮೈಸೂರು, ಉಡುಪಿ, ಬಿಜಾಪುರ, ಶಿವಮೊಗ್ಗಗಳಲ್ಲಿ ಈಗಲೂ ಇರುವ ಈ ಮಹಾನುಭಾವರ ವಿವರ ಹೀಗಿದೆ:



ಕುಮಾರ್, ಚಿತ್ರದುರ್ಗ

ಚಿತ್ರದುರ್ಗದ ರವಿ ಮಯೂರ ಹೋಟೆಲ್ ಮಾಲೀಕನೀತ. ಮೂಲ ಚಳ್ಳಕೆರೆ ತಾಲ್ಲೂಕಿನ ಭರಮಸಾಗರ. ಕುಮಾರನ ತಂದೆ ಮಲ್ಲಣ್ಣ ಸಾರಾಯಿ ಗುತ್ತಿಗೆದಾರನಾಗಿ ಕೋಟ್ಯಂತರ ರೂ. ದುಡಿದು ಈಗ ತೀರಿಕೊಂಡಿದ್ದಾನೆ. ಅಪ್ಪ ಮಾಡಿಟ್ಟ ಆಸ್ತಿ ಹಣದಲ್ಲಿ ಮಜಾ ಮಾಡುವ ದುರ್ವಿದ್ಯೆ ಕಲಿತ ಕುಮಾರ್‌ಗೆ ಚಿತ್ರದುರ್ಗಕ್ಕೆ ಎಸ್‌ಪಿಯಾಗಿ ಬಂದ ಮುರುಗನ್ ಗೆಳೆಯನಾದ. ಅಷ್ಟರಲ್ಲಾಗಲೇ ಕುಮಾರ್‌ಗೆ ವಿಪರೀತ ಅನ್ನಿಸುವಷ್ಟು ಹೆಂಗಸರ ಚಟ ಹತ್ತಿಕೊಂಡಿತ್ತು, ಮುರುಗನ್‌ಗೂ ಅದೇ ಚಾಳಿ ಇತ್ತಾದ್ದರಿಂದ ಅವರ ಸ್ನೇಹ ಗಟ್ಟಿಯಾಯಿತು. ದುರ್ಗದ NH 13 ಹಾಗೂ NH 4ರ ಬಳಿ ಅನೇಕ ಬಾರ್ ಹಾಗೂ ವೈನ್ ಸ್ಟೋರ್ ನಡೆಸುತ್ತಿರುವ ಕುಮಾರ್ ಮುರುಗನ್‌ಗೆ ಸ್ತ್ರೀದೇಹಗಳ ಸರಬರಾಜು ಮಾಡುತ್ತಲೇ ಇನ್ನಷ್ಟು ಹಣ ಮಾಡಿಕೊಂಡ. ಈಗ್ಗೆ ಹತ್ತು ವರ್ಷಗಳ ಹಿಂದೆ ದುರ್ಗದ ಗರುಡಧ್ವಜ ಎನ್ನುವ ಪತ್ರಿಕೆಯವನೊಂದಿಗೆ ಸೇರಿ ಸಿನಿಮಾ ತೆಗೀತೀನಿ ಎಂತಲೂ ಓಡಾಡಿದ್ದ ಕುಮಾರ್.

ರಾಮಚಂದ್ರ, ಉಡುಪಿ

ಉಡುಪಿಯ ಕೊರಂಗಪಾಡಿ ಯವನಾದ ರಾಮಚಂದ್ರ ಕೇವಲ ಪಿಂಪ್ ಮಾತ್ರವಲ್ಲ ಮುರುಗನ್‌ನ ಅನೇಕ ಬೇನಾಮಿ ದಂಧೆಗಳ ಸೂತ್ರಧಾರನೂ ಆಗಿದ್ದಾನೆ. ಈಗ ಮೈಸೂರಿನಲ್ಲಿ ಮರಳು ಸಾಗಾಣಿಕೆ ದಂಧೆ ನಡೆಸುತ್ತಿರುವ ರಾಮಚಂದ್ರ 2003ರಲ್ಲಿ ಮುರುಗನ್ ಉಡುಪಿಗೆ ಎಸ್‌ಪಿಯಾಗಿ ಬಂದಾಗ ಚಿಗುರಿಕೊಂಡ. ಆಗ ರಾಮಚಂದ್ರನಿಗೆ ಅಕ್ರಮ ಸ್ಪಿರಿಟ್ ಸಾಗಾಣಿಕೆ ದಂಧೆಯಿತ್ತು, ಇತ್ತ ಮುರುಗನ್‌ಗೆ ಹೆಂಗಸರ ಬಲಹೀನತೆಯಿತ್ತು, ಈ ರಾಮಚಂದ್ರ ಮುರುಗನ್ ಸ್ನೇಹ ಬೆಳೆಸಿ ಬೆಂಗಳೂರು, ಮೈಸೂರುಗಳಿಂದೆಲ್ಲಾ ಹುಡುಗಿಯರನ್ನು ಕರೆಸುವ ಕೆಲಸ ಮಾಡುತ್ತಿದ್ದ. ಹೀಗೆ ಮುರುಗನ್ ಹಾಗೂ ರಾಮಚಂದ್ರನ್ ಗೆಳೆತನ ಗಟ್ಟಿಯಾಗುತ್ತಿದ್ದಂತೆ ಎಸ್‌ಪಿ ಕಚೇರಿಯ ಡೀಲ್‌ಗಳು ಹಣದ ವಹಿವಾಟುಗಳೆಲ್ಲ ರಾಮಚಂದ್ರನ ಮೂಲಕ ಆಪರೇಟ್ ಆಗಲು ಶುರುವಾಯಿತು.

ರಾಮಚಂದ್ರನ ಸ್ಪಿರಿಟ್ ಸಾಗಾಣಿಕೆ ದಂಧೆಗೆ ಮುರುಗನ್ ರಕ್ಷಣೆ ನೀಡುತ್ತಿದ್ದ. ಒಮ್ಮೆ ಕುಂದಾಪುರ ತಾಲ್ಲೂಕಿನ ಅರಣ್ಯ ಪ್ರದೇಶದಿಂದ ಪೊಲೀಸರು ಹಾಗೂ ರಾಮಚಂದ್ರ ಜೊತೆಗೂಡಿ ಮೂರು ಲಾರಿ ಲೋಡಿನಷ್ಟು ನಾಟಾಗಳನ್ನು ಕಳ್ಳ ಸಾಗಾಣಿಕೆ ಮಾಡಿ ಮುರುಗನ್ ಬಂಗಲೆ ಕಟ್ಟಿಸುತ್ತಿದ್ದ ಮಧುರೈಗೂ ಸಾಗಿಸಿದ್ದರು.

ಕೊನೆಗೆ ಮುರುಗನ್‌ಗೆ ಮೈಸೂರಿಗೆ ವರ್ಗಾ ಆದಾಗ ಈ ರಾಮಚಂದ್ರನೂ ಉಡುಪಿ ಬಿಟ್ಟು ಮೈಸೂರಿಗೆ ಬಂದ. ಅಲ್ಲೀಗ ಮರಳು ಸಾಗಾಣಿಕೆ, ಸ್ಪಿರಿಟ್ ದಂಧೆ ಹಾಗೂ ಹುಡುಗಿಯರ ಸರಬರಾಜು ಮಾಡಿಕೊಂಡಿದ್ದಾನೆ. ಪೊಲೀಸ್ ಇಲಾಖೆಯ ಕೆಲ ಉನ್ನತಾಧಿಕಾರಿಗಳ ಪ್ರಕಾರ ರಾಮಚಂದ್ರನ ಸಮಸ್ತ ಬ್ಯುಸಿನೆಸ್‌ಗಳೂ ಮುರುಗನ್‌ನದ್ದೇ ಆಗಿದೆಯಂತೆ.

ಲೋಕಾಯುಕ್ತ ಪೊಲೀಸರು ದಯಮಾಡಿ ಈ ಬಗ್ಗೆ ಗಮನ ಹರಿಸಲಿ.

ಇನಾಂದಾರ್, ಬಿಜಾಪುರ

ಮುರುಗನ್ ಬಿಜಾಪುರದಲ್ಲಿ ಇದ್ದದ್ದು ಕೇವಲ ಆರೇ ತಿಂಗಳಾದರೂ ಅಷ್ಟರಲ್ಲೇ ಅಲ್ಲಿ ಕುಖ್ಯಾತ ಪಿಂಪ್ ಇನಾಂದಾರನೊಂದಿಗೆ ಖಾಸಾ ದೋಸ್ತಿ ಬೆಳೆಸಿಕೊಂಡಿದ್ದ. ಈ ಇನಾಂದಾರ ಬಿಜಾಪುರವಷ್ಟೇ ಅಲ್ಲದೆ, ಬಾಗಲಕೋಟೆ, ಹುಬ್ಬಳ್ಳಿ, ಬೆಳಗಾಂ, ಪೂನಾಗಳಲ್ಲೂ ಕಾಲ್‌ಗರ್ಲ್ ನೆಟ್‌ವರ್ಕ್ ಅನ್ನು ಆಪರೇಟ್ ಮಾಡುತ್ತಾನೆ. ಮುರುಗನ್ ಹಾಗೂ ಪಿಂಪ್ ಇನಾಂದಾರನ ಸ್ನೇಹ ದಿಢೀರನೆ ಬೆಳೆದ ರೀತಿ ನೋಡಿ ಆವತ್ತಿನ ಸಿಬ್ಬಂದಿಯೆಲ್ಲಾ ಆಶ್ಚರ್ಯಪಟ್ಟಿದ್ದರು.

ಆಗುಂಬೆಯ ಸೌಮ್ಯಶ್ರೀ ಈಗೆಲ್ಲಿ?

...ಮ ಸರಿಯಾಗಿ ತನಿಖೆಯಾಗಬೇಕಾದ ಪ್ರಕರಣ.

...ಮ್ಯಶ್ರೀ ಎನ್ನುವ ಮಲೆನಾಡಿನ ಯುವತಿಯೊಬ್ಬಳ ನಾಪತ್ತೆ ಪ್ರಕರಣವಿದು. ಆಗುಂಬೆ ಹತ್ತಿರದ ಗ್ರಾಮವೊಂದಕ್ಕೆ ಸೇರಿದ್ದ ಸೌಮ್ಯಶ್ರೀ ...ಲ ತಿಂಗಳುಗಳಿಂದ ನಾಪತ್ತೆಯಾಗಿದ್ದಾಳೆ. ನಕ್ಸಲ್ ನಿಗ್ರಹ ಕಾರ್ಯಾಚರಣೆ ಎಂಬಿತ್ಯಾದಿ ನೆಪದಲ್ಲಿ ಆಗುಂಬೆ ಅರಣ್ಯ ಪ್ರದೇಶದಲ್ಲಿ ...ತ್ತಿದ್ದವರಿಗೆ ಈಕೆ ಕಂಡಿದ್ದಾಳೆ. ನೋಡಲು ಸುಂದರವಾಗಿದ್ದ ಈಕೆಯನ್ನು ವಶಮಾಡಿಕೊಳ್ಳಲು ನಾನಾ ರೀತಿಯ ಕಿರುಕುಳ ಹಾಗೂ ...ವೊಡ್ಡಿ ಈಗ ಬೆಂಗಳೂರಿನ ಅಜ್ಞಾತ ಸ್ಥಳವೊಂದರಲ್ಲಿ ಮನೆ ಮಾಡಿ ಇರಿಸಲಾಗಿದೆ ಎಂಬ ರೂಮರುಗಳಿವೆ.

...ಮ್ಯಶ್ರೀಯ ಪೋಷಕರು ಈ ಬಗ್ಗೆ ಪೊಲೀಸರಿಗೆ ದೂರು ನೀಡಿದರೂ ಯಾರೂ ಕ್ರಮ ತೆಗೆದುಕೊಂಡಿಲ್ಲ ಎನ್ನಲಾಗಿದೆ. ಇನ್ನೊಬ್ಬ ...ಸ್ ಸಿದ್ದಲಿಂಗಯ್ಯ ಎಂಬುವರ ಹೆಸರೂ ಈ ಪ್ರಕರಣದಲ್ಲಿ ಕೇಳಿಬರುತ್ತಿದೆ. ಈಗ ಸೌಮ್ಯಶ್ರೀ ಎಲ್ಲಿದ್ದಾಳೆಂಬುದೇ ಯಾರಿಗೂ ಖಚಿತವಾಗಿ ...ಯುತ್ತಿಲ್ಲ.



...ಹೊರಗಡೆಯ ರೆಡ್‌ಲೈಟ್ ಉರಿಯುತ್ತಿರುವುದನ್ನು ನೋಡುತ್ತಾ ...ಕುಳಿತಿರಬೇಕಿತ್ತು, ರೆಡ್‌ಲೈಟ್ ಹತ್ತಿಕೊಂಡಿದ್ದರೆ 'ಎಸ್‌ಪಿ ಸಾಹೇಬರು ...ದ್ದಾರೆ' ಎಂದರ್ಥ. ಮುರುಗನ್ ಶಿವಮೊಗ್ಗದಲ್ಲಿ ಇದ್ದಷ್ಟೂ ...ು ಕೆಲ ಮಹಿಳಾ ಪೊಲೀಸರು ಅವನ ಚೇಂಬರ್‌ಗೆ ಕಾಲಿಡಲೂ ...ು. ಸರಿಯಾಗಿ ವಿಚಾರಣೆ ನಡೆದರೆ, ಅಲ್ಲಿನ ಮಹಿಳಾ ಪೊಲೀಸರ ...ರಾದರೂ ಧೈರ್ಯದಿಂದ ಮುಂದೆ ಬಂದು ಹೇಳಿಕೆ ನೀಡಿದರೆ ...ನ ಅನೇಕ ಬಾನಗಡಿಗಳು ಬಯಲಿಗೆ ಬರುವುದು ಗ್ಯಾರಂಟಿ.


ಹಾಲಪ್ಪನ ಪಿತೂರಿಯೆಂತಲೂ ಇನ್ನುಳಿದವರು ಪೊಲೀಸರೇ ಯಾರೋ ಮಾಹಿತಿ ನೀಡಿ ದಾಳಿ ಮಾಡಿಸಿದ್ದೆಂತಲೊ ಊಹಿಸುತ್ತಿದ್ದಾರೆ. ಆದರೆ ಇಲ್ಲಿ ದಾಳಿ ಯಾರ ಕಾರಣದಿಂದ ಆಯಿತೆಂಬುದು ಅಷ್ಟು ಮುಖ್ಯವಲ್ಲ, ದಾಳಿ ಯಾಕಾಗಿ ಆಗಿದೆ. ಅದರಲ್ಲಿ ಮುರುಗನ್ ಅಪರಾಧಿಯಾ ಅಲ್ಲವಾ ಎಂಬುದೇ ಮುಖ್ಯ.

ಈಗಿನ ವರ್ತಮಾನದ ಪ್ರಕಾರ ಮುರುಗನ್ ಮನೆಯಲ್ಲಿ ಸಿಕ್ಕಿರುವ ನಾಟಾಗಳ ಪೈಕಿ 127 ಕ್ಯೂಬಿಕ್ ಫೀಟ್‌ನಷ್ಟು ಟೀಕ್ ನಾಟಾಗೆ ಲೆಕ್ಕ ಸಿಗುತ್ತಿಲ್ಲ. ಅಲ್ಲಿ ಸಿಕ್ಕಿರುವ ಉಳಿದ ನಾಟಾಗಳ ಸಾಗಾಣಿಕೆ ಪರ್ಮಿಟ್‌ಗಳು ಮುರುಗನ್‌ನ ಹೆಂಡತಿ ಶೋಭಾ ಹೆಸರಲ್ಲಿ ಇವೆ. ಆದರೆ ಪರ್ಮಿಟ್ ಇರದ ನಾಟಾ ಮುರುಗನ್‌ಗೆ ಹೇಗೆ ಎಲ್ಲಿ ಸಿಕ್ಕಿರಬಹುದು! ಒಂದೋ ಅದು ಇಲಾಖೆಯ ಜನ ಕಳ್ಳಲೆಕ್ಕದ ಬಾಬ್ತಿನಿಂದ ದಾನ ಮಾಡಿರಬಹುದು ಅಥವಾ ನಾಟಾ ಕಳ್ಳಸಾಗಾಣಿಕೆದಾರರಿಂದ ಅದನ್ನು ಮುರುಗನ್ ಪಡೆದಿರುವ ಸಾಧ್ಯತೆಯೂ ಇದೆ.

ಕ್ಯೂಬಿಕ್ ಫೀಟ್‌ಗೆ 2300 ರೂಪಾಯಿನಂತೆ ಒಟ್ಟು ಮೂರು ಲಕ್ಷ ರೂಪಾಯಿ ಬೆಲೆಯ ನಾಟಾ ಅದು. ರಾಜ್ಯದ ಉನ್ನತ ಪೊಲೀಸ್ ಅಧಿಕಾರಿಯೇ ನಾಟಾ ಕದ್ದು ಸಾಗಿಸಿ ಸಿಕ್ಕಿ ಬೀಳುತ್ತಾನೆಂದರೆ ಏನನ್ನಬೇಕು ಹೇಳಿ?


ಮುರುಗನ್ ಸ್ವಂತ ಸ್ಥಳ ಮಧುರೈನಲ್ಲಿ ಒಂದು ದೊಡ್ಡ ಬಂಗಲೆ ಕಟ್ಟಿಸಿದ್ದಾನೆ. ಅವನ ತಂದೆ ಅಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದಾನೆ. ಒಬ್ಬ ತಮ್ಮ ಬ್ಯಾಂಕ್ ಸಾಲ ಮಾಡಿ ಡಾಕ್ಟರಿಕೆ ಓದಿ ಈಗ ಇಂಗ್ಲೆಂಡ್‌ನಲ್ಲಿದ್ದಾನೆ.

ಮುರುಗನ್ ಬಗ್ಗೆ ತನಿಖೆಗೆ ರಾಜ್ಯಪಾಲರ ಪತ್ರ...



ಕರ್ನಾಟಕ ರಾಜ್ಯಪಾಲರ ಸಚಿವಾಲಯ
KARNATAKA GOVERNOR'S SECRETARIAT

P.B. No. 5033
RAJ BHAVAN, BANGALORE
PIN: 560 001



...ಥ ಉಡಾಳನೆಂದರೆ ಕೆಲ ತಿಂಗಳ ಹಿಂದೆ ಶಿವಮೊಗ್ಗದ ಜಿಲ್ಲಾ ... ಕೆಲವರು ಯಾವುದೋ ಮುಖ್ಯ ವಿಚಾರವೊಂದರ ಬಗ್ಗೆ ...ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಹೋದರೂ ಮುರುಗನ್ ...ಗಂಟೆ ಕಾಯಿಸಿದ್ದನಂತೆ. ಎಂದಿನಂತೆ ಹೊರಗಡೆ ರೆಡ್‌ಲೈಟ್ ...ತ್ತು, ಕೊನೆಗೆ ನೋಡಿದರೆ ಮುರುಗನ್ ಚೇಂಬರಿನಿಂದ ...ವಳು ದುರ್ಗಿಗುಡಿಯ ಒಬ್ಬಳು ಸೇಲ್ಸ್ ಗರ್ಲ್... ಸಾಧಾರಣ ...ರ್ ಜೊತೆ ಜಿಲ್ಲಾ ಎಸ್‌ಪಿಗೆ ಅಷ್ಟೊಂದು ...ು ಮಾತಾಡುವುದೇನಿರಬಹುದು ಎಂಬ ಪತ್ರಕರ್ತರ ...ಸೆಗೂ ಪ್ರಶ್ನೆಯಾಗಿಯೇ ಉಳಿದುಹೋಯಿತೆನ್ನಿ. ...ಪೊಲೀಸ್ ಇಲಾಖೆಗೆ ಪ್ರತ್ಯಕ್ಷವಾಗಿಯೋ ಅಥವಾ ...ಗಿಯೋ ಸಂಬಂಧಿಸಿದ ಅನೇಕ ಮಹಿಳೆಯರು ... ಎಂದರೆ ಹಿಡಿಶಾಪ ಹಾಕುತ್ತಿದ್ದರು. ಅವನ ...ಿ ಲೋಕಾಯುಕ್ತ ದಾಳಿ ಆಯಿತೆನ್ನುವ ಸುದ್ದಿ ...ಡೀ ಶಿವಮೊಗ್ಗ ಪೊಲೀಸ್ ಇಲಾಖಾ ಸಿಬ್ಬಂದಿ ...ರೆ.

...ಮುರುಗನ್ ಎಸ್‌ಪಿಯಾಗಿದ್ದಷ್ಟು ದಿನ ಕಡಿದು ... ಅಷ್ಟರಲ್ಲೇ ಇತ್ತು, ಇರುವಷ್ಟು ದಿನ ಇಸ್ಪೀಟು, ...ಜೂಗಳನ್ನು ಮಟ್ಟಹಾಕಲು ಏನನ್ನೂ ಮಾಡದೆ ...ು ಮಾಡಿಕೊಂಡಿದ್ದವನು ಪ್ರಮೋಷನ್ ಸಿಕ್ಕಿ ...ಮೊಗ್ಗದಿಂದ ಹೊರಡುವಾಗ ಕುಖ್ಯಾತ ಪಾಕಿಸ್ತಾನ ... ಒಂದು ರೇಡು ಮಾಡಿದ. ತಿಂಗಳಿಗೆ 5 ಲಕ್ಷ ...ರೋಲ್‌ಕಾಲ್ ಮುರುಗನ್‌ಗೆ ಸಲ್ಲಿಸುತ್ತಿದ್ದ ಕ್ಲಬ್ ಅದು. ...ಪಕ್ಷ, ಈಶ್ವರಪ್ಪನ ಸೋದರ ಗಂಗಾಧರಪ್ಪನ ನೇರ ... ಅಲ್ಲಿ ಇಸ್ಪೀಟು ದಂಧೆ ನಡೆಯುತ್ತಿತ್ತು, ಆದರೆ ಮುರುಗನ್ ... ಹೋಗುವ ಮುನ್ನ ಮತ್ತೆ ಕ್ಲಬ್ ದಂಧೆ ನಡೆಸಲು ಒಂದಷ್ಟು ... [illegible] ಹೋಗಿದ್ದಾನೆ.

ನಾಟಾ ಕಳ್ಳಸಾಗಾಣಿಕೆ

...ಲೋಕಾಯುಕ್ತರ ರೇಡನ್ನು ಕೆಲವರು ಮಾಜಿ ಸಚಿವ ಹರತಾಳು

ಲೋಕಾಯುಕ್ತ ಪೊಲೀಸರು ಈಗ ರಾಜ್ಯದ ಜನರಿಗೆ ಮಾಡಬಹುದಾದ ಉಪಕಾರವಿಷ್ಟೆ.

ಹಾಲಿ ಡಿಐಜಿ ಮುರುಗನ್ ವಿರುದ್ಧ ಕೇವಲ ಕಳ್ಳ ನಾಟಾ ಸಾಗಾಣಿಕೆಯ ಕೇಸ್ ಮಾತ್ರವಲ್ಲದೆ ಇವನು ಶಿವಮೊಗ್ಗ ಉಡುಪಿ, ಬಿಜಾಪುರ, ಮೈಸೂರು ಹಾಗೂ ಚಿತ್ರದುರ್ಗದಲ್ಲಿದ್ದಾಗ ನಡೆಸಿರಬಹುದಾದ ಸ್ತ್ರೀಪೀಡನೆ, ಮುಗ್ಧ



ಮಹಿಳೆಯರ ಲೈಂಗಿಕ ಶೋಷಣೆಗಳ ಬಗ್ಗೆಯೇ ಒಂದು ವಿಶೇಷ ತನಿಖೆ ನಡೆಸಬೇಕಿದೆ.

ಲೋಕಾಯುಕ್ತರು ಒಮ್ಮೆ ತನಿಖೆ ಚಾಲೂ ಮಾಡಿಯೇ ಬಿಟ್ಟರೆ ಖಂಡಿತವಾಗಿಯೂ ಮುರುಗನ್‌ನಿಂದ ಬಾಧಿತರಾಗಿರುವ ಮಹಿಳೆಯರ ಪೈಕಿ ಕೆಲವರಾದರೂ ಧೈರ್ಯದಿಂದ ಮುಂದೆ ಒಂದು ಸಾಕ್ಷ್ಯ ನೀಡಬಲ್ಲರು.....



ನಕ್ಸಲರ ಹೋರಾಟ ಮುರುಗನ್ ಹಾರಾಟ

ಕರ್ನಾಟಕದ ನಕ್ಸಲೀಯರ ಸಶಸ್ತ್ರ ಹೋರಾಟ ಬಲಗುಂದಲು ಮುರುಗನ್‌ನ ಪಾತ್ರ ಹೆಚ್ಚಿದೆ.

ಸರ್ಕಾರದ ಹಾಗೂ ಬಿಜೆಪಿಗಳ ಕಣ್ಣಲ್ಲಿ ಇವನು ಮಹಾನ್ ಸಾಹಸಿ ಹಾಗೂ ಧೈರ್ಯಶಾಲಿ!


ಆದರೆ ನಕ್ಸಲ್ ಹೋರಾಟಕ್ಕೆ ಎದುರಾಗಿ ನಿಂತಿದ್ದ ಮುರುಗನ್‌ನ ಅಸಲಿ ಮುಖ ಎಂಥದ್ದು?

2003 ರ ನವೆಂಬರ್ 17 ರಂದು ಉಡುಪಿಯ ಈದು ಎಂಬಲ್ಲಿ ನಕ್ಸಲ್ ಪಾರ್ವತಿ, ಹಾಜಿಮಾರನ್ನು ಕೊಲ್ಲುವ ಮೂಲಕ ಮುರುಗನ್ ಹೆಸರು ಚಾಲ್ತಿಗೆ ಬಂತು. ಅದೊಂದು ನಕಲಿ ಎನ್‌ಕೌಂಟರ್ ಆಗಿತ್ತು. ಹಾಜಿಮಾರನ್ನಂತೂ ರಾಮಪೂಜಾರಿಯ ಗುಡಿಸಲ ಮನೆಯೊಳಗೆ ಗೋಡೆಗಾನಿಸಿ ನಿಲ್ಲಿಸಿ ಪಾಯಿಂಟ್ ಬ್ಲಾಂಕ್ ರೇಂಜ್‌ನಿಂದ ಗುಂಡು ಹಾರಿಸಿ ಕೊಲ್ಲಲಾಗಿತ್ತು, ಈ ಎನ್‌ಕೌಂಟರ್ ಅನ್ನು ತನ್ನ ಪೊಲೀಸ್ ಕರಿಯರ್‌ನ



ಏಣಿಯಂತೆ ಬಳಸಿಕೊಂಡ ಮುರುಗನ್ ಮಲೆನಾಡಿನ ಜಿಲ್ಲೆಗಳಲ್ಲೇ ಹೆಚ್ಚು ಕಾಲ ಕಳೆದಿದ್ದಾನೆ. ಆಗೀಗ ಕೂಂಬಿಂಗ್ ನಡೆಸುತ್ತ ಆಗುಂಬೆ, ತೀರ್ಥಹಳ್ಳಿ ಐಬಿಗಳಲ್ಲಿ ರಾತ್ರಿ ಕಳೆಯುತ್ತಿದ್ದ ಮುರುಗನ್ ಅಲ್ಲೂ ಮಹಿಳೆಯರನ್ನು ಜೊತೆಗೆ ಕರೆದೊಯ್ಯುತ್ತಿದ್ದನೆಂದು ಹೇಳಲಾಗುತ್ತಿದೆ. ಮುರುಗನ್ ಅಲ್ಲಿ ನಕ್ಸಲರನ್ನು ಪತ್ತೆಹಚ್ಚಲು ಹೋಗುತ್ತಿದ್ದನೋ ಅಥವಾ ಒಳ್ಳೊಳ್ಳೆ ನಾಟಾ ಹುಡುಕಲು ಹೋಗುತ್ತಿದ್ದನೋ ಎನ್ನುವ ಅನುಮಾನ ಈಗ ಬರುತ್ತಿದೆ.

ಬಹುಶಃ ಓರ್ವ ಎಸ್‌ಪಿಯಾಗಿ ಮುರುಗನ್ ಹೇಳಿರುವಷ್ಟು ಸುಳ್ಳುಗಳನ್ನು ಬೇರೆ ಯಾರೂ ಹೇಳಿಲ್ಲ, ಒಮ್ಮೆ ಕೃಷ್ಣ ಎಂಬುವವನ್ನು ಅರೆಸ್ಟ್ ಮಾಡಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಸಿಕ್ಕಿತೆಂದು ಹೇಳಿದ್ದ. ನಂದಕುಮಾರ್ ಹಾಗೂ ಆಶಾ ಬಂಧನವಾದಾಗ ಅವರ ಬಳಿ ಸೆಕ್ಸ್ ಸಿಡಿಗಳು ಸಿಕ್ಕವೆಂದು ಪತ್ರಿಕಾಗೋಷ್ಠಿಯಲ್ಲೇ ಹೇಳಿದ್ದ. ಸರ್ಕಲ್ ಇನ್ಸ್‌ಪೆಕ್ಟರ್ ವಸಂತಕುಮಾರ್ ಎಂಬಾತ ಮುರುಗನ್ ಹೆಣೆದಿದ್ದ ಈ ಕಟ್ಟುಕತೆಗೆ ರೆಕ್ಕೆಪುಕ್ಕ ಸೇರಿಸಿ ಅಪಪ್ರಚಾರ




ನಡೆಸಿದ್ದ. ನಕ್ಸಲೀಯರ ಹೋರಾಟ ಕಾನೂನಿನಪ್ರಕಾರ ಅಪರಾಧವಾಗಿರಬಹುದು. ಆದರೆ ನಂದ ಮುಂತಾದವರು ಸೆಕ್ಸ್ ಸಿಡಿಗಳನ್ನು ಬ್ಯಾಗುಗಳಲ್ಲಿ ಇಟ್ಟುಕೊಂಡು ಓಡಾಡುವಷ್ಟು ಅನೈತಿಕ ವ್ಯಕ್ತಿಗಳಾಗಿರಲಿಲ್ಲ. ಈಗ ನೋಡಿದರೆ ಅವತಾರ ಪುರುಷನಂತೆ ಪೋಸು ನೀಡುತ್ತಿದ್ದ ಮುರುಗನ್ ವಿರುದ್ಧವೇ ನಾಟಾ ಕಳ್ಳತನದ ಸ್ತ್ರೀಪೀಡನೆಯ ದೂರುಗಳು ಬರುತ್ತಿವೆ.

ನಕ್ಸಲರ ಹೋರಾಟವನ್ನು ಹತ್ತಿಕ್ಕುವ ಭರದಲ್ಲಿ ಮುರುಗನ್ ಶಿವಮೊಗ್ಗದ ಪತ್ರಕರ್ತರನೇಕರಿಗೆ ಬೆದರಿಕೆ ಹಾಕಿದ್ದ. ಪ್ರಜಾವಾಣಿಯ ವರದಿಗಾರ ರಾಹುಲ್ ಬೆಳಗಲಿಗೆ ನೋಟಿಸ್ ನೀಡಿ ರಾದ್ಧಾಂತ ಮಾಡಿಕೊಂಡಿದ್ದ. ಅನಿತಾ ಎಂಬುವರಿಗೆ ನಕ್ಸಲ್ ಸಂಪರ್ಕವಿದೆ ಎಂದು ಅನುಮಾನಪಟ್ಟು ಜೈಲಿಗೆ ಹಾಕಿಸಿದ. ನಕ್ಸಲ್ ನಿಗ್ರಹದ ನೆಪದಲ್ಲಿ ಮುರುಗನ್ ಖರ್ಚು ಮಾಡಿರುವ ಹಣದ ಬಗ್ಗೆಯೂ ಸರಿ ತನಿಖೆಯಾದರೆ ಇನ್ನು ಅನೇಕ ಸಂಗತಿಗಳು ಹೊರಬರುವ ಸಾಧ್ಯತೆಗಳಿವೆ.

ಕರ್ನಾಟಕದಲ್ಲಿ ನಕ್ಸಲರ ಚಳವಳಿ ದುರ್ಬಲಗೊಳ್ಳಲು ಮುರುಗನ್ ನಡೆಸಿದ ಕಾರ್ಯಾಚರಣೆಗಳು ಮಾತ್ರ ಕಾರಣವಾಗಿಲ್ಲ, ಅದರ ಬದಲಾಗಿ ಸ್ವತಃ ನಕ್ಸಲರೇ ವಿವೇಚನಾರಹಿತರಾಗಿ ವರ್ತಿಸಿ ಜನರಿಂದ ದೂರವಾಗಿದ್ದಾರೆ. ಈಗ ಮುರುಗನ್ ವಿರುದ್ಧದ ಆರೋಪಗಳು ಗುರುತರವಾದವುಗಳು. ಈತ ನಕ್ಸಲರ ವಿರುದ್ಧ ಹೋರಾಡಿದ ಧೀರೋದಾತ್ತ ಪೊಲೀಸ್ ಎಂಬಂತೆ ಭಾವಿಸಿ ಈಗಿನ ಆರೋಪಗಳನ್ನು ನಗಣ್ಯಗೊಳಿಸಿ ನೋಡಿದರೆ ಅದು ಅಕ್ಷಮ್ಯವಾಗುತ್ತದಷ್ಟೆ.

ಮೈಸೂರು ಸಿಪಿಸಿ ಪಾಲಿಟೆಕ್ನಿಕ್‌ನಲ್ಲಿ ಧನದಾಹಿ ಪ್ರಾಂಶುಪಾಲ!



ಮೈಸೂರಿನ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್‌ಗೆ ವಕ್ಕರಿಸಿಕೊಂಡಿರುವ ಪ್ರಾಂಶುಪಾಲನ ಕಥೆ ಯಾವ ಕಂತ್ರಿ ಮಂತ್ರಿಗೂ ಕಡಿಮೆಯಿಲ್ಲ. ಭ್ರಷ್ಟಾಚಾರ, ಉತ್ತರ ಪತ್ರಿಕೆ ಹಗರಣ, ವಿದ್ಯಾರ್ಥಿಗಳಿಂದ ಲಂಚ ವಸೂಲಿ ಪ್ರಕರಣಗಳಲ್ಲಿ ಬರೋಬ್ಬರಿ ಎಂಟು ತನಿಖೆಗಳನ್ನು ಎದುರಿಸಿ, ತಪ್ಪಿತಸ್ಥನೆಂದು ಸಾಬೀತಾದರೂ ವಜಾ ಆಗುವ ಬದಲು ಐತಿಹಾಸಿಕ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲನಾಗಿ ಆಳ್ವಿಕೆ ನಡೆಸುತ್ತಿರುವ ಈತನ ಹೆಸರು ಲಿಂಗರಾಜು. ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವೆಯಾಗಿದ್ದ ಶೋಭಾ ಕರಂದ್ಲಾಜೆ, ಈಗಿನ ಉಸ್ತುವಾರಿ ಸಚಿವ ರಾಮದಾಸ್, ಶಾಸಕ ಶಂಕರಲಿಂಗೇ ಗೌಡರಾದಿಯಾಗಿ ಎಲ್ಲರೂ ಈತನ ಎತ್ತಂಗಡಿಗೆ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಆದರೂ ಈತ ಇಲ್ಲೇ ಝಂಡಾ ಹೂಡಲು ಕಾರಣ ಸಚಿವ ಡಾ.ವಿ.ಎಸ್.ಆಚಾರ್ಯರ ರಕ್ಷಣೆ ಎಂದು ಪಾಲಿಟೆಕ್ನಿಕ್‌ನ ಬಲ್ಲ ಮೂಲಗಳು ಹೇಳುತ್ತಿವೆ.



ವಿ.ಎಸ್.ಆಚಾರ್ಯ

ಸದರಿ ಲಿಂಗರಾಜು ತನ್ನ ಸೇವಾವಧಿಯನ್ನು ಪ್ರಾರಂಭಿಸಿದ್ದೇ ಹಾಸನದ ಸರ್ಕಾರಿ ಪಾಲಿ ಟೆಕ್ನಿಕ್‌ಗೆ ಉಪನ್ಯಾಸಕನಾಗುವ ಮೂಲಕ. ಅಲ್ಲಿನ ಬಾಲಕರ ವಿದ್ಯಾರ್ಥಿ ನಿಲಯದ ಉಸ್ತುವಾರಿ ಯನ್ನು ಹೊತ್ತುಕೊಂಡ ಈತ ಅಲ್ಲಿಂದಲೇ ತನ್ನ ಮೇಯುವಿಕೆಯನ್ನು ಶುರು ಹಚ್ಚಿಕೊಂಡ. ವಿದ್ಯಾರ್ಥಿಗಳಿಗೆ ನೀಡಬೇಕಾಗಿದ್ದ ಆಹಾರ ಪದಾರ್ಥಗಳೆಲ್ಲವನ್ನೂ ಹೊರಗಡೆ ಮಾರಿಕೊಂಡು ಸಿಕ್ಕಿಬಿದ್ದ. ಜೊತೆಗೆ ಸುಮಾರು 1.5 ಲಕ್ಷ ರೂ.ಗಳ ದುರ್ಬಳಕೆ ಮಾಡಿದ್ದ. ಇದು ತನಿಖೆಯಲ್ಲಿ ರುಜುವಾತಾಗಿ ಈತನಿಂದ ಹಣ ಕಟ್ಟಿಸಿಕೊಂಡು ದೀರ್ಘ ರಜೆ ಮೇಲೆ ಕಳುಹಿಸಲಾಗಿತ್ತು.

ಅದು ಹೇಗೋ ಅಮಾನತ್ತನ್ನು ರದ್ದು ಮಾಡಿಸಿಕೊಂಡ ಈತ ಹಾಸನದಿಂದ ನೇರವಾಗಿ ಬಂದದ್ದೇ ಮೈಸೂರಿನ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್‌ಗೆ. ಈತನಿಗಿಂತ ಹೆಚ್ಚಿನ ಅನುಭವವಿರುವವರಿದ್ದರೂ ಸಹ ಈತ ನೋಡನೋಡುತ್ತಲೇ ಪ್ರಾಂಶುಪಾಲನೂ ಆಗಿ ಮಿಕ್ಕವರಿಗೆ ಗಾಬರಿ ಹುಟ್ಟಿಸಿದ. ಇಷ್ಟರಲ್ಲಾಗಲೇ ಹಗರಣಗಳ ಸರಮಾಲೆಯ ತನಿಖೆಯನ್ನು ಎದುರಿಸುತ್ತಿದ್ದ ಮತ್ತು ಹಲವು ಬಾರಿ ಅಮಾನತ್ತಿನ ಶಿಕ್ಷೆಯನ್ನೂ ಸಹ ಅನುಭವಿಸಿದ್ದ. ಈತನಿಂದ ಒಬ್ಬನೇ ಒಬ್ಬ ಉತ್ತಮ ವಿದ್ಯಾರ್ಥಿ ಹೊರಬರದಿದ್ದರೂ, ಹಣಕೊಟ್ಟು ಉತ್ತರಪತ್ರಿಕೆ ಕದ್ದ ಆರೋಪದಲ್ಲಿ ಹಲವು ವಿದ್ಯಾರ್ಥಿಗಳು ಕಾಲೇಜು ತೊರೆದು ಬೀದಿಗೆ ಬಿದ್ದರು. ಆದರೆ ಈ ಹಗರಣಗಳ ಪ್ರಮುಖ ರೂವಾರಿ ಲಿಂಗರಾಜು ಮಾತ್ರ ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಲೇ ಇದ್ದ.

ಲಿಂಗರಾಜು 2002ರಲ್ಲಿ ವಿಭಾಗದ ಮುಖ್ಯಸ್ಥನಾದ. ಆಗಿನ ಪ್ರಭಾರ ಪ್ರಾಂಶುಪಾಲ ಶ್ರೀನಾಥ್ (ಈಗ ಕೆ.ಆರ್.ಪೇಟೆ ಪಾಲಿಟೆಕ್ನಿಕ್ ನಲ್ಲಿದ್ದಾರೆ), ಎಲೆಕ್ಟ್ರಿಕಲ್ ವಿಭಾಗದ ಇನ್ಸ್‌ಪೆಕ್ಟರ್ ಉದಯಕುಮಾರ್, ಎಕ್ಸಾಮಿನೇಷನ್ ಕ್ಲರ್ಕ್ ಶ್ರೀನಿವಾಸ್ (ಈಗ ಚನ್ನಪಟ್ಟಣದ ಪಾಲಿಟೆಕ್ನಿಕ್‌ನಲ್ಲಿದ್ದಾನೆ) ಕ್ರಿಮಿನಲ್ ಬುದ್ಧಿಯ ಬಡ್ಡಿ ದಂಧೆಕೋರ ಸಹಾಯಕ ಸಿದ್ದಯ್ಯ, ಲಿಂಗ ರಾಜುವಿಗೆ ಸಕಲವನ್ನೂ ಪೂರೈಸುವ ಚಾಲಕ ನಂಜೇಗೌಡ ಇವರೆಲ್ಲರೂ ಜೊತೆಗೂಡಿ ದಂಧೆ ಆರಂಭಿಸಿದರು. ವಿದ್ಯಾರ್ಥಿ ಗಳಿಂದ ಒಂದು ಪ್ರಶ್ನೆ ಪತ್ರಿಕೆಗೆ ಸಾವಿರಾರು ರೂಗಳನ್ನು ಪಡೆದು, ಉತ್ತರ ಪತ್ರಿಕೆಯನ್ನು ಕದ್ದು ಉತ್ತರ ಬರೆಸಿ, ಅದನ್ನು ಮಧ್ಯೆ ಸೇರಿಸಿ ಪಾಸ್ ಮಾಡಿಸುವ ದಂಧೆ ಅದು. ಎಷ್ಟೋ ವರ್ಷಗಳ ನಂತರ ನೇರವಾಗಿ ಸಿಕ್ಕಿಬಿದ್ದರು ಈ ಖದೀಮರು. ಅಷ್ಟರಲ್ಲಾಗಲೇ ನೂರಾರು ವಿದ್ಯಾರ್ಥಿ ಗಳಿಂದ ಹಣ ಪಡೆದು, ಇವರ ಕುಕೃತ್ಯಗಳನ್ನು ಲೀಲಾಜಾಲವಾಗಿ ನಡೆಸಿದ್ದರು. ಈ ಹೊತ್ತಿಗೆ ಇವರಿಂದ ಇಡೀ ಸಿಪಿಸಿ ಪಾಲಿಟೆಕ್ನಿಕ್‌ನ ಶೈಕ್ಷಣಿಕ ವಾತಾವರಣವೇ ಹಾಳಾಗಿತ್ತು.

ಆಗ ಇವರೆಲ್ಲ ನಡೆಸಿದ್ದ ಹಗರಣವನ್ನು ತನಿಖೆ ಮಾಡಲು ಸರ್ಕಾರವು ನಿವೃತ್ತ ಜಿಲ್ಲಾ ನ್ಯಾಯಾಧೀಶ ಕೃಷ್ಣಪ್ಪನವರ ಆಯೋಗವನ್ನು ರಚಿಸಿತ್ತು. ಈ ಹಗರಣ ನಡೆದಿರುವುದು ನಿಜವೆಂತಲೂ, ಲಿಂಗರಾಜುವನ್ನು ಕೆಲಸದಿಂದಲೇ ವಜಾಮಾಡಿ, ಈ ಹಗರಣದಲ್ಲಿ ಭಾಗಿಯಾಗಿರುವ ಮಿಕ್ಕ ಖದೀಮರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದೂ ಆಯೋಗವು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತ್ತು. ದುರಂತ ಅಂದರೆ ವರದಿ ಸಲ್ಲಿಸಿ ಮೂರು ವರ್ಷಗಳೇ ಕಳೆದರೂ ಇವರುಗಳ ಮೇಲೆ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.


ಲಿಂಗರಾಜ್


ಉದಯಕುಮಾರ್


ಸಿದ್ದಯ್ಯ

2005ರಲ್ಲಿ ಮೌಖಿಕ ಪರೀಕ್ಷೆಯಲ್ಲಿ ಅಂಕ ನೀಡಲು ವಿದ್ಯಾರ್ಥಿಗಳಿಂದ ಲಿಂಗರಾಜು ನೇರವಾಗಿ ಹಣ ವಸೂಲಿ ಮಾಡುತ್ತಿದ್ದುದು ಹೊರಬಿತ್ತು. ವಿದ್ಯಾರ್ಥಿಗಳ ಮೂಲಕವೇ ಉದಯ ಟಿವಿಯ ಕ್ರೈಂ ಸ್ಟೋರಿಗೆ ರೆಡ್ ಹ್ಯಾಂ... ಸಿಕ್ಕಿಬಿದ್ದರು. ಲಿಂಗರಾಜು ಮತ್ತು ಸಿವಿಲ್ ವಿಭಾ... ಉಪನ್ಯಾಸಕ ಎಂ.ಸಿ.ಕೃಷ್ಣಮೂರ್ತಿ ಅಮಾನತ್ತೂ ಸಹ ಆದ... ಆದರೆ ಲಿಂಗರಾಜು ತನ್ನ ರಾಜಕೀಯ ಸಂಪರ್ಕಗಳ... ಬಳಸಿ ಅಮಾನತ್ತನ್ನು ರದ್ದುಪಡಿಸಿಕೊಂಡು ವ... ವಕ್ಕರಿಸಿಕೊಂಡ.

ಈ ಬಗ್ಗೆ ಮತ್ತೊಬ್ಬ ನಿವೃತ್ತ ನ್ಯಾಯಾಧೀ... ಎಲ್.ರವೀಂದ್ರ ಅವರು ತನಿಖೆ ನಡೆಸಿ ಈ ಇಬ್ಬರ ಮೇ... ಸೂಕ್ತ ಕ್ರಮಕ್ಕೆ ಶಿಫಾರಸ್ಸು ಮಾಡಿದ್ದರು. ಲಕ್ಷಾಂತರ ಮ... ನೋಡುವ ಟಿವಿಯಲ್ಲಿ ಈತನ ಪುರಾಣ ಬಿತ್ತರವಾಗಿದ್ದ... ಇಡೀ ಜೀವಮಾನದಲ್ಲಿ ಪರೀಕ್ಷೆಯ ಕರ್ತವ್ಯಕ್ಕೆ ಬಾರದ... ಆದೇಶವಿದ್ದರೂ ಈತ ಈಗಲೂ ಪ್ರಿನ್ಸಿಪಾಲ... ಪರೀಕ್ಷೆಗಳಲ್ಲಿ ಹಾಜರಾಗಿ ನಿಯಮ ಉಲ್ಲಂ... ಮಾಡುತ್ತಿದ್ದರೂ ಈತನ ಮೇಲೆ ಒಂದೇ ಒ... ಸರಿಯಾದ ಕ್ರಮ ತೆಗೆದುಕೊಳ್ಳಲಾಗಿಲ್ಲ. ಚೋ... ಎಂದರೆ ಈ ತನಿಖಾ ಆಯೋಗದಲ್ಲಿ ತಾಂ... ಇಲಾಖೆಯ ಹಾಲಿ ನಿರ್ದೇಶಕರ... ಹೆಚ್.ಯು.ತಳವಾರ್ ಸಹ ಇದ್ದರು.

ಇನ್ನು ಸಿವಿಲ್ ಎಂಜಿನಿಯರ್ ವಿಭಾ... ಎಂ.ಸಿ.ಕೃಷ್ಣಮೂರ್ತಿಯನ್ನು ತಾಂತ್ರಿಕ ಶಿ... ಇಲಾಖೆಯ ಅಂದಿನ ಅಧೀನ ಕಾರ್ಯದ... ಕೆ.ಎಸ್.ವೇಣುಗೋಪಾಲ್‌ರವರು ಇಡಿ62ಡಿ... 2005 ಅಧಿಸೂಚನೆಯನ್ನು ಹೊರಡಿಸಿ ಅಮಾ... ಮಾಡಿದ್ದರು. ನಂತರ ಈತನನ್ನು ಚಿಂತಾಮಣಿಗೆ ವ... ಮಾಡಲಾಯಿತು. ಆದರೆ ವರ್ಗಾವಣೆ ಆದೇಶ... ಇಂದಿಗೂ ಪಾಲಿಸದೆ ಇದೇ ಸಿಪಿಸಿಯಲ್ಲಿ ಇದ್ದಾನೆ... ಇಲ್ಲಿ ಸರ್ಕಾರಿ ಆದೇಶಕ್ಕೆ ಯಾವ ಬೆಲೆ ಕೊಡಲಾಗು... ಮತ್ತು ಲಿಂಗರಾಜುವಿನ ಆಡಳಿತದ ವೈಖರಿ ಹೇ... ಎಂಬುದು ಗೊತ್ತಾಗುತ್ತದೆ.

ಕೃಷ್ಣಮೂರ್ತಿ ಕೆಲಸ ಪಡೆದುಕೊಳ್ಳುವಾಗಲೇ ಅಪರಾಧವೆಸಗಿದ್ದಾನೆ. ಕುರುಬ ಜಾತಿಗೆ ಸೇರಿರುವ ಈತ ಕೆಲಸಕ್ಕಾಗಿ ಪರಿಶಿಷ್ಟ ಪಂಗಡಕ್ಕೆ ಸೇರುವ ಕಾಡು ಕುರುಬ ಜಾತಿ ಎಂದು ಫೋರ್ಜರಿ ಪ್ರಮಾಣ ಪತ್ರ ಸಲ್ಲಿಸಿ ಕೆಲಸ ಪಡೆದುಕೊಂಡಿದ್ದಾನೆಂಬ ಆರೋಪಗಳಿವೆ. ಇಂತಹ ಕೃಷ್ಣಮೂರ್ತಿ ಮತ್ತು ಲಿಂಗರಾಜುಗಳ ಆಟ ಸಿಪಿಸಿ ಪಾಲಿಟೆಕ್ನಿಕ್‌ನಲ್ಲಿ ಜೋರಾಗಿಯೇ ನಡೆಯುತ್ತಿದೆ. 2005ರಲ್ಲಿ ಲಿಂಗರಾಜು ಸಿಪಿಸಿಯಿಂದ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಗೆ ವರ್ಗವಾದ ನಂತರ ಅಲ...

ಕೊಪ್ಪ ಕಾಮುಕ ಮಂತ್ರವಾದಿ... ಬಲಿಯಾದ ವಿದ್ಯಾರ್ಥಿನಿ



ಕೊಪ್ಪ ಪರಿಸರದಲ್ಲಿ ಅಸಾಹುತಕಾರಿ ಬೆಳವಣಿಗೆಯೊಂದು ನಡೆದಿದೆ. ಮುಸ್ಲಿಂ ಯುವತಿಯೊಬ್ಬಳು ಹಿಂದೂ ವಿದ್ಯಾರ್ಥಿನಿಯನ್ನು ಪುಸಲಾಯಿಸಿ ಕಾಮದಾಹಿಗಳ ಕೈಗೊಪ್ಪಿಸಿದ್ದು ಘಟನೆಯ ಮೂಲ. ಅತ್ಯಾಚಾರದಿಂದ ಜರ್ಜರಿತಳಾದ ಹುಡುಗಿ ಆತ್ಮಹತ್ಯೆಗೆ ಶರಣಾಗಿದ್ದಾಳೆ. ಮದರಸವೊಂದರ ಗುರುವಿನ ಹೆಸರು ಈ ಪ್ರಕರಣದಲ್ಲಿ ರಾರಾಜಿಸಿದೆ. ಇದು ಚಿಕ್ಕಮಗಳೂರು ಜಿಲ್ಲೆಯಲ್ಲಿ ಭುಗಿಲೆದ್ದು ಲಾವಾರಸದಂತೆ ಆಗಸದೆತ್ತರಕ್ಕೆ ಚಿಮ್ಮುತ್ತಿದೆ.

ಕಾಮುಕ ರಕ್ಕಸ ಅಬ್ದುಲ್ ರಜಾಕ್ ಎಂಬಾತನೇ ಈ ಪ್ರಕರಣದ ಖಳನಾಯಕ. ಈತ ಕೊಪ್ಪ ತಾಲ್ಲೂಕಿನ ಹರಿಹರಪುರ ಹೋಬಳಿಗೆ ಕೂಗಳತೆ ದೂರವಿರುವ ದೇವರಮನೆ ಮೂಲದವನು. ಬಟ್ಟೆ, ಮೀನು ಮಾರಾಟದಿಂದ ಬದುಕುತ್ತಿದ್ದವನು. ಮಾಟ, ಮಂತ್ರ, ತಾಯಿತ, ದೆವ್ವ ಬಿಡಿಸುವ ಕೆಲಸದಲ್ಲಿ ಮಂತ್ರವಾದಿಗಳನ್ನು ಮೀರಿಸುವಂತೆ ಜನರಿಗೆ ಮಂಕು ಬೂದಿ ಎರಚಿದ್ದವನು.


ಗುಲಾಂ ಸರ್ವರ್, ಅಬ್ದುಲ್ ರಜಾಕ್ ಮತ್ತು ಶಾಹಿನಾ

ಜಾತಿ, ಮತ, ಧರ್ಮಗಳನ್ನು ಬಿಟ್ಟು ಈತನ ಬಳಿಗೆ ಬಂದವರು ತಮ್ಮ ಗೋಳನ್ನು ತೋಡಿಕೊಳ್ಳುತ್ತಿದ್ದರು. ಇಂಥವನಿಗೆ ಅದ್ಯಾವ ಯುವಗಂಡ ಕಾಲದಲ್ಲಿ ಗಂಡಾಂತರಕಾರಿ ಆಲೋಚನೆ ಹೊಳೆಯಿತೋ ಗೊತ್ತಿಲ್ಲ. ಹೆಂಗಳೆಯರನ್ನು ಮೀನುಮರಿಯಂತೆ ಬಲೆಗೆ ಕೆಡವುವಲ್ಲಿ ನಿಸ್ಸೀಮನಾಗಿದ್ದ ಪರಮ ಹರಾಮಿ ರಜಾಕ್‌ಗೆ ಚೆಂದದ ಹೆಂಡತಿಯಿದ್ದಾಳೆ. ಮದುವೆ ವಯಸ್ಸಿಗೆ ಬಂದಿರುವ ಮಗಳಿದ್ದಾಳೆ. ಆದರೂ ಕಚ್ಚೆ ಹರುಕತನ ಬಿಡಲಿಲ್ಲ ನೋಡಿ. ಪಕ್ಕದೂರು ಬಂಡಿಗಡಿಯ ಮಾಯಾಂಗಿನಿ ಶಾಹಿನಾಳನ್ನು ಸ್ಟೆಪ್ನಿಯಾಗಿಟ್ಟುಕೊಂಡಿದ್ದ. ಶಾಹಿನಾಗೆ ಆರು ವರ್ಷಗಳ ಹಿಂದೆಯೇ ಮದುವೆ ಶಾಸ್ತ್ರ ಮುಗಿದಿತ್ತು. ಆದರೆ ಈಕೆಯ ದುರ್ಬುದ್ಧಿಯಿಂದ ಬೇಸತ್ತ ಗಂಡ ಆಕೆಯನ್ನು ಬಿಟ್ಟು ಪರಾರಿಯಾಗಿದ್ದಾನೆ.

ಹರಿಹರಪುರದ ಗ್ರಾಮ ಪಂಚಾಯತಿ ಶಾಹಿನಾಳಿಗೆ ವಸತಿ ಸೌಕರ್ಯ ನೀಡಿದೆ. ತಾಯಿಯೊಂದಿಗಿರುವ ಶಾಹಿನಾ ಬಗ್ಗೆ ಆ ಪರಿಸರದ ಜನರಿಗೆ ಒಳ್ಳೆಯ ಅಭಿಪ್ರಾಯವಿಲ್ಲ. ಆಕೆಯದ್ದು ಹರಿಹರಪುರದಲ್ಲಿ ಟೈಲರಿಂಗ್ ವೃತ್ತಿ. ಜೊತೆಗೆ ಕೈಗೊಂದಿಷ್ಟು ಹಣ ತಂದು ಕೊಡುವ ತಲೆಹಿಡುಕತನದ ಉಪವೃತ್ತಿ.

ಸುಂದರ ಯುವತಿಯರನ್ನು ಕಂಡರೆ ಅವರೊಂದಿಗೆ ಸ್ನೇಹ ಗಿಟ್ಟಿಸಿಕೊಳ್ಳುತ್ತಿದ್ದ ಶಾಹಿನಾ ಅನಂತರ ಅವರನ್ನೇ ಬಲಿ ಕೊಡಲು ಹಿಂದು ಮುಂದು ಯೋಚಿಸುತ್ತಿರಲಿಲ್ಲ. ಹೀಗೆ ಚೆಂದದ ಹುಡುಗಿಯರನ್ನು ಶಾಹಿನಾ ಅಡ್ಡ ಕಸುಬಿಗಿಳಿಸುತ್ತಿದ್ದಳು.

ಶಾಹಿನಾಳ ಸ್ನೇಹಿತೆಯರಲ್ಲಿ ಬಂಡಿಗಡಿಯ ಹುಡುಗಿ ಅಶ್ವಿನಿಯೂ ಒಬ್ಬಳು. ಸರಳತೋಟದ ಚಂದ್ರಶೇಖರ್ ಎಂಬವರ ಇಬ್ಬರು ಪುತ್ರಿಯರಲ್ಲಿ ಅಶ್ವಿನಿ ಹಿರಿಯವಳು. ತಾಯಿ ಆಶಾ ಬಾಳೆಹೊನ್ನೂರಿನ ಹಾಸ್ಟೆಲ್‌ವೊಂದರಲ್ಲಿ ಕೆಲಸದಲ್ಲಿದ್ದಾರೆ. ತಂಗಿ ಅರ್ಚನಾ ಕೊಪ್ಪದಲ್ಲಿ ದ್ವಿತೀಯ ಪಿಯುಸಿಯಲ್ಲಿ ಕಲಿಯುತ್ತಿದ್ದಾಳೆ. ವಿಪರ್ಯಾಸವೆಂದರೆ ಚಂದ್ರಶೇಖರ್ ಮನೆ ಬಿಟ್ಟು ಅನೇಕ ವರ್ಷಗಳು ಗತಿಸಿವೆ.

ದುರಂತ ನಾಯಕಿ ಅಶ್ವಿನಿ ಕೊಪ್ಪದ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿನಿ. ಚುರುಕಿನ ಹುಡುಗಿ. ತನ್ನ ತಂದೆ ಮನೆ ಬಿಟ್ಟ ಕೊರಗು ಅವಳನ್ನು ಇನ್ನಿಲ್ಲದಂತೆ ಕಾಡುತ್ತಿದ್ದರೂ ಯಾವಾಗಲೂ ಲವಲವಿಕೆಯಾಗಿ ಇರುತ್ತಿದ್ದಳು. ಮನೆಯ ಹಿರಿಮಗಳಾದ ಅಶ್ವಿನಿ ತನ್ನ ತಂದೆಯನ್ನು ಹುಡುಕಲು ಪ್ರಯತ್ನ ನಡೆಸಿದ್ದಳು. ತನ್ನ ಗೆಳತಿಯರೊಂದಿಗೆ ತನ್ನ ಗೋಳಿನ ಕಥೆಯನ್ನು ಹೇಳಿಕೊಳ್ಳುತ್ತಿದ್ದಳು. ಆದರೆ ಶಾಹಿನಾ ತನ್ನನ್ನು ಕಾಮುಕ ವ್ಯಾಘ್ರಗಳ ಕೈಗೊಪ್ಪಿಸುತ್ತಾಳೆ ಅಂತ ಯಾವತ್ತಿಗೂ ಆಕೆ ಊಹಿಸಿಯೂ ಇರಲಿಲ್ಲ.

ಅವತ್ತು ಫೆ.28. ರಜಾಕ್ ಮಂತ್ರದಿಂದ ನಿನ್ನ ತಂದೆಯನ್ನು ಹುಡುಕಿಕೊಡುತ್ತಾನೆ, ಅವರು ಮತ್ತೆ ಮನೆ ಕಡೆಗೆ ಮರಳಿ ಬರುವಂತೆ ಮಾಡುತ್ತಾನೆ ಎಂದೆಲ್ಲ ಅಶ್ವಿನಿಗೆ. ಶಾಹಿನಾ ಪುಂಖಾನುಪುಂಖವಾಗಿ ಪುಂಗಿಯೂದಿದ್ದಳು. ಅಷ್ಟೇ ಅಲ್ಲದೆ, ಹೊತ್ತಲ್ಲದ ಹೊತ್ತಿನಲ್ಲಿ ಅಶ್ವಿನಿಯನ್ನು ರಜಾಕನ ಮನೆಗೆ ಕರೆತಂದಳು ಶಾಹಿನಾ.

ಅಷ್ಟೊತ್ತಿಗಾಗಲೇ ಕಾಮುಕ ವ್ಯಾಘ್ರ ರಜಾಕ... ಕಾಮುಕತನಕ್ಕೆ ಒಪ್ಪಿಕೊಂಡರೆ ನಿನ್ನ ತಂದೆ ಮ... ವಾಪಸ್ ಬರುತ್ತಾರೆಂದೂ ಆಕೆಯನ್ನು ಶಾಹಿ... ಒಪ್ಪಿಸಿಬಿಟ್ಟಿದ್ದಳು. ಪರಮ ಪಾಪಿ ರಜಾಕ್‌ನಿಗೆ ... ಮಗಳ ಸಮಾನ ಬೆಳೆದಿರುವ ಹುಡುಗಿ ಅಶ್ವಿನಿ... ಮೇಲೆರಗಲು ಅದ್ಯಾವ ದೆವ್ವ ಮನಸ್ಸು ಕೊಟ್ಟಿತೋ... ಪರಮ ಪಾಪಿ ರಜಾಕ್ ಆಕೆಯನ್ನು ತನ್ನ ಹೀನಕೃ... ಬಳಸಿಕೊಂಡ.

ಇದಾದ ಬಳಿಕ ಅಶ್ವಿನಿ ತೀರ ಮಂಕಾಗಿದ್ದಳು. ... ಮೇಲೆ ನಡೆದಿರುವುದು ಅತ್ಯಾಚಾರವೆಂದು ತಿಳಿ... ಅವಳ ಮನಸ್ಸು ಜರ್ಜರಿತಗೊಂಡಿತ್ತು. ಯಾವಾ... ಲವಲವಿಕೆಯಿಂದಿರುತ್ತಿದ್ದವಳು ಏಕಾಏಕಿ ಖಿನ್ನತೆಗೊ... ಗಿದ್ದಳು. ಆಕೆಯನ್ನು ಹತ್ತಿರದಿಂದ ಬಲ್ಲವರು ಇದ... ಗಮನಿಸಿದರು. ನಡೆಯಬಾರದ್ದು ನಡೆದರೆ ಗ... ಬೇಯುತ್ತಾ ಅಂತ ತನ್ನ ಕೆಲವು ಆಪ್ತ ಸ್ನೇಹಿತೆಯರೊಂ...

ತನ್ನ ಕೈಬಳಕ ತೋರಿಸಿ ಮಾಜಿ ಸ್ಪೀಕರ್ ...ವರು ಇವನನ್ನು ಉಗಿದು ಓಡಿಸಿದ್ದರು. ನಂತರ ...ಜನಗರಕ್ಕೆ ವರ್ಗವಾದ. ಅಲ್ಲಿ ಸಿಬ್ಬಂದಿಗಳನ್ನು ...ಪೀಡಿಸುತ್ತಿದ್ದರಿಂದ ಅಲ್ಲಿನ ವಿದ್ಯಾರ್ಥಿಗಳೇ ...ಬೀದಿಗಳಲ್ಲಿ ಅಟ್ಟಾಡಿಸಿಕೊಂಡು ಹೊಡೆದು ...ದರು ಎಂಬ ಮಾತಿದೆ.

...ಲಿಂಗರಾಜು ತನ್ನ ರಾಜಕೀಯ ಪ್ರಭಾವ ಬೆಳೆಸಿ ಮತ್ತೆ ...ಪಾಲಿಟೆಕ್ನಿಕ್‌ಗೆ ಬಂದು ಪ್ರಾಂಶುಪಾಲನಾಗಿ ತನ್ನ ...ವಹಾರಗಳನ್ನು ಯಾವುದೇ ಎಗ್ಗಿಲ್ಲದೆ ಮುಂದುವರೆಸಿ... ವಿದ್ಯಾರ್ಥಿಗಳಿಂದ ಹೆಚ್ಚುವರಿ ಹಣ ವಸೂಲಿ, ...ಕ್ಷೆಗೆ ಕೂರಲು, ಪ್ರವೇಶ ಪತ್ರ ಪಡೆಯಲು, ಇಂಟರ್ನಲ್ ...ಗಳನ್ನು ಪಡೆಯಲು ಹಣ ವಸೂಲಿ... ಇವೆಲ್ಲವನ್ನೂ ...ರಾಜಾರೋಷವಾಗಿ ನಡೆಸುತ್ತಿದ್ದಾನೆ. ಇದರ ಜೊತೆಗೆ ಸಿಬ್ಬಂದಿ ...ರಜೆ ಬೇಕೆಂದರೆ ಅದಕ್ಕೂ ಹಣ ಕೊಡಲೇಬೇಕು. ...ಗ್ಯ ಭತ್ಯೆ ಇನ್ನಿತರೆ ಭತ್ಯೆಗಳಿಗೆ ಕಮಿಷನ್ ಕೊಡಲೇ... ಇಲ್ಲದಿದ್ದರೆ ಇಂತವರ ಮೇಲೆ ಮೂಕರ್ಜಿಗಳನ್ನು ...ಕೊಡಿಸಿ ಕೊಡಬಾರದ ಕಿರುಕುಳವನ್ನು ಕೊಡುತ್ತಾನೆ. ಎಂತಹ ಮಟ್ಟಕ್ಕೆ ಇಳಿದಿದ್ದಾನೆ ಎಂದರೆ ಸ್ವಚ್ಛತಾ ...ದ ಸಿಬ್ಬಂದಿಗೆ ನೀಡುವ 2000 ರೂ.ಗಳ ಚಿಲ್ಲರೆ ...ದಲ್ಲಿಯೂ ಪಾಲು ಪಡೆಯುತ್ತಾನೆ.

ಇನ್ನು ಲಿಂಗರಾಜುವಿನ ಮೆಡಿಕಲ್ ಬಿಲ್‌ದೇ ...ಂದು ಪುರಾಣವಿದೆ. ಈ ಬಾಬ್ತಿಯಲ್ಲಿ 2000ದಿಂದ ...ಯುವರೆಗೆ ಆತ ಪಡೆದುಕೊಂಡಿರುವ ಹಣ 14 ಲಕ್ಷ! ...ಡಲು ಆರೋಗ್ಯವಂತನಾಗಿಯೇ ಕಾಣುವ ಲಿಂಗರಾಜುಗೆ ...ತಹ ಬರಬಾರದ ಕಾಯಿಲೆಗಳು ಏನು ಬಂದಿವೆ ಅಂತ ...ತನಿಖೆ ನಡೆಯಬೇಕಿದೆ.

...ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆ ...ತ್ತು ರಾಜ್ಯ ಸರ್ಕಾರಗಳಿಂದ ಕಾಲೇಜಿಗೆ ಅನುದಾನ ...ವರೆ, ಕಾಲೇಜು ಅಭಿವೃದ್ಧಿ ಮತ್ತು ಉಪಕರಣಗಳ ...ದಿಯ ಹೆಸರಿನಲ್ಲಿ ಲಿಂಗರಾಜು ಲಕ್ಷಾಂತರ ರೂಗಳನ್ನು ...ಂ ಮಾಡಿದ್ದಾನೆ. ರಿಜಿಸ್ಟ್ರಾರ್ ಮತ್ತು ಡ್ರಾಯಿಂಗ್ ...ಸರ್ ಮೂಲಕ ನಡೆಯಬೇಕಿದ್ದ ಖರೀದಿಗಳು ಮತ್ತು ...ತರ್‌ಗಳನ್ನು ತಾನೇ ನೇರವಾಗಿ ಮಾಡಿದ್ದಾನೆ. ಈ ...ರ್ದೆಯಲ್ಲಿರುವ ಪುಟ್ಟಸ್ವಾಮಿ ತನ್ನನ್ನು ಕೇಳದೆ ಖರೀದಿ ...ತಲಾಗಿದೆ ಮತ್ತು ಲಕ್ಷಾಂತರ ರೂಗಳ ಅವ್ಯವಹಾರ ...ದೆ ಎಂದು ಪ್ರಿನ್ಸಿಪಲ್ ಸೆಕ್ರೆಟರಿ ಮದನ್‌ಗೋಪಾಲ್ ...ಗೆ ದೂರನ್ನೂ ಸಹ ನೀಡಿದ್ದಾರೆ.

...ಉನ್ನತ ಶಿಕ್ಷಣ ಇಲಾಖೆಯ ಮುಖ್ಯ ಕಾರ್ಯದರ್ಶಿ ...ಗಿರುವ ಮದನ್‌ಗೋಪಾಲ್‌ರಂತಹ ಪ್ರಾಮಾಣಿಕ ಮತ್ತು ...ಅಧಿಕಾರಿಗಳಿದ್ದಾಗ್ಯೂ ಲಿಂಗರಾಜು ಮೇಲೆ ಕ್ರಮಕೈಗೊಳ್ಳ...ವುದು ವಿಪರ್ಯಾಸ.

• ಲಕ್ಷ್ಮಣ್ ಚೀರನಹಳ್ಳಿ


ಚಾಮರಾಜನಗರ ತಹಶೀಲ್ದಾರ್ ನಂದಿನಿಯ ತರಹೇವಾರಿ ದಂಧೆ!



ನಂದಿನಿ

ಚಾಮರಾಜನಗರ ಜಿಲ್ಲೆಗೆ ಅಂಟಿಕೊಂಡಿರುವ ದುರಾದೃಷ್ಟ ಸದ್ಯಕ್ಕೆ ನೆಟ್ಟಗಾಗುವಂತೆ ಕಾಣುತ್ತಿಲ್ಲ. ಸದಾ ಒಂದಿಲ್ಲೊಂದು ರೀತಿಯಲ್ಲಿ ಸುದ್ದಿಯಲ್ಲಿರುವ ಈ ಜಿಲ್ಲೆಯಲ್ಲಿ ಈಗ ಸದ್ದು ಮಾಡುತ್ತಿರುವುದು ಚಾಮರಾಜನಗರ ಕೇಂದ್ರ ಸ್ಥಾನದಲ್ಲಿ ತಹಸೀಲ್ದಾರ್ ಆಗಿ ಕುಳಿತು ಸರ್ವಾಧಿಕಾರಿಯಂತೆ ವರ್ತಿಸುತ್ತಿರುವ ಪಿ.ನಂದಿನಿ ಎಂಬ ಅನನುಭವಿ ಅಧಿಕಾರಿಣಿ!

ಏಳು ತಿಂಗಳ ಹಿಂದಷ್ಟೇ ಚಾಮರಾಜನಗರಕ್ಕೆ ತಹಸೀಲ್ದಾರ್ ಆಗಿ ಬಂದ ನಂದಿನಿ ಮೇಡಂಗೆ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಚುನಾವಣೆ ಎದುರಾಗಿತ್ತು. ಆ ಸಂದರ್ಭದಲ್ಲಿ ನಂದಿನಿ ಮೇಡಂ ಕಾಂಗ್ರೆಸ್ ಕಾರ್ಯಕರ್ತರೇ ನಾಚುವಂತೆ ಕಾಂಗ್ರೆಸ್ ಪರ ಓಡಾಡಿದ್ದು ಗುಟ್ಟೇನಲ್ಲ. ಆ ಚುನಾವಣೆಯಲ್ಲೇ ಬಿಜೆಪಿ, ಜೆಡಿಎಸ್ ಹಾಗೂ ಬಿಎಸ್‌ಪಿ ಪಕ್ಷದವರು ಈಯಮ್ಮನ ಕಾಂಗ್ರೆಸ್ ಪ್ರೇಮ ಕಂಡು ಕೆಂಡಾಮಂಡಲಗೊಂಡು ಆಕೆಯನ್ನು ಅಟಕಾಯಿಸಿಕೊಂಡಿದ್ದರು. ಆಗ ಓಡೋಡಿ ಬಂದು ತಹಸೀಲ್ದಾರ್ ನಂದಿನಿಯನ್ನು ಕಾಪಾಡಿದ್ದು ಜಿಲ್ಲಾಧಿಕಾರಿ ಅಮರ್ ನಾರಾಯಣ್ ಎಂಬ ದಕ್ಷ ಅಧಿಕಾರಿ!

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ, ಯಳಂದೂರು ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಸರ್ಕಾರದಿಂದ ಬಂದಿದ್ದ ಮಳೆಹಾನಿ ಪರಿಹಾರ ಹಣವನ್ನು ಅರ್ಜಿದಾರರಿಗೆ ಕೊಟ್ಟು ಆಯಾ ತಾಲ್ಲೂಕಿನ ಪ್ರೋಗ್ರೆಸ್ ಅನ್ನು ಎಸಿಯವರಿಗೆ ವರದಿ ಮಾಡಲಾಗಿದೆ. ಆದರೆ ನಂದಿನಿ ಮೇಡಂ ಮಾತ್ರ ತನಗೆ ಬಂದಿದ್ದ 2400 ಅರ್ಜಿಗಳನ್ನು ಮೂಲೆಗೆಸೆದು ಸರ್ಕಾರ ಕೊಟ್ಟಿದ್ದ ಕೋಟ್ಯಂತರ ಹಣ ಖಜಾನೆಯಲ್ಲೇ ಕೊಳೆಯುವಂತೆ ಮಾಡಿದ್ದಾರೆ. ಇದು ಗೊತ್ತಾಗಿ ಸಚಿವ ವಿಜಯಶಂಕರ್ ಆಕೆಗೆ ಭೂತ ಬಿಡಿಸಿದ್ದರು. ಆದರೂ ನಂದಿನಿ ಮೇಡಂ ಯಾವುದರ ಬಗ್ಗೆಯೂ ಕಿಂಚಿತ್ತು ತಲೆಕೆಡಿಸಿಕೊಳ್ಳುವ ಪೈಕಿ ಅಲ್ಲ!!


ಅಮರನಾರಾಯಣ


ಬಸವರಾಜು

ಜಿಲ್ಲಾಧಿಕಾರಿ ಅಮರ್ ನಾರಾಯಣ್‌ರ ಆದೇಶದಂತೆ ಜಿಲ್ಲೆಯಾದ್ಯಂತ ಇರುವ ಕೆರೆಗಳನ್ನು ಹೂಳು ತೆಗೆಸಿ ಅಭಿವೃದ್ಧಿಪಡಿಸಬೇಕು. ಆದರೆ ನಂದಿನಿ ಮೇಡಂ ಮಾಡುತ್ತಿರುವುದೇ ಬೇರೆ. ತನ್ನ ವ್ಯಾಪ್ತಿಗೆ ಬರುವ ಕೆರೆಗಳ ಮೇಲೆ ದಾಳಿ ಇಡುವ ನಂದಿನಿ ಅಲ್ಲಿ ಮಣ್ಣು ತೆಗೆಸುವ ಹೌಸಿಂಗ್ ಬೋರ್ಡ್ ಗುತ್ತಿಗೆದಾರರನ್ನೇ ಅಟಕಾಯಿಸಿಕೊಂಡು ಕಮೀಷನ್ ಹಣಕ್ಕೆ ಪೀಡಿಸುತ್ತಾರೆ. ಅಕಸ್ಮಾತ್ ಕಮೀಷನ್ ಕೊಡಲು ಗುತ್ತಿಗೆದಾರರು ಒಪ್ಪದಿದ್ದರೆ ಅವರ ಮೇಲೆ ಈಯಮ್ಮ ಮುರಿದುಕೊಂಡು ಬಿದ್ದು ಅವರೆಲ್ಲ ಕಳ್ಳರೆಂಬಂತೆ ಬಿಂಬಿಸುತ್ತಾರೆ.

ಅದೂ ಸಾಲದೆಂಬಂತೆ ತನ್ನ ಇಲಾಖೆಯ ವ್ಯಾಪ್ತಿಯಲ್ಲಿರುವ ಎಲ್ಲಾ ಸೆಕ್ಷನ್‌ಗಳಿಂದಲೂ ಪ್ರತಿ ತಿಂಗಳು ಕಮಾಯಿ ಗಿಂಜುತ್ತಿರುವ ಈ ನಂದಿನಿ ಮೇಡಂನ ಮೇಲೆ ಈಗಾಗಲೇ ಹಲವಾರು ದೂರುಗಳು ತಲುಪಿವೆ. ಆದರೂ ಡಿ.ಸಿ ಅಮರ್ ನಾರಾಯಣರೇಕೋ ಇದರತ್ತ ಗಮನ ಹರಿಸುತ್ತಿಲ್ಲ.

ಜಿಲ್ಲೆಯಲ್ಲಾಗಿರುವ ಅಕ್ರಮ ಒತ್ತುವರಿಗಳನ್ನು ತೆರವುಗೊಳಿಸಿ ಆರ್.ಟಿ.ಸಿ ತಿದ್ದುಪಡಿ ಮಾಡುವ ಬಗ್ಗೆ ದೊರೆಸ್ವಾಮಿ ಎಂಬುವವರು ದೂರುಗಳ ಮೇಲೆ ದೂರುಗಳನ್ನು ನೀಡಿದ್ದರು. ಆದರೆ ತಹಸೀಲ್ದಾರ್ ನಂದಿನಿ ಅವರು ಸರ್ಕಾರಿ ಜಾಗಗಳನ್ನು ಒತ್ತುವರಿ ಮಾಡಿಕೊಂಡು ಕುಳಿತಿರುವ ಕುಬೇರರ ಜೊತೆ ಒಳ ಒಪ್ಪಂದ ಮಾಡಿಕೊಂಡು ಬಹಳ ದೊಡ್ಡ ಮಟ್ಟದಲ್ಲೇ ಕಪ್ಪ ಪಡೆದು ತೆಪ್ಪಗಾಗಿದ್ದಾಳೆ.

2008ರ ಬ್ಯಾಚ್‌ನಲ್ಲಿ ಕೆಎಎಸ್‌ಗೆ ಆಯ್ಕೆಯಾದ ನಂದಿನಿ ಬೆಂಗಳೂರಿನಲ್ಲಿ ಎರಡು ವರ್ಷ ಪ್ರೊಬೆಷನರಿ ಸೇವೆ ಸಲ್ಲಿಸಿ ಚಾ.ನಗರಕ್ಕೆ ಪ್ರಪ್ರಥಮವಾಗಿ ಡ್ಯೂಟಿ ಹಾಕಿಸಿಕೊಂಡಿರುವಾಕೆ. ಚಾ.ನಗರದಂತಹ ಹಿಂದುಳಿದ ಜಿಲ್ಲೆಯಲ್ಲಿ ಯಾವ ರೀತಿ ಆಡಳಿತ ಮಾಡಬೇಕೆಂಬ ಅರಿವಿಲ್ಲದ ಈಕೆಯನ್ನು ಅರ್ಜೆಂಟಾಗಿ ತೊಲಗಿಸದಿದ್ದರೆ ಚಾಮರಾಜನಗರಕ್ಕೆ ಉಳಿಗಾಲವಿಲ್ಲ.

ಡಿಸಿ ವಿರುದ್ಧ ಬಾಡಿಗೆ ಹೋರಾಟ!

ಸಾರ್ವಜನಿಕರಿಂದ ತಹಸೀಲ್ದಾರ್ ನಂದಿನಿ ವಿರುದ್ಧ ಹತ್ತಾರು ದೂರುಗಳು ಬಂದ ಹಿನ್ನೆಲೆಯಲ್ಲಿ ಡಿಸಿ ಅಮರ್ ನಾರಾಯಣ್ ಅವರು ಕೆಲವು ಹೋಬಳಿಗಳನ್ನು ಈಕೆಯಿಂದ ಕಿತ್ತುಕೊಂಡು ಪ್ರೊಬೆಷನರಿ ಎಸಿ ಮಂಜುನಾಥ್‌ಗೆ ವಹಿಸಿದ್ದರು. ತಕ್ಷಣ ಅಲರ್ಟ್ ಆದ ನಂದಿನಿ ಆ ಭಾಗದ ಕೆಲ ಸಂಘಟನೆಗಳನ್ನು ಪಳಗಿಸಿಕೊಂಡು ಜಿಲ್ಲಾಧಿಕಾರಿಗಳ ವಿರುದ್ಧವೇ ಪ್ರತಿಭಟನೆ ನಡೆಸಿದಳು. ಆದರೆ ನಂದಿನಿ ವಿರುದ್ಧ ಅಲ್ಲಿನ ಪ್ರಾಮಾಣಿಕ ಸಂಘಟನೆಗಳು ಹೋರಾಟಕ್ಕಿಳಿದು ದಿಟ್ಟತನ ಪ್ರದರ್ಶಿಸಿದವು.

ಕೊಳ್ಳೇಗಾಲ, ಚಾಮರಾಜನಗರ, ಯಳಂದೂರು ಹಾಗೂ ಗುಂಡ್ಲುಪೇಟೆಗಳಲ್ಲಿರುವ ಕೆಲವು ಸಂಘಟನೆಗಳ ಹೋರಾಟಗಾರರು ಭ್ರಷ್ಟ ಅಧಿಕಾರಿಗಳ ಪರ ನಿಂತು ಎಂಜಲು ಕಾಸಿಗೆ ಕೈಚಾಚಿ ಅಸಹ್ಯ ಹುಟ್ಟಿಸಿವೆ.

ಇದು ನಂದಿನಿ ಎಂಥಾ ಕಿತಾಪತಿ ಹೆಂಗಸೆಂಬುದಕ್ಕೆ ಸಣ್ಣ ಉದಾಹರಣೆಯಷ್ಟೆ. •

...ರಿಸಿದಳು. ಇದ್ದುದನ್ನು ಇದ್ದಂತೆ ಅವರೆಲ್ಲಾ ಹೇಳಿದ್ದಾರೆ. ಕೆಲವರು ಕಿಚಾಯಿಸಿದ್ದಾರೆ. ಅಷ್ಟಕ್ಕೆ ಅಶ್ವಿನಿ ಮುಂದೆ ...ಹುದಾದ ಅನಾಹುತವನ್ನು ಮೆಲುಕು ಹಾಕಿದ್ದಾಳೆ. ...ಹೋದ ಅಶ್ವಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ...ಇಂತಹ ವಿಷಯ ಕೊಪ್ಪದಂತಹ ಚಿಕ್ಕ ಊರಿನಲ್ಲಿ ...ಲಾಗಲು ಬಹಳ ದಿನ ಬೇಕಿಲ್ಲ. ಈ ಮಧ್ಯೆ ಗುಲಾಂ ...ರ್ ಎಂಬಾತನ ಹೆಸರೂ ಈ ಪ್ರಕರಣದೊಂದಿಗೆ ...ಸುಕೊಂಡಿತು. ಗುಲಾಂ ಸರ್ವರ್ ಮೂಲತಃ ಉತ್ತರ ...ಶದವನು. ಕೊಪ್ಪ ತಾಲ್ಲೂಕಿನ ಹರಿಹರಪುರದ ದೇವರ ...ಯಲ್ಲಿರುವ ಮದರಸದಲ್ಲಿ ಪಾಠ ಹೇಳಿಕೊಡುತ್ತಿದ್ದಾನೆ. ಪ್ರತಿ ದಿನ ಅಬ್ದುಲ್ ರಜಾಕ್‌ನ ಮನೆಗೆ ಊಟಕ್ಕೆ ...ತೆಗೆ ಬರುತ್ತಿದ್ದ. ಹಲವರ ಪ್ರಕಾರ ಅವತ್ತು ಅಶ್ವಿನಿ ...ಲೆ ರಜಾಕ್ ಮತ್ತು ಗುಲಾಂ ಇಬ್ಬರೂ ಅತ್ಯಾಚಾರ ...ದ್ದರು.

ಅಶ್ವಿನಿ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಹೊರಬೀಳು...ತ್ತೆ ಕಾಮುಕ ಅಬ್ದುಲ್ ರಜಾಕ್ ನಾಪತ್ತೆಯಾದ. ಆಗ ...ನ ಕೆಲವರು ಆತನನ್ನು ಹುಡುಕಿ, ಹಿಡಿದು, ...ದೇಟು ಕೊಟ್ಟು ಊರಿನ ರಸ್ತೆಯುದ್ದಕ್ಕೂ ಬೆತ್ತಲೆ ...ವಣಿಗೆ ನಡೆಸಿ ಪೊಲೀಸರಿಗೆ ಆತನನ್ನು ಒಪ್ಪಿಸಿದರು. ...ಪೊಲೀಸರು ಸರ್ವರ್ ಮತ್ತು ಶಾಹಿನಾಳನ್ನು ಬಂಧಿಸಿ ...ಾಲಯಕ್ಕೆ ಒಪ್ಪಿಸಿದರು.

...ಈ ಘಟನೆ ನಡೆಯುವುದಕ್ಕೆ ಸರಿಯಾಗಿ ಎಂಟು ...ಹಿಂದೆ ಇದೇ ಪರಿಸರದಲ್ಲಿ ಮಾನಸಿಕ ಅಸ್ವಸ್ಥೆಯಾಗಿದ್ದ ...ರ ಹುಡುಗಿ ಅಲ್ಮಾನ್ ಎಂಬಾಕೆಯನ್ನು ಕಾಮುಕ ...ನ ಎಂಬಾತ ಕೆಡಿಸಿಕೊಂಡಿದ್ದ. ಊರ ಜನರು ಆತನನ್ನು ...ಡಿಸಿ ಬಿಡಿಟಿದ್ದರು. ಇದೀಗ ರಜಾಕ್ ಕಂಬಿ ...ಣಿಸುತ್ತಿದ್ದಾನೆ.

...ಇಂತಹದ್ದೇ ಹಲವಾರು ಘಟನೆಗಳು ಈ ಪರಿಸರದಲ್ಲಿ ...ಯುತ್ತಿದ್ದರೂ ಅವು ಹೊರಬರದೇ ಮುಚ್ಚಿ ...ಗುತ್ತಿರುವ ಶಂಕೆಗಳಿವೆ. ದುರ್ಮಾರ್ಗಿ ಕಾಮುಕರಿಗೆ ...ಕ್ಷೆಯಾಗಬೇಕಿದೆ. ಇಲ್ಲದಿದ್ದರೆ ಇನ್ನಷ್ಟು ಅಮಾಯಕ ...ಣುಮಕ್ಕಳು ಬಲಿಯಾಗುವುದು ಖಂಡಿತ.

• ಅಜೀಜ್ ಕಿರುಗುಂದ

ದಾವಣಗೆರೆ ಧರ್ಮರೋಗಕ್ಕೆ ಮದ್ದರೆದ ಮುಸ್ಲಿಮರು!

[illegible]



ಡೈರಿ ಹೇಳಿದ ಹುಡುಗಿಯ ಕತೆ

ನನ್ನ ಹೆಸರು ಡೈರಿ ಅಂತ. ಈಗ ನನ್ನ ಮೇಲೆ ಸಂಶೋಧನೆ ಮಾಡ್ತಿರೋ ಈ ಸಂಶೋಧಕಿ ಪ್ರಕಾರ ಮಧ್ಯಮ ವರ್ಗದ ದೊಡ್ಡ ಹೆಂಗಸರು, ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾವಂತರಿಗೆಲ್ಲಾ ನನ್ನ ಪರಿಚಯ ಇದೆಯಂತೆ. ಹಂಗಂತ ನಾನು ಎಲ್ಲರ ಕಣ್ಣಿಗೂ ಕಾಣಿಸೋನಲ್ಲ. ನನ್ನ ಅಗೋಚರಕ್ಕೆ ಈ ಹೆಂಗಸರೇ ಕಾರಣ.

ಕತೆ

• ಡಾ. ವಿಜಯಕುಮಾರ್ ಎಂ. ಬೋರಟ್ಟಿ

I

"ಅಯ್ಯೋ! ಯಾರಾದ್ರು ಕಾಪಾಡಿ. ನನ್ನ ಜೀವಾನ ಉಳಿಸಿ. ಆ ನಾಲ್ಕು ಕಾಲಿನ ಪ್ರಾಣಿ ನನ್ನನ್ನ ತಿನ್ನೊಕ್ಕೆ ಬರ್ತಾ ಇದೆ. ಅಯ್ಯೋ, ನನ್ನವರು ಅನ್ನೋರು ಯಾರೂ ಇಲ್ವೆ! ಎಂಥಾ ನತದೃಷ್ಟ ನಾನು. ನನ್ನನ್ಯಾಕೆ ಆಕೆ ಹುಟ್ಟಿಸಿದ್ಲು ಸುಮ್ನೆ ಒಂದು ಮೂಲೇಲಿ ಬಿದ್ಕೊಂಡಿದ್ದೆ. ಇವಳು ನನ್ನನ್ನು ತನ್ನ ರೂಮಿಗೆ ತಂದು, ನನ್ನನ್ನು ಬಳಸಿಕೊಂಡಿದ್ಯಾಕೆ? ನನ್ನನ್ನು ಸಾಕಿ-ಸಲಹು ಅಂತ ಯಾರಾದ್ರು ಹೇಳಿದ್ರ ಇವಳಿಗೆ? ಸುಮ್ಮನಿರಲಾರದೆ ಮೈಯೆಲ್ಲಾ ಪರಚಿಕೊಂಡ್ರಂತೆ! ಹಂಗಾಯ್ತು ಇವಳ ಕಥೆ. ತನ್ನ ಖಯ್ಯಾಲಿಗಳಿಗೆ ಇವಳು ನನ್ನನ್ನು ಬಳಸಿಕೊಂಡ್ಲು. ಈಗ ನೋಡಿ! ಅವಳು ಏನಾದ್ಲು! ನಂಗೂ ಅವಳದೇ ಗತಿ ಕಾದಿದೆ! ಹುಟ್ಟಿದ ಮೇಲೆ ಸಾಯ್ಲೆ ಬೇಕಲ್ಲ! ಎಲ್ಲ ನನ್ನ ಹಣೆಬರಹ. ಅಲ್ಲಿ ನೋಡಿ ಬರ್ತಾ ಇದೆ. ಬಂತು! ಹತ್ತಿರ ಬಂತು! ಅಯ್ಯೋ! ನಂಗೆ ತಲೆ ತಿರುಗ್ತಾ ಇದೆ. ಇದೇ ನನ್ನ ಕೊನೆ ದಿನ. ಅಯ್ಯೋ! ಬಾಯಿ ಹಾಕ್ತು..." ನಂಗೆ ಪ್ರಜ್ಞೆ ಬಂದಾಗಲೇ ಗೊತ್ತಾಗಿದ್ದು ನಾನಿನ್ನೂ ಜೀವಂತವಾಗಿದ್ದೀನಿ ಅಂತ. ಆ ಪ್ರಾಣಿ ನನ್ನನ್ನು ತಿನ್ನೋ ಮೊದಲೇ ನನ್ನನ್ನು ಮೃದುವಾದ, ಮೆತ್ತಗಿನ ಕೈಗಳು ಎತ್ತಿಕೊಂಡ ನೆನಪು ಅಷ್ಟೆ. ಹೆಂಗುಸಿನ ಕೈ ಇರಬಹುದು!? ಆಮೇಲೆ ಮೂರ್ಛೆ ಹೋದೆ. ಎಲ್ಲಾ ಕತ್ತಲು, ಕತ್ತಲು.

II

ನನ್ನ ಹೆಸರು ಡೈರಿ ಅಂತ. ಈಗ ನನ್ನ ಮೇಲೆ ಸಂಶೋಧನೆ ಮಾಡ್ತಿರೋ ಈ ಸಂಶೋಧಕಿ ಪ್ರಕಾರ ಮಧ್ಯಮ ವರ್ಗದ ದೊಡ್ಡ ಹೆಂಗಸರು, ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾವಂತರಿಗೆಲ್ಲಾ ನನ್ನ ಪರಿಚಯ ಇದೆಯಂತೆ. ಹಂಗಂತ ನಾನು ಎಲ್ಲರ ಕಣ್ಣಿಗೂ ಕಾಣಿಸೋನಲ್ಲ, ನನ್ನ ಅಗೋಚರಕ್ಕೆ ಈ ಹೆಂಗುಸರೇ ಕಾರಣ. ನನ್ನ ಮೇಲೆ ಏನೆಲ್ಲಾ ಬರೀತಾರೆ ಅಂತೀರಾ ಇವರು? ಅದ್ರೂ ನನ್ನನ್ನ ಬಚ್ಚಿಡ್ತಾರೆ. ತಮ್ಮ ಆಸೆ, ಆಕಾಂಕ್ಷೆ, ಸುಖ, ದುಃಖ, ಹರುಷ, ಪ್ರೀತಿ, ಪ್ರೇಮ, ಕಾಮ, ನೋಡಿದ್ದು ಕೇಳಿದ್ದು ಆಡಿದ್ದು ಆಡದೇ ಇದ್ದದ್ದು ನೋಡಬೇಕಾದ್ದು ನೋಡದೇ ಇದ್ದದ್ದನ್ನ, ಎಲ್ಲರ ಹತ್ತಿರ ಹೇಳಿಕೊಳ್ಳೋಕ್ಕೆ ಆಗದ್ದನ್ನು ನನ್ನ ಮೇಲೆ ಗೀಚುತ್ತಾರೆ. ಆದರೆ ನನ್ನ ಈ ಪ್ರಸ್ತುತ ಜನ್ಮ ಆಗಿದ್ದು ಒಂದು ಮಧ್ಯಮ ವರ್ಗದ ಹೆಂಗುಸಿಂದಲ್ಲ. ಒಂದು ಬಡ ಹುಡುಗಿ! ಹುಡುಗಿ ಅಂತ ಹುಬ್ಬೇರಿಸುತ್ತಿದ್ದೀರ?! ಹೌದು ಒಂದು ಹುಡುಗಿ. ಅದು ಕೂಡ ಹನ್ನೆರಡು ವರ್ಷದ ಹುಡುಗಿ. ನನ್ನ ಮೇಲೆ ಗೀಚೋ ಖಯ್ಯಾಲಿ ಹೆಂಗೆ ಬಂತೊ ಇವಳಿಗೆ ಗೊತ್ತಿಲ್ಲ? ನನ್ನನ್ನು ಯಾರಿಗೂ ಗೊತ್ತಾಗದ ಹಾಗೆ ಚೋರ ಬಜಾರ್‌ನ ಕೆಂಪಣ್ಣನ ಅಂಗಡಿಯಿಂದ ಎತ್ತಿಕೊಂಡು ಬಂದು ನನ್ನ ಮೇಲೆ ಏನೇನೋ ಗೀಚೋದಕ್ಕೆ ಶುರು ಮಾಡಿದ್ಲು. ಮೊದಮೊದಲು ನಂಗೆ ಕಿರಿಕಿರಿ ಆಗ್ತಾ ಇತ್ತು, ಇವಳ್ಯಾರಪ್ಪ ನನ್ನ ಮೇಲೆ ಏನೇನೋ ಗೀಚ್ತಾ ಇದ್ದಾಳೆ? ಅದು ಬೇರೆ ಸಣ್ಣ ಹುಡುಗಿ. ತಲೆ ಸರಿ ಇದೆಯಾ ಇವಳಿಗೆ ಅಂತ ಅನಿಸ್ತಿತ್ತು? ಆದರೆ ನನ್ನ ಮೇಲೆ ಅವಳು ಬರೆದದ್ದು ನೀವು ತಿಳ್ಕೊಂಡ್ರೆ ಆಶ್ಚರ್ಯ, ದಿಗ್ಭ್ರಮೆ ಮತ್ತು ಆಘಾತ ಆಗುತ್ತೆ. ಏನು ಬರೆದಿದ್ದಾಳೆ? ಸ್ವಲ್ಪ ತಾಳಿ. ಸ್ಪಷ್ಟವಾಗಿ ಜ್ಞಾಪಿಸಿಕೊಂಡು ಹೇಳ್ತೀನಿ. ಮೂರು ದಿನ ಬಿಸಿಲಲ್ಲಿ ಬಿದ್ದು ಬಹಳ ದಣಿದಿದ್ದೀನಿ ಅಲ್ವ?! ಅದಕ್ಕೆ ಸ್ವಲ್ಪ ಮರೆವು. ಆಂ! ಜ್ಞಾಪಕ ಬಂತು. ಮೊದಲು ಈ ಸಣ್ಣ ಹುಡುಗಿ ಬಗ್ಗೆ ಹೇಳ್ತೀನಿ.

ನನಗೆ ಜೀವ ಕೊಟ್ಟ ಹುಡುಗಿ ಹೆಸರು ಸುನಿತ ಅಂತ. ಅವಳ ಅಪ್ಪ-ಅಮ್ಮ ಇಟ್ಟ ಹೆಸರಲ್ಲ, ಆಕೆ ಬೆಳಿತಿರೋ ಹಾಸ್ಟೆಲ್‌ನವರು ಕೊಟ್ಟ ಹೆಸರು. ಹುಡುಗಿಯರ ಹಾಸ್ಟೆಲ್. ಸರ್ಕಾರದ್ದೋ ಅಥವಾ ಖಾಸಗಿದೋ ಗೊತ್ತಿಲ್ಲ. "ನನಗೆ ಈಗ 12 ವರ್ಷಗಳು..." ಎಂದು ಆಕೆ ಬರೆದ ಕೊಟ್ಟ ಕೊನೆಯ ಸಾಲಿನಿಂದ ಅವಳ ವಯಸ್ಸು ತಿಳಿಯುತ್ತೆ. ಯಾರು ಜನ್ಮ ಕೊಟ್ರೊ, ಏನೋ ಅವಳು ಹಸುಗೂಸಾಗಿದ್ದಾಗ ಯಾರೋ ಒಂದು ರಾತ್ರಿ ಅವಳನ್ನ ಆಶ್ರಮದ ಮುಂದೆ ಇಟ್ಟು ಕಣ್ಮರೆಯಾದರಂತೆ. ಕೆಲವು ವರ್ಷಗಳ ಕಾಲ ಆಶ್ರಮದಲ್ಲಿದ್ದು, ಈಗ ಈ ಹಾಸ್ಟೆಲ್‌ನಲ್ಲಿದ್ದಾಳೆ. ಎಷ್ಟೊಂದು ಮುದ್ದಾಗಿದ್ದಾಳೆ ಅಂತಿರ? ಅವಳು ರಾತ್ರಿ ಹೊತ್ತು ಯಾರಿಗೂ ಗೊತ್ತಾಗದ ಹಾಗೆ ನನ್ನ ಮೇಲೆ ಗೀಚ್ತಾ ಇದ್ರೆ ನಂಗೆ ರೋಮಾಂಚನ ಆಗ್ತಾ ಇತ್ತು, ಅಂತದ್ರಲ್ಲಿ ಆಕೆಯ ಸ್ಕೂಲಿನ ಹುಡುಗ ಇವಳ ಮೇಲೆ ಕಣ್ ಹಾಕದೇ ಇರ್ತಾನ!? ಇವಳ ಮನಸಲ್ಲಿ ಅದೇನು ಆಯ್ತೋ? ಅವನ ಮೇಲೆ ಇವಳ್ಗೂ ಮನಸಾಯ್ತು, ಇದೇ ಮುಂದೆ ಅವಳ ಆಪತ್ತಿಗೆ ಕಾರಣ ಆಗುತ್ತೆ ಅಂತ ತಿಳ್ಕೊಳ್ಳದೇ ಇರೋ ವಯಸ್ಸು ಅವಳ್ದು!

ಸಣ್ಣ ಹುಡುಗಿ ಅಲ್ವ! ತನ್ನ ಪ್ರೀತಿಯ ಬಗ್ಗೆ ಯಾರತ್ರಾನು ಹೇಳ್ಕೊಳಕ್ಕೆ ಆಗದೆ ನನ್ನ ಮೇಲೆ ಮಾತ್ರ ಬರೀತಾ ಇದ್ಲು.

ಏಪ್ರಿಲ್ 11. ಆಯಾ ನಂಗೆ ಹೊಟ್ಟೇಲಿ ಏನೇನೋ ಆಗ್ತಾ ಇದೆ. ಸ್ವಲ್ಪ ಬೆನ್ನು ನೋವು. ಕೆಳಗಡೆ ಹಸಿ, ಹಸಿಯಾಗಿದೆ ಅಂತ ಹೇಳ್ದೆ, ಆದರೆ ಆ ಆಯಾ ನನ್ನ ಮಾತು ಕೇಳಿಸ್ಕೊಳ್ಳಿಲ್ಲ, ಹೋಗಿ ಸ್ನಾನ ಮಾಡು ಅಂತ ನಂಗೆ ಜೋರಾಗಿ ಗದರಿಸಿದಳು. ಆಮೇಲೆ ಇಬ್ಬರು ದೊಡ್ಡ ಹುಡುಗರ ಹತ್ತಿರ "ಅವಳು ದೊಡ್ಡವಳಾಗಿದ್ದಾಳೆ" ಅಂತ ಮಾತನಾಡಿದ್ದನ್ನ ಕೇಳಿಸ್ಕೊಂಡೆ.

ಏಪ್ರಿಲ್ 22. ಇವತ್ತು ಸತೀಶ ಕ್ಲಾಸಲ್ಲಿ ನನ್ನನ್ನೇ ನೋಡ್ತಾ ಇದ್ದ. ನಂಗೆ ಏನೇನೋ ಆಯ್ತು, ನನ್ನ ಫ್ರೆಂಡ್ ಸಾವಿತ್ರಿ ನನ್ನನ್ನು ನೋಡಿ ಕೀಟಲೆ ಮಾಡಿದ್ಲು. ನಾನು ಕೋಪ ಮಾಡ್ಕೊಂಡಿದ್ರಿಂದ ಸುಮ್ಮನಾದಳು.

ಏಪ್ರಿಲ್ 24. ಸತೀಶ ನನ್ನ ಮಾತಾಡ್ಲಿಕ್ಕೆ ಬಂದಿದ್ದ, ನನ್ನ ಹತ್ರ ಬಂದ. ನಂಗೆ ಸಖತ್ ಭಯ. ಈ ಸಾವಿತ್ರಿ ಬೇರೆ ಇಲ್ಲಿ! ನನ್ನ ಹತ್ರಾನೆ ಸಾಯ್ತಿರ್ತಾಳೆ. ದರಿದ್ರ!

ಏಪ್ರಿಲ್ 30. ನಮ್ಮ ಆಶ್ರಮಕ್ಕೆ ಇವತ್ತು ಬೆಳಗ್ಗೆ ಇಬ್ಬರು ದೊಡ್ಡ ಹುಡುಗರು ಬಂದಿದ್ರು. ನಮ್ಮ ಆಯಾ ಹತ್ತಿರ ಏನೇನೋ ಮಾತಾಡ್ತಾ ಇದ್ರು. ಆ ಹುಡುಗರು ನಮ್ಮನ್ನು ನೋಡೊ ಸ್ಟೈಲ್ ಸರಿ ಇಲ್ಲ, ಅವರತ್ರ ಮಾತಾಡ್ತಾ ಇದ್ದಾಗ ನಾವ್ಯಾರು ಹತ್ತಿರ ಇರ್ಬಾರ್ದು ಅಂತ ಆಯಾ ನಮಗೆ ಬೈದಳು.

ಮೇ 5. ಇವತ್ತು ಸತೀಶ ಬಂದು ನನ್ನ ನೋಟ್ಸ್ ಕೇಳ್ದ, ನೋಟ್ಸ್ ಬೇಕು ಅಂತ ನನ್ನನ್ನು ಪಕ್ಕಕ್ಕೆ ಕರೆದ. ನಾನು ಹೆದರಿ ಹೋಗ್ಲಿಲ್ಲ, ಆದರೆ ಅವನ ಜೊತೆ ಮಾತಾಡೋಕೆ ನಂಗೆ ತುಂಬಾ ಇಷ್ಟ. ಟೀಚರ್ ಇದ್ರು, ಅದಕ್ಕೆ ಮಾತಾಡ್ಲಿಲ್ಲ.

ನಂಗೆ ಮೊದಮೊದಲು ಇವಳ್ದು ಹುಚ್ಚು ಮನಸ್ಸು, ಏನು ಗೊತ್ತಾಗೊದಿಲ್ಲ, ಬುದ್ಧಿ ಇಲ್ದೇ ಏನೇನೋ ನನ್ನ ಮೇಲೆ ಗೀಚುತ್ತೆ ಅಂತ ತಿಳ್ಕೊಂಡೆ. ಯಾಕಂದ್ರೆ ಪ್ರೀತಿ, ಪ್ರೇಮ, ಪ್ರಣಯ ಎಲ್ಲಾನು ದೊಡ್ಡವರಾದ ಮೇಲೆ ಮಾಡ್ಬೇಕು ಅಂತ ದೊಡ್ಡವ್ರು ಹೇಳಿದ್ದಾರಲ್ವ?! ಹಂಗಾಗಿ ಈ ಹುಚ್ಚು ಹುಡುಗಿಗೆ ತಲೆ ಕೆಟ್ಟಿದೆ ಅಂತ ಅಂದ್ಕೊಂಡೆ. ಆದ್ರೆ ನನ್ನ ನೋಡಿ! ನಾನು ಕೂಡ ಈಗ ಇವಳ ಬಗ್ಗೆ ತಲೆ ಕೆಡಿಸಿಕೊಂಡಿದ್ದೀನಿ. ಪ್ರೀತಿಗೆ ಗೊತ್ತು, ಗುರಿ, ಕಾಲ, ಧರ್ಮ, ಜಾತಿ ಏನೂ ಇರೊಲ್ಲ ಅಂತಾರಲ್ಲ ಹಂಗೆ! ಪ್ರೀತಿ ಮಾಡೊಕೆ ಮನುಷ್ಯರಾಗಿರಬೇಕು ಅಂತ ಏನು ಇಲ್ಲ ಅಲ್ವ!? ಅವಳು ನನ್ನ ಮೇಲೆ ಪ್ರತಿ ದಿನ ಬರೆಯದೇ ಇದ್ರೆ ನನ್ನ ಜೀವ ತಳಮಳಿಸುತಿತ್ತು, ಅವಳು ತನ್ನ ಮುದ್ದಾದ ಕೈಗಳಿಂದ ನನ್ನ ಮೇಲೆ ಬರೆದಾಗಲೇ ಚೆಂದ, ಸೊಗಸು ಮತ್ತು ರೋಮಾಂಚನ! ಆದ್ರೆ ಇವನ್ಯಾವನೊ ಸತೀಶ ಅಂತೆ! ಬಡ್ಡಿ ಮಗ. ಆಗ್ಲೆ ನನ್ನ ಹುಡುಗಿ ಬಗ್ಗೆ ತಲೆ ಕೆಡಿಸ್ಕೊಂಡವ್ನೆ! ಇರ್ಲಿ ತಡಿ. ನಂಗೆ ಏನು ಮಾಡ್ಬೇಕು ಅಂತ ಗೊತ್ತು!

ನಂಗೇನು ಮಾಡೊಕಾಗುತ್ತೆ, ನಾನೊಬ್ಬ ಬರಿ ಡೈರಿ. ನನ್ನ ಮೇಲೆ ಯಾರಾದ್ರು ಬರೆದಾಗ ಮಾತ್ರ ನಂಗೆ ಜೀವ, ಅರ್ಥ. ಇಲ್ಲಾಂದ್ರೆ ಇಲ್ಲ.

ಮೇ 9. ಹಾಸ್ಟೆಲ್‌ನಲ್ಲಿ ನಮಗೆ ಊಟ ಸರಿಯಾಗಿ ಹಾಕ್ತಾ ಇಲ್ಲ; ಆ ಆಯಾ ನಮಗೆ ಹೊಡಿತಾಳೆ ಅಂತ ಮತ್ತು ಇಬ್ಬರು ಹುಡುಗರು ಆಗಾಗ ಬಂದು ನಮ್ಮ ಎದೆ ಮೇಲೆ ಕೈಹಾಕ್ತಾರೆ ಅಂತ ಇವತ್ತು ನಾನು ಸತೀಶನಿಗೆ ಹೇಳ್ದೆ. ಅವನು ಇದನ್ನ ನಮ್ಮ ಹೆಡ್ ಮಾಸ್ಟರ್‌ಗೆ ಹೇಳ್ಬಿಟ್ಟ.

ಮೇ. 13. ಸತೀಶ ಮೂರು ದಿನದಿಂದ ಕ್ಲಾಸಿಗೆ ಬಂದಿಲ್ಲ. ಏನಾಯ್ತೊ? ಅವನನ್ನ ಹುಡ್ಕೊಂಡು ಅವನ ಅಪ್ಪ ಅಮ್ಮ ನಮ್ ಸ್ಕೂಲಿಗೆ ಬಂದಿದ್ರು. ಪೊಲೀಸೋರು ಕೂಡ ಬಂದಿದ್ರು. ಕಿಡ್ನ್ಯಾಪು-ಗಿಡ್ನ್ಯಾಪು ಅಂತಿದ್ರು.

ಅರೆ ಇದೇನಿದು! ನನ್ನ ಮೇಲೆ ಬಿಸಿ ಹನಿಗಳು. ಅಯ್ಯೋ! ನನ್ನ ಹುಡುಗಿ ಅಳ್ತಾ ಇದ್ದಾಳೆ. ಪಾಪ! ಸತೀಶ ಮೂರು ದಿನದಿಂದ ಕಾಣಿಸ್ತಿಲ್ವಲ್ಲ. ಅದಕ್ಕೆ ಇರಬೇಕು.

III

ಅರೆಮಂಪರಿನಲ್ಲಿ ಕಣ್ಣು ಬಿಟ್ಟಾಗ ನಾನು ತಿಪ್ಪೆಗುಂಡಿಯ ಪಕ್ಕದಲ್ಲಿ ಬಿದ್ದಿರೋದು ಗೊತ್ತಾಯ್ತು ಬಹಳ ಹೊತ್ತಿನವರೆಗೂ ಹಾಗೆ ಬಿದ್ಕೊಂಡಿದ್ದೆ. ಸ್ವಲ್ಪ ಹೊತ್ತು ಆದ ಮೇಲೆ ನನ್ನ ಹತ್ತಿರ ಒಂದಿಬ್ಬರು ಮಾತನಾಡುತ್ತಿರೋದು ಕೇಳಿ ನಂಗೆ ಶಾಕ್ ಆಯಿತು. "ಅದು ಶುದ್ಧ ಸುಳ್ಳು; ನಿಜ ಅಲ್ಲ, ನನ್ನ ಹುಡುಗಿ ಆತ್ಮಹತ್ಯೆ ಮಾಡ್ಕೊಂಡಿಲ್ಲ, ನಿಮ್ಮ ನ್ಯೂಸ್ ಪೇಪರ್‌ನಲ್ಲಿ ಬರೆದಿರೋದು ಅಪ್ಪಟ ಸುಳ್ಳು. ನನ್ನನ್ನು ಓದಿ ನಿಜ ಏನು ಅಂತ ಗೊತ್ತಾಗುತ್ತೆ" ಎಂದು ಜೋರು ದನಿಯಲ್ಲಿ ಅವರಿಗೆ ಹೇಳೋಣ ಅಂತ ಮನಸ್ಸು ಮಾಡಿದೆ. ಆದರೆ ಏನು ಮಾಡೋದು? ನಾನು ದುರಾದೃಷ್ಟದವನು. ಬಳಕೆಗೆ ಮಾತ್ರ ಇರೋನು. ಮಾತಾಡೊಕೆ ಅಲ್ಲ, ಬಹಳ ಹೊತ್ತಿನವರೆಗೆ ಹಾಗೆ ಬಿದ್ದುಕೊಂಡಿದ್ದೆ. ಏನೋ ಶಬ್ದ ಆಯ್ತು, ಕಣ್ಣು ತೆರೆದು ನೋಡಿದೆ. ಅಯ್ಯೋ! ನಾಲ್ಕು ಕಾಲಿನ ಹಸು ನನ್ನನ್ನು ತಿನ್ನೋಕ್ಕೆ ಬರ್ತಾ ಇದೆ. ಅದಕ್ಕೆ ನನ್ನಂತವರನ್ನ ಕಂಡರೆ ಬಲು ಪ್ರೀತಿ ಅಂತೆ. ಆದರೆ ಅದರ ಪ್ರೀತಿಗೆ ನಾನು ಬಲಿ ಆಗ್ಬೇಕೆ? ನನ್ನ ಹುಡುಗಿಯ ಸಾವಿನ ಸತ್ಯ ಹೇಳೋಕೆ ಮೊದ್ಲೆ? ನನ್ನ ಕತೆ ಮುಗಿತು ಅಂತ ತಿಳ್ಕೊಂಡೆ. ಆ ಸಮಯದಲ್ಲಿ ನನ್ನನ್ನು ಎತ್ತಿಕೊಂಡು ಹೋಗಿದ್ದೆ ಈ ಹೆಂಗುಸು. ಈಗ ಇವಳು ನನ್ನ ಮೇಲೆ ಸಂಶೋಧನೆ ಮಾಡ್ತಾ ಇದ್ದಾಳೆ.

ಡೆಕ್ಕನ್-ಹೆರಾಲ್ಡ್‌ನಲ್ಲಿ **A thirteen year old teenager committed suicide when her diary entries of love were read by her guardian** ಅಂತ ಓದಿದ ಮೇಲೆ ಕುತೂಹಲದಿಂದ ನನ್ನ ಹುಡುಗಿ ಇದ್ದ ಆಶ್ರಮಕ್ಕೆ ಈ ಸಂಶೋಧಕಿ ಬಂದ್ಳಂತೆ. ನನ್ನ ಹುಡುಗಿಯ ಬಗ್ಗೆ ಆಯಾ ಹತ್ರ ಮಾತಾಡಿ, ಡೈರಿಯ ಬಗ್ಗೆ ಏನಾದ್ರು ತಿಳ್ಕೊಬಹುದು ಅಂತ ಬಂದಾಗ ಆ ಆಯಾ ಯಾವ ರೀತಿಯಲ್ಲೂ ಸಹಾಯ ಮಾಡದೆ ಇವಳನ್ನ ವಾಪಸ್ ಕಳಿಸಿದಳಂತೆ. ಬಂದ ದಾರಿಗೆ ಸುಂಕವಿಲ್ಲ ಅಂತ ಹೊರ ಹೋಗುವಾಗ ಇವಳಿಗೆ ನಾನು ತಿಪ್ಪೆ ಗುಂಡಿಯ ಹತ್ತಿರ ಕಾಣಿಸ್ಕೊಂಡೆ. ಮುಂದೇನಾಯ್ತು ಅನ್ನೋದು ನಿಮಗೆ ಗೊತ್ತು.

ಈಕೆ ದೊಡ್ಡ ಹೆಂಗುಸು. ನೋಡೊಕೆ ಚೆನ್ನಾಗಿದ್ದಾಳೆ. ನನ್ನ ಮೇಲೆ ಇವಳೂ ಕೂಡ ಏನೇನೋ ಗೀಚಿದ್ದಾಳೆ, ಅರ್ಥ ಆಗ್ತಾ ಇಲ್ಲ, ಇಂಗ್ಲಿಷ್‌ನಲ್ಲಿದೆ. ನಾನು ಕನ್ನಡದ ಡೈರಿಯಲ್ವ? ಇಂಗ್ಲಿಷ್ ಅಷ್ಟೊಂದು ಚೆನ್ನಾಗಿ ಬರೊಲ್ಲ, ಪೂರ್ತಿ ಕಲೀಬೇಕು ಅಂತ ಬಹಳ ಆಸೆ ಆಗಿದೆ. ಆದ್ರೂ ಇವಳ ದೆಸೆಯಿಂದ ಅಲ್ಪ ಸ್ವಲ್ಪ ಕಲ್ತಿದ್ದೀನಿ. ಅವಳು ನನ್ನ ಮೇಲೆ ಇಂಗ್ಲಿಷ್‌ನಲ್ಲಿ ಬರ್ದಿರೋದು ನೋಡಿದ್ರೆ ನನ್ನ ಹುಡುಗಿಯ ಬಗ್ಗೆ ನಿಜ ತಿಳ್ಕೊಳ್ತಾಳೆ ಅಂತ ಭರವಸೆ ಇದೆ ನಂಗೆ. **Her experiences in a diary are a matter of many events, each with its histories; I don't want to dismiss her experiences as spontaneous and insignificant scraps of composition** ಅಂತ ಬರ್ದಿದ್ದಾಳೆ ನನ್ನ ಮೇಲೆ. ಈಕೆ ಬಾಳ ಓದ್ಕೊಂಡಿರಬೇಕು. ತಿಪ್ಪೆಗುಂಡಿಯಲ್ಲಿ ಬಿದ್ದಿದ್ದ ನನ್ನ ಇಷ್ಟೊಂದು ಗಂಭೀರವಾಗಿ ಅಭ್ಯಾಸ ಮಾಡ್ತಾ ಇದ್ದಾಳಂದ್ರೆ ನನ್ನ ಹುಡುಗಿಯ ಸಾವಿನ ಬಗ್ಗೆ ನಿಜ ತಿಳ್ಕೊಂಡೆ ತಿಳ್ಕೊಳ್ತಾಳೆ. ಅವಳ ಸಾವು ಸಹಜ ಅಲ್ಲ ಅಂತ ಗೊತ್ತಾಗುತ್ತೆ. ಅಯ್ಯೋ! ಇದೇನಿದು ನನ್ನನ್ನು ಮುಚ್ಚಿಡುತ್ತಿದ್ದಾಳೆ. ನನ್ನನ್ನು ಓದಿ ಮುಗಿಸಿದಳು ಅನಿಸುತ್ತೆ. ಇಲ್ಲ, ಇಲ್ಲ, ಇನ್ನೂ ಎರಡು ಪುಟಗಳು ಇವೆ. ಅವಳಿಗೆ ನಿದ್ದೆ ಬಂದಿದೆ ಅನಿಸುತ್ತೆ, ಅದಕ್ಕೆ ನನ್ನನ್ನು ಈಗ ಮುಚ್ಚಿಟ್ಲು. ನನ್ನನ್ನು ನೀನು ಇನ್ನೂ ಪೂರ್ತಿ ಓದಿಲ್ಲ ಅಂತ ಕಿರುಚಿ ಹೇಳೊ ಮನಸ್ಸು. ಆದರೆ ಏನು ಮಾಡೋದು? ಸಾಧ್ಯವಿಲ್ಲ. ನನ್ನ ಮಾತು ಅವಳಿಗೆ ಕೇಳಿಸೊಲ್ಲ, ನನ್ನನ್ನು ಓದಿದಾಗಲೇ ಅಲ್ವ ನನಗೆ ಅರ್ಥ ಬರೋದು. ನನ್ನ ಪುಟ ಸಂಖ್ಯೆ 102ನ್ನು ಆಕೆ ಓದಿದರೆ ನನ್ನ ಹುಡುಗಿಯ ಬಗ್ಗೆ ಇರೊ ಸತ್ಯ ಏನು ಅಂತ ಗೊತ್ತಾಗುತ್ತೆ

ಮೇ 20. ನಿನ್ನೆ ನಂಗೆ ಆಯಾ ಚೆನ್ನಾಗಿ ಹೊಡೆದ್ರು. ಹೊಡಿಬೇಕಾದ್ರೆ ಆ ದೊಡ್ಡ ಹುಡುಗ್ರು ಕೂಡ ಇದ್ರು. ಇವತ್ತು ನನ್ನನ್ನು ಒಂದು ರೂಮಿನಲ್ಲಿ ಕೂಡಿ ಹಾಕಿದ್ರು. ಆಯಾ ಹೊರಗೆ ಇದ್ಲು, ಆ ದೊಡ್ಡ ಹುಡುಗ್ರು ಬಂದು ನಮ್ಮ ಬಾಯಿಗೆ ಬಟ್ಟೆ ತುರುಕಿದರು. ಒಬ್ಬ ನನ್ನ ಎದೆಯ ಮೇಲೆ ಕೈಯಿಟ್ಟು ಮೆಲ್ಲಗೆ ಸವರಿದ. ಹಿಚುಕಿದ. ಮತ್ತೊಬ್ಬ ನನ್ನ ತುಟಿಯನ್ನು ಅಮುಕಿದ. ತನ್ನ ತುಟಿಯನ್ನು ನನ್ನ ತುಟಿಯ ಮೇಲೆ ಆಡಿಸಿದ. ನನ್ನನ್ನು ಬೆತ್ತಲೆ ಮಾಡಿ ಫೋಟೊ ತೆಗೆದ್ರು. ಒಬ್ಬ ನನ್ನ ಮೇಲೆ ಮಲಗಿಕೊಂಡ. ಅವರು ಹೋದ ಮೇಲೆ ಆಯಾ ನನ್ನನ್ನು ನನ್ನ ರೂಮಿನಲ್ಲಿ ಇರಿಸಿ ಹೊರಗಿನಿಂದ ಬೀಗ ಹಾಕಿದ್ಲು. ನಂಗೆ ಭಯ ಆಗ್ತಾ ಇದೆ. ಸತೀಶ್ ಕಾಣಿಸ್ತಾ ಇಲ್ಲ. ನನ್ನನ್ನು ಕೂಡ ಅವನ ಹಾಗೆ ಕಾಣಿಸ್ದೇ ಇರೊ ಹಂಗೆ ಮಾಡ್ತಾರ ಅಂತ ನಂಗೆ ಭಯ. ಮೈಯೆಲ್ಲಾ ನೋವು. ಇವತ್ತು ನನ್ನ ಬರ್ತ್‌ಡೆ. ನನಗೆ ಈಗ 12 ವರ್ಷಗಳು...

ಹೀಗೆ ಬರೆಯೋ ಮೊದಲೆ ಅವಳ ಲೇಖನಿ ಕೆಳಗೆ ಬಿದ್ದ ಶಬ್ದ ಕೇಳಿಸ್ತು. ಅದ್ಯಾಕೆ ಬಿತ್ತು ಅಂತ ತಿಳ್ಕೊಳ್ಳೊ ಮೊದಲೇ ನನ್ನ ಹುಡುಗಿ ಕೂಡ ದೊಪ್ಪಂತ ಕೆಳಗೆ ಬಿದ್ಲು. ●

ಕರ್ನಾಟಕದ ಜನಪದ ಆಚರಣೆಗಳ ಒಂದು ಅಪಕ್ವ ಕೃತಿ



ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪ್ರಸಾರಾಂಗ ವ ಹೊರಬಂದ ಕೃತಿ 'ಕರ್ನಾಟಕ ಜನಪದ ಆಚರ ಳು'. ಇದನ್ನು ಕನ್ನಡ ವಿವಿಯ ಜಾನಪದ ವಿಭಾಗದ ಧ್ಯಾಪಕರಾದ ಡಾ.ಸ.ಚಿ.ರಮೇಶ್ ಬರೆದಿದ್ದಾರೆ. ಈ ಮಲ್ಲಿ ಕರ್ನಾಟಕದ ಬೇರೆ ಬೇರೆ ಭಾಗದ ಎರಡು ಮು ಆಚರಣೆಗಳ ಪರಿಚಯವಿದೆ. ಈ ಆಚರಣೆಗಳನ್ನು ದಂತೆ ಕರ್ನಾಟಕದ ಜನಪದ ಆಚರಣ ಲೋಕದ ಕ್ಷತೆಗಳು ಕಾಣುತ್ತವೆ. ಜಾನಪದ ಆಚರಣೆಗಳ ಥಮಿಕ ಮಾಹಿತಿಗಾಗಿ ಇದೊಂದು ಉಪಯುಕ್ತ . ಜಾನಪದ ಕ್ಷೇತ್ರಕ್ಕೆ ಪ್ರವೇಶಿಸುವ ವಿದ್ಯಾರ್ಥಿಗಳು ಹಿತಿಯ ಕಾರಣಕ್ಕೆ ಈ ಪುಸ್ತಕವನ್ನು ನೋಡಬಹುದು.

ಡಾ.ಸ.ಚಿ ರಮೇಶ್ ಅವರು ಜಾನಪದ ಕ್ಷೇತ್ರದಲ್ಲಿ ಹಲವು ಕೃತಿಗಳನ್ನು ಚಿಸಿದ್ದಾರೆ. ಬುರ್ರಕಥಾ ಈರಮ್ಮ ಹಾಡಿದ ನ್ಯಾಸಿ ಚೆನ್ನಮ್ಮನ ಕಾವ್ಯ ರ್ವಾಡಿ ಶೇಟ್‌ನಂತಹ ಜನಪದ ಮಹಾಕಾವ್ಯಗಳನ್ನು ಸಂಗ್ರಹಿಸಿದ್ದಾರೆ. ವು ಜಾನಪದ ಕೃತಿಗಳನ್ನು ಸಂಪಾದಿಸಿದ್ದಾರೆ. ಕರ್ನಾಟಕ ಜಾನಪದ ಕೆಯ ಸಂಪಾದಕರಾಗಿಯೂ, ಜಾನಪದ ವಿಭಾಗದ ಮುಖ್ಯಸ್ಥರಾಗಿಯೂ ಪದಕ್ಕೆ ಪೂರಕವಾದ ಸಂಗತಿಗಳಲ್ಲಿ ದುಡಿದಿದ್ದಾರೆ. ಇನ್ನೂ ಬಿಡುಗಡೆ ಬೇಕಿರುವ ದಕ್ಷಿಣ ಭಾರತೀಯ ಜಾನಪದ ಕೋಶದ ಸಂಪಾದಕರಾಗಿಯೂ ಸ ನಿರ್ವಹಿಸಿದ್ದಾರೆ. ಡಾ.ಸ.ಚಿ.ರಮೇಶ್ ಅವರು ಈ ಎಲ್ಲ ಕೆಲಸದ ಲಕ ಕರ್ನಾಟಕದ ಜಾನಪದ ಕ್ಷೇತ್ರಕ್ಕೆ ತಮ್ಮ ಕೃತಿಗಳನ್ನು ಸೇರ್ಪಡೆ ಸಿದ್ದಾರೆ. ಹಾಗಾಗಿ ಅವರ ಶ್ರಮವನ್ನು ವಿಸಬೇಕು. ಆದರೆ ಈ ಎಲ್ಲಾ ಕೃತಿಗಳ ಲಕ ಅವರು ಹೊಮ್ಮಿಸುವ ತಿಳಿ ಕೆಯಲ್ಲಿ ಮಾತ್ರ ಜಾನಪದ ಅಧ್ಯಯನ ನ್ನು ಮುಂದೆ ಕರೆದೊಯ್ಯುವ ಒಳ ಟಗಳಿಲ್ಲ. ಕೆಲವೊಮ್ಮೆ ಹಳಹಳಿಕೆ ದಲೋ, ಹಳೆಯದ್ದೆಲ್ಲಾ ಬಂಗಾರ ನ್ನುವ ತಿಳಿವಳಿಕೆಯಿಂದಲೋ, ಜಾನಪದವನ್ನು ರಕ್ಷಿಸುವ ವಕ್ತಾರಿಕೆಯಿಂದ ತನಾಡುತ್ತಾರೆ. ಈ ಕಾರಣಕ್ಕೆ ಅವರ ಚಿಂತನೆ ಸವೆದ ದಾರಿಯಲ್ಲೇ ಣಿಸುತ್ತಿದೆ.

ಅಂತಹ ಸವೆದ ದಾರಿಯಲ್ಲಿ ಮುಂದುವರಿದ ಕೃತಿ 'ಕರ್ನಾಟಕ ಪದ ಆಚರಣೆಗಳು'. ಕರ್ನಾಟಕ ಜಾನಪದ ಆಚರಣೆಗಳ ಪರಿಚಯ ಷಣೆ ಕುರಿತಂತೆ ಕನ್ನಡದಲ್ಲಿ ಹೆಚ್ಚು ಕೆಲಸ ನಡೆದಿದೆ. ಕಂಬಾರರು ಪಾದಿಸಿದ ಜಾನಪದ ವಿಶ್ವಕೋಶದಿಂದ ಮೈಸೂರು ವಿವಿ ಜಾನಪದ ವಿಶ್ವಕೋಶ, ಜನಸಮುದಾಯಗಳ ಅಧ್ಯಯನ ಮುಂತಾದ ಅನೇಕ ಕೃತಿಗಳಲ್ಲಿ ಜನಪದ ಆಚರಣೆಯ ಮಾಹಿತಿ ವಿಶ್ಲೇಷಣೆ ಇದೆ. ಈಗ ಮತ್ತದೇ ಆಚರಣೆಗಳ ಮಾಹಿತಿ ಸಂಗ್ರಹಿಸುವವರು ಈ ತನಕ ಅನುಸರಿಸಿದ ಮಾರ್ಗವನ್ನು ಬಿಟ್ಟುಕೊಟ್ಟು ಹೊಸ ಮಾರ್ಗವನ್ನು ಅನುಸರಿಸಬೇಕು. ಆಚರಣೆಗಳನ್ನು ಜ್ಞಾನದ ನಿಧಿಗಳು, ಸಾಮರಸ್ಯದ ಬಿಂದುಗಳು ಎನ್ನುವ ದುಂಡು ಹೇಳಿಕೆಗಳನ್ನು ಇನ್ನಾದರೂ ಮೀರಬೇಕು. ಆದರೆ ಸ.ಚಿ ರಮೇಶ್ ಅವರು ಅದೇ ಹಳೇ ಮಾರ್ಗ, ಹಳೆಯ ಧೋರಣೆಯಲ್ಲಿ ಮಾಹಿತಿಯನ್ನು ಕಲೆಹಾಕಿದ್ದಾರೆ.

ಈ ಕೃತಿಯ ಮೊದಲ ಮಾತಿನಲ್ಲಿ ಇಲ್ಲಿನ ಮಾಹಿತಿಯನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿರುವುದಾಗಿ ಹೇಳುತ್ತಾರೆ. ಆದರೆ ಕ್ಷೇತ್ರ ಕಾರ್ಯದ ಸುಳಿವು ಈ ಕೃತಿ ಓದುವಾಗ ಅಷ್ಟಾಗಿ ದೊರೆಯುವುದಿಲ್ಲ. ಇಲ್ಲಿನ ಆಚರಣೆಗಳಿಗೆ ಛಾಯಾಚಿತ್ರಗಳಿರದೆ, ಲೇಖಕರು ರೇಖಾಚಿತ್ರಗಳಿಗೆ ಮೊರೆ ಹೋದದ್ದು ಇದನ್ನು ಸಾಬೀತುಪಡಿಸುತ್ತದೆ. ಈಗಾಗಲೇ ಸಂಗ್ರಹಿತ ಮಾಹಿತಿಯನ್ನು ಆಧರಿಸಿ, ಆ ಮಾಹಿತಿಯನ್ನು ಚುಟುಕಾಗಿಸುವ ಕೆಲಸ ಮಾಡಿದ್ದಾರೆ. ಇಲ್ಲಿನ ಬರಹಗಳನ್ನು ಓದಿದರೆ, ಬಹುಪಾಲು ಬರಹಗಳು ಪತ್ರಿಕೆಯ ಬರಹಗಳನ್ನಾಧರಿಸಿದಂತೆ ಕಾಣುತ್ತದೆ. ಹೀಗೆ ಪತ್ರಿಕೆಗಳ ಮಾಹಿತಿಯನ್ನು ಒಪ್ಪವಾಗಿ ಕಲೆಹಾಕಿ ಪುಸ್ತಕ ಮಾಡುವುದು ವಿಶ್ವವಿದ್ಯಾಲಯದ ಅಧ್ಯಾಪಕರ ಕೆಲಸವೆ? ಎನ್ನುವ ಪ್ರಶ್ನೆಯೊಂದು ಎದುರಾಗುತ್ತದೆ. ಸಂಶೋಧನಾ ವಿದ್ಯಾರ್ಥಿಗಳಿಗೆ ಇಂತಹ ಕೆಲಸವನ್ನು ವಹಿಸಿದ್ದರೆ ಅವರು ಇದಕ್ಕಿಂತ ಚೆನ್ನಾಗಿ ನಿರ್ವಹಿಸುತ್ತಿದ್ದರು.

ಕೆಲವು ಜನಪದ ಆಚರಣೆಗಳು ಕೆಳ ಸಮುದಾಯಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಮೇಲ್ವರ್ಗದ ಹಿತಾಸಕ್ತಿಯಿಂದ ರೂಪುಗೊಂಡದ್ದಿದೆ. ಇನ್ನು ಜಾತಿ ಶ್ರೇಣೀಕರಣವನ್ನು ಜೀವಂತವಾಗಿಡುವ ಕಟ್ಟಳೆಯನ್ನು ಅವುಗಳ ಆಂತರ್ಯದಲ್ಲೇ ಅಡಗಿಸಿಕೊಂಡ ಆಚರಣೆಗಳಿವೆ. ಪುರುಷ ಪ್ರಧಾನ ಅಹಮಿಕೆಯನ್ನು ಮೆರೆಸಿ ಹೆಣ್ಣನ್ನು ದಮನಗೊಳಿಸುವ ನೆಲೆಯ ಆಚರಣೆಗಳೂ ಇವೆ. ಆದರೆ ಇಲ್ಲಿನ ಲೇಖಕರಿಗೆ ಈ ಯಾವ ಅನುಮಾನಗಳೂ ಕಾಡಿದಂತಿಲ್ಲ. ಅವರಿನ್ನು ಜನಪದ ಆಚರಣೆಗಳೆಲ್ಲವನ್ನು ಸಾಮರಸ್ಯದ ಜೀವಸೆಲೆಗಳೆಂದು ಬೀಸಾಗಿ ಹೇಳುವ ಹಂತದಿಂದ ಮುಂಚಲಿಸಿಲ್ಲ. ಕರ್ನಾಟಕ ಹಲವು ಧರ್ಮಗಳ ನೆಲೆ. ಆದರೆ ಇಲ್ಲಿ ಹಿಂದೂ ಧರ್ಮವನ್ನು ಹೊರತುಪಡಿಸಿದ ಅನ್ಯಧರ್ಮೀಯ ಆಚರಣೆಗಳು ಬೆರಳೆಣಿಕೆಯಷ್ಟಿವೆ. ಹೈದರಾಬಾದ ಕರ್ನಾಟಕದಲ್ಲಿ ಬಹುದೊಡ್ಡ ಆಚರಣೆಯಾದ ಮೊಹರಂ ಹಬ್ಬದ ಭಿನ್ನ ಆಚರಣೆಗಳು ಇಲ್ಲಿ ದಾಖಲಾಗಿಲ್ಲ. ಬೌದ್ಧ ಜೈನ, ಸಿಖ್, ಕ್ರೈಸ್ತ ಮುಂತಾದ ಧರ್ಮಗಳ ಆಚರಣೆಗಳನ್ನು ಗಮನಿಸಲು ಸಾಧ್ಯವಾಗಿಲ್ಲ. ವಿಶ್ವವಿದ್ಯಾಲಯದ ಬುಡಕ್ಕೆ ಹತ್ತಿಕೊಂಡಿರುವ ಕಮಲಾಪುರದ ತಮಿಳರ ಆಚರಣೆಗಳನ್ನು ಗುರುತಿಸಲು ಸಾಧ್ಯವಾಗಿಲ್ಲ. ಹಾಗೆ ನೋಡಿದರೆ ಈ ಕೃತಿಯನ್ನು 'ಕರ್ನಾಟಕದ ಜನಪದ ಆಚರಣೆಗಳು' ಎಂದು ಕರೆಯುವುದೂ ಕಷ್ಟವಾಗುತ್ತದೆ. ಹೀಗೆ ಹಲವು ಗಂಭೀರ ಮಿತಿಗಳು ಈ ಕೃತಿಗಿವೆ. ಹಾಗಾಗಿ ಕರ್ನಾಟಕದ ಜನಪದ ಆಚರಣೆಗಳ ಈ ಕೃತಿ ಪುನರಾವರ್ತನೆಯ ಒಂದು ಸವಕಲು ಕೆಲಸವಾಗಿದೆ.

ಪುಸ್ತಕ ವಿಮರ್ಶೆ

• ಡಾ. ಅರುಣ್ ಜೋಳದಕೂಡ್ಲಿಗಿ

ಕುವೆಂಪು ಅವರ ಮೂಲಕ ಶಂಬೂಕನನ್ನು ನೋಡಬೇಕು



ಡಾ. ರಾಜಪ್ಪ ದಳವಾಯಿಯವರು 'ರಂಗಭೂಮಿ: ಸಮಕಾಲೀನ ಸ್ಪಂದನ' ಎಂಬ ತಮ್ಮ ಲೇಖನದಲ್ಲಿ "ಹೆಗ್ಗೋಡಿನಲ್ಲಿ ನಾಟಕದ ಬದಲಿಗೆ ಮಡೆಸ್ನಾನದ ಅನಿಷ್ಟ ಆಚರಣೆಯ ಸಮರ್ಥನೆ ನಡೆದಿದೆ' ಎಂದಿರುವುದು ಕೆಲವರಿಗೆ ಬ್ರಾಹ್ಮಣ ವಿರೋಧಿ ಧ್ವನಿಯಾಗಿ ಗೋಚರಿಸಿಬಿಟ್ಟಿದೆ.

ಕೆ. ಫಣಿರಾಜ್ ಮತ್ತು ಜಿ. ರಾಜಶೇಖರ್ ಅವರ ಜಂಟಿ ಲೇಖನದಲ್ಲಿ "ಪ್ರಜಾಪ್ರಭುತ್ವದ ಹಲವು ಸಂಸ್ಥೆಗಳಿಗಿಂತ ಹೆಚ್ಚು ಮುಕ್ತವಾಗಿರುವ ಸಂಸ್ಥೆ" ಎಂದಿದ್ದಾರೆ. ಹಾಗಿದ್ದಲ್ಲಿ ಇವರು ಹೇಳುವಂತೆ 60 ವರ್ಷಗಳ ಚರಿತ್ರೆ ಹೊಂದಿರುವ ಸಂಸ್ಥೆಯು ಎಷ್ಟು ವರ್ಷಗಳಿಂದ, ಎಲ್ಲೆಲ್ಲಿ -ಎಷ್ಟೆಷ್ಟು ಫಂಡು ತೆಗೆದುಕೊಳ್ಳುತ್ತದೆ ಮತ್ತು ನೀನಾಸಂ ತಂಡವು ತಿರುಗಾಟಕ್ಕೆ ಹೊರಟಾಗ ಒಂದು ಪ್ರದರ್ಶನಕ್ಕೆ ತೆಗೆದುಕೊಳ್ಳುವ ಸಂಭಾವನೆ ಎಷ್ಟು ಎನ್ನುವ ಲೆಕ್ಕವನ್ನೂ ಕೊಡಬೇಕಲ್ಲವೇ?

ನೀನಾಸಂ ತಿರುಗಾಟಕ್ಕೆ ನಾಟಕಗಳನ್ನು ಆಯ್ಕೆ ಮಾಡುವುದಕ್ಕೆ ಒಂದು ಆಕೃತಿಯನ್ನು ಇಟ್ಟುಕೊಂಡಿರುವುದರ ಬಗ್ಗೆ ಮಾತನಾಡುತ್ತಾರೆ. ಆ ಮೂರು ಬಗೆಯ ಮಿತಿಯಾಚೆಗಿರುವ ನಾಟಕ ಪ್ರಕಾರ ಯಾವುದು ಅನ್ನುವುದನ್ನು ಆ ಸಂಸ್ಥೆಯೇ ಹೇಳಬೇಕು. ಅಕ್ಷರ ಅವರಿಗಾಗಲಿ, ನೀನಾಸಂ ಸಂಸ್ಥೆಗಾಗಲಿ ಯಾವುದೇ ಜಾತಿಯ ಹಂಗಿಲ್ಲ ಎನ್ನುವುದನ್ನು ಅಭಿನಂದಿಸೋಣ. ಆದರೆ ಮಡೆಸ್ನಾನದಂತಹ ಹೊಲಸು ಆಚರಣೆಯನ್ನು ಸಹಜವೆಂದು ಹೇಳಿರುವ ಅಕ್ಷರ ಅವರ ಮನಸ್ಥಿತಿಗೆ ಏನನ್ನಬೇಕು? ಆಹಾರ, ಗಾಳಿ, ನೀರು, ನಿದ್ರೆ, ಸೆಕ್ಸಿನಂತೆ ಮನುಷ್ಯನಿಗೆ ಮೌಢ್ಯವೂ ಸಹಜವೇನು?

ನೀನಾಸಂ ಸಂಸ್ಥೆಯ ನಾಟಕಗಳಿಗೂ, ಅಕ್ಷರ ಅವರಿಗೂ ಸಂಬಂಧವೇ ಇಲ್ಲವೆನ್ನುವವರು ಒಂದು ಮಾತನ್ನು ಗಮನಿಸಬೇಕು. ಅಕ್ಷರ ಅವರ ಐಡೆಂಟಿಟಿ ಇರುವುದು ಅವರ ಚಿಂತನಾ ಕ್ರಮದಿಂದೇನೂ ಅಲ್ಲ. ಹೆಗ್ಗೋಡೆಂಬ ಹಳ್ಳಿಯನ್ನು, ಅಕ್ಷರ ಅವರನ್ನು ನೋಡುವುದು ನೀನಾಸಂ ಸಂಸ್ಥೆಯ ಮೂಲಕವೇ! ಅಲ್ಲಿ ಯಾವ ನಿರ್ದೇಶಕ ನಾಟಕ ಆಡಿಸಿದರೂ 'ನೀನಾಸಂ ನಾಟಕ' ಎಂದು ಜನ ಗುರುತಿಸುತ್ತಾರೆಯೇ ಹೊರತು ನಿರ್ದೇಶಕರ ಹೆಸರ ಮೇಲಲ್ಲ.

ಇನ್ನು ನೀನಾಸಂ ಸಂಸ್ಥೆಯಲ್ಲಿ ನಿರ್ದೇಶಕರಿಗಿರುವ ಸ್ವಾತಂತ್ರ್ಯವನ್ನು ಅಭಿನಂದಿಸೋಣ. (ಯಾವುದೇ ತಂಡದಲ್ಲಿ ಯಾವುದೇ ನಿರ್ದೇಶಕ ನಾಟಕ ಆಡಿಸುವಾಗ ಹೆಚ್ಚೂಕಡಿಮೆ ಎಲ್ಲಾ ಹಂತದಲ್ಲೂ ಈ ಸ್ವಾತಂತ್ರ್ಯ ಇದ್ದೇ ಇರುತ್ತದೆ) ಆದರೆ ಯಾವುದೇ ಒಬ್ಬ ನಿರ್ದೇಶಕ ಪುರೋಹಿತಶಾಹಿ ಮೌಲ್ಯವನ್ನು ಎತ್ತಿ ಹಿಡಿಯುವಂತಹ ನಾಟಕಗಳನ್ನು ಆಡಿಸಿದರೆ ಆಗಲೂ ಸುಮ್ಮನಿದ್ದು ನಮಗೆ ಸಂಬಂಧಿಸಿದ್ದಲ್ಲವೆಂದು ಹೇಳುವಿರೇನು?

ನೀನಾಸಂ ಸಂಸ್ಥೆಯ 'ಶೂದ್ರ ತಪಸ್ವಿ' ನಾಟಕ ಪ್ರಯೋಗವನ್ನು ಕುರಿತು ಮಾತನಾಡಿರುವ ರಘುನಂದರವರು "ಜನಿವಾರದ ಪ್ರಧಾನದ ಪ್ರಕ್ರಿಯೆಯನ್ನು ಒಳಗೊಂಡಂತೆ ಅದರ ಪ್ರತಿಮಾವಳಿಯನ್ನು ಏಕಾರ್ಥದ ಕಡೆಗೆ ಎಳೆಯಬಾರದು" ಎಂದು ಹೇಳುತ್ತಲೇ ಬೇರ್‍ಯಾರಿಗೂ ಹೊಳೆಯದ ಸತ್ಯವೊಂದು ನಾಟಕ ನೋಡಿದ ತಮಗೂ ಮತ್ತು ನಿರ್ದೇಶಕರಿಗೂ ಹೊಳೆದುಬಿಟ್ಟಿದೆಯೆಂದು "ಅಪ್ಪಾ, ಈಗ ನೀನು ನಿಜವಾದ ಬ್ರಾಹ್ಮಣನಾದೆ" ಎಂಬ ಏಕಾರ್ಥವನ್ನೇ ಹೇಳಿದ್ದಾರೆ. ನಾಟಕ ಕೃತಿಯ ಆಶಯಗಳಿಗೆ ವಿರುದ್ಧವಾದ ಕ್ರಿಯೆಗಳನ್ನು ಪ್ರತಿಮಾವಳಿ ಎನ್ನುತ್ತಾರೇನು? ಜನಿವಾರ ಹಾಕಿಕೊಂಡರೆ ಮಾತ್ರ ಬ್ರಾಹ್ಮಣನಾಗುತ್ತಾನೇನು? ಜಾತಿ ಬೇಡವೆನ್ನುವ ಬ್ರಾಹ್ಮಣನಿಗೆ ಶೂದ್ರರೇ ಜನಿವಾರವನ್ನು ಹಾಕಿ ಬ್ರಾಹ್ಮಣ್ಯವನ್ನು ಒಪ್ಪಿಕೊಂಡಿದ್ದಾರೆನ್ನುವ ಧ್ವನಿ ಹೊರಡುವುದಿಲ್ಲವೇ?

ಕುವೆಂಪು ಅವರ ಮೂಲಕ ಶಂಬೂಕನನ್ನು ನೋಡಬೇಕೇ ಹೊರತು ಶಂಬೂಕ ಹಾಗೂ ಬ್ರಾಹ್ಮಣ ಪಾತ್ರಧಾರಿಯ ಮೂಲಕ ಕುವೆಂಪು ಅವರನ್ನಲ್ಲ. ನಾಟಕ ಪ್ರಯೋಗದ ಸಂದರ್ಭದಲ್ಲಿ ಅದನ್ನು ವ್ಯಾಖ್ಯಾನಿಸುವಾಗ ಅಥವಾ ಪ್ರತಿಮಾವಳಿಗಳನ್ನು ಕಟ್ಟುವಾಗ ಬಹಳ ಎಚ್ಚರಿಕೆಯಿಂದ, ವಿವೇಕದಿಂದ ಯೋಚಿಸುವ ಅಗತ್ಯವಿರುತ್ತದೆ. ಹಾಗಾಗದಿದ್ದಲ್ಲಿ ವ್ಯಾಖ್ಯಾನವೆನ್ನುವುದು ನಮ್ಮ ಬೌದ್ಧಿಕತೆಯನ್ನು ವಿಜೃಂಭಿಸಿಕೊಳ್ಳುವುದಕ್ಕಷ್ಟೇ ಸೀಮಿತವಾಗಿ ಪ್ರಯೋಗವು ಅಪಾರ್ಥವನ್ನು ಸೃಷ್ಟಿಸುತ್ತದೆ ಎನ್ನುವುದು ನನ್ನ ತಿಳಿವಳಿಕೆಯಾಗಿದೆ.


ಶೂದ್ರ ತಪಸ್ವಿ ನಾಟಕದ ನಿರ್ದೇಶಕರಾದ ರಂಗಮಿತ್ರ ಮಂಜುನಾಥ ಬಡಿಗೇರರು ಪ್ರದರ್ಶನದ ಲೆಕ್ಕ ಕೊಡುತ್ತ ನೋಡುಗನ ವಿಶಾಲ ಮತ್ತು ಸಂಕುಚಿತ ದೃಷ್ಟಿಯನ್ನು ಅಳೆಯಲು ಯತ್ನಿಸುತ್ತಿದ್ದಾರೆ. ಅದು ಎಲ್ಲರಿಗೂ ಗೊತ್ತಿದೆ; ನೀನಾಸಂ ಸಂಸ್ಥೆಯ ನಾಟಕವಾದುದರಿಂದ 56 ಪ್ರದರ್ಶನಗಳಾಗಿವೆಯೆಂದು. 56 ಪ್ರದರ್ಶನಗಳಾದ ಮಾತ್ರಕ್ಕೆ ಜನ ಅದನ್ನು ಅಪಾರವಾಗಿ ಇಷ್ಟಪಟ್ಟಿದ್ದಾರೆಂದು ತಿಳಿಯುವ ಅಗತ್ಯವಿಲ್ಲ.

ಒಂದು ಕಡೆ ಪೇಜಾವರ ಶ್ರೀಗಳು ದಲಿತಕೇರಿಗಳಲ್ಲಿ ದೀಕ್ಷೆ ನೀಡಲು ಪಾದಯಾತ್ರೆ ನಡೆಸುತ್ತಿದ್ದರೆ, ಈ ಕಡೆ ಮಡೆಸ್ನಾನ ಸಹಜವೆನ್ನುವುದು ಮತ್ತು ಶೂದ್ರ ತಪಸ್ವಿಯಂತಹ ನಾಟಕದಲ್ಲಿ ಜನಿವಾರ ತೊಡಿಸುವುದು ಸಾಂಸ್ಕೃತಿಕವಾಗಿ ಗೊಂದಲವನ್ನು ಮೂಡಿಸುತ್ತದೆ.

ಇಂತಹ ಸಂದರ್ಭದಲ್ಲಿ ಶೂದ್ರ ತಪಸ್ವಿ ನಾಟಕದ ಪ್ರತಿಮೆಯನ್ನು ಹೀಗೂ ಹೇಳಬಹುದೇನೋ: "ನೀನಾಸಂ ಸಂಸ್ಥೆಯು ಶಂಬೂಕಾಶ್ರಮವಾಗಿಯೂ, ಅಕ್ಷರ ಅವರು ಶಂಬೂಕನಾಗಿಯೂ, ಕೆಲ ಬುದ್ಧಿಜೀವಿಗಳು ವೃಕ್ಷ ಭೈರವರಾಗಿಯೂ, ಗುಜರಾತಿನ ನರೇಂದ್ರ ಮೋದಿಯು ಮೃತ್ಯುವಾಗಿಯೂ, ಯಡಿಯೂರಪ್ಪನವರು ಶ್ರೀರಾಮನಾಗಿಯೂ ಮತ್ತು ಪೇಜಾವರ ಶ್ರೀಗಳು ಶೂದ್ರ ತಪಸ್ವಿ ನಾಟಕದ ಬ್ರಾಹ್ಮಣನಾಗಿಯೂ...." ಹೀಗಾದರೆ ಏನಾಗಬಹುದು?! ಕಲ್ಪಿಸಿಕೊಂಡರೆ ಮೈ ಬೆವರುತ್ತದೆ.

• ನಾ. ಸಂಪತ್ ಕುಮಾರ್

ಪೆನ್ನು ಮತ್ತು ಪೇಪರ್



ಎಲ್ಲ ಪ್ರಾರಂಭವಾಗಿದ್ದು ಒಂದು ಸ್ವೇಚ್ಛಾಚಾರದ ಕ್ಷಣ
ಆದರಲ್ಲಿ ಯಾವ ಗಂಭೀರತೆಯೂ ಇರಲಿಲ್ಲ.
ಮಾರ್ಕೆಟ್ಟಿನಲ್ಲಿ ಆತನನ್ನು ಕಂಡ ಆಕೆ
ಸಂದಣಿಯಲ್ಲೇ ಹಿಂಬಾಲಿಸಿದಳು.
ಅವಳ ತಲೆಯಲ್ಲಿ ಅಡ್ಡಾದಿಡ್ಡಿ ಕಲ್ಪನೆಗಳು ಹರಿದಾಡಿದವು
ಅವಳಲ್ಲಿ ಉನ್ಮಾದವನ್ನು ಹುಟ್ಟಿಸಿದ
ಆತ ಅವಳ ಮನಸ್ಸಿನಲ್ಲಿ ಆಲೋಚನೆಗಳನ್ನು ತುಂಬಿದ


ಹಗಲು
ಮತ್ತು ರಾತ್ರಿ
ಅವಳಲ್ಲಿ ಬೆಳೆದ ಆಲೋಚನೆಗಳವು

ಒಂದು ದಿನ ಬಂತು
ಅವಳಿಗೆ ಇನ್ನು ಸಹಿಸಲಾಗಲಿಲ್ಲ
ಎಲ್ಲವನ್ನೂ ಹೊರಹಾಕಬೇಕಿತ್ತು ಆಕೆಗೆ
ಅವನಿದ್ದಲ್ಲಿಗೆ ಹೋದ ಆಕೆ
ಅವನ ಮೇಲೆಲ್ಲ ಬರೆದಳು.

ಅದೇ ಎಲ್ಲವನ್ನು ಬದಲಾಯಿಸಿತು
ಆ ಕ್ಷಣದ ನಂತರ
ಅವರಿಬ್ಬರೂ ಹಿಂದಕ್ಕೆ ನೋಡಲಿಲ್ಲ
ಅವತ್ತಿನಿಂದ ಒಬ್ಬರನೊಬ್ಬರು ಬಿಡದಿರುವಂತೆ
ಪೆನ್ನು ಮತ್ತು ಪೇಪರ್ ಪ್ರೇಮಿಗಳಾದರು.

ಇಂಗ್ಲಿಷ್ ಮೂಲ: ರತಿ ಅಗ್ನಿಹೋತ್ರಿ
ಕನ್ನಡಕ್ಕೆ: ಸಾವಂತ್ರಿ

ನಾವು ಕಂಡ ತರೇವಾರಿ ರೈತರು




ಸುಬ್ಬಾರೆಡ್ಡಿ, ಹೈದರ್‌ಬೇಗ್ ...



•ಪಾರ್ವತೀಶ ಬಿಡಿ ಚಿತ್ರಗಳು

ಈಗೊಂದು ನಾಲ್ಕೈದು ತಿಂಗಳಿಂದ ನಮ್ಮ ಬಳಗದ ಪಾರ್ಟ್‌ಟೈಂ ರೈತರ ತಂಡ ಅಂದರೆ ನಾನು, ಕ್ಯಾಪ್ಟನ್ ಗೌರಿ, ಡಾ.ಎಂ.ಬಿ.ರಾಮಮೂರ್ತಿ, ನಾಳಿನ ಪಾರ್ಟ್‌ಟೈಂ ರೈತರಾಗಲಿರುವ ಮ್ಯಾನೇಜರ್ ರಾಜು, ಕನಕಪುರದ ಎಂ.ಸಿ. ನಾಗರಾಜ್ ಮುಂತಾದವರು ಕೆಲ ಸ್ಥಳಗಳಲ್ಲಿ ಸುತ್ತಾಡಿ ಬಂದೆವು. ಈ ಊರುಗಳಲ್ಲಿ ನಾವು ತರೇವಾರಿ ಅನ್ನಬಹುದಾದ ರೈತರನ್ನು ನೋಡಿ ಬಂದೆವು. ಇವತ್ತಿನ ದಿನಗಳಲ್ಲಿ ವ್ಯವಸಾಯದ ಕೆಲಸ ಅತೀ ಕಷ್ಟದ್ದು ಎಂಬುದು ನಿಜ. ರೈತರು ಆತ್ಮಹತ್ಯೆಗೆ ಶರಣಾಗುತ್ತಿರುವ ಘಟನೆಗಳಂತೂ ಈಗ ನಿತ್ಯದ ವಿದ್ಯಮಾನ. ಹಳ್ಳಿಗಳನ್ನು ತ್ಯಜಿಸಿ ಜನ ಪೇಟೆಗಳತ್ತ ಗುಳೆ ಹೊರಟುಬರುತ್ತಿರುವುದು ದೊಡ್ಡ ಪ್ರಮಾಣದಲ್ಲಿ ನಡೆದಿದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಪೇಟೆಯ ಜನರಲ್ಲಿ ಕೆಲವರಿಗೆ ಬಿಟ್ಟೂಬಿಡದ ಮಣ್ಣಿನ ಮೋಹ. ನಾವೆಲ್ಲಾ ಹೆಚ್ಚುಕಡಿಮೆ ಇದೇ ಕ್ಯಾಟಗರಿಗೆ ಸೇರಿದವರು.

ಕರ್ನಾಟಕದ ಹಳ್ಳಿಗಳಲ್ಲಿ ಪಾಪರೈಜೇಶನ್ ವೇಗವಾಗಿ ಹಬ್ಬುತ್ತಿದೆ. ಸಾಂಪ್ರದಾಯಕ ಬೆಳೆ ತೆಗೆಯುತ್ತಾ ಬೇಸಾಯ ನಡೆಸುವ ಬಡರೈತರು ಬದುಕುಳಿಯುವುದು ಕಷ್ಟದ ಮಾತೇ ಸರಿ. ರೈತರು ಈಗಲಾದರೂ ಹೊಸ ಯೋಚನೆ ಮಾಡದೇ ಹೋದರೆ, ಹೆಚ್ಚು ಆದಾಯ ಪಡೆಯುವ ಹೊಸ ದಾರಿಗಳನ್ನು ಹುಡುಕಿಕೊಳ್ಳದಿದ್ದರೆ, ಸರ್ಕಾರದ ಕೈಗೆ ಸಿಗದಂತೆ ತಪ್ಪಿಸಿಕೊಳ್ಳದಿದ್ದರೆ ಈ ಕೆಟ್ಟ ಕಾಲದಲ್ಲಿ ಸರ್ವೈವ್ ಆಗುವುದು ಕಠಿಣವಾಗಲಿದೆ.



ಕನಕಪುರ ಪಾಷಾ....

ನಮ್ಮ ಈ ಸುತ್ತಾಟದ ಉದ್ದೇಶ ಇದೇ ಆಗಿತ್ತು. ಅತ್ತ ಪೂರಾ ಕಾರ್ಪೊರೇಟ್ ಫಾರ್ಮಿಂಗ್ ತರದ್ದೂ ಅಲ್ಲದ ಇತ್ತ ನಿಸ್ತೇಜಗೊಂಡ, ನಿತ್ರಾಣಗೊಂಡ ರೈತರಂತೆಯೂ ಇರದ ವಿಭಿನ್ನ ಶೈಲಿಯ ಕೆಲ ರೈತರನ್ನು ನಾವು ನೋಡಿಬಂದೆವು.

ಮಾಮೂಲಿಯಾದ ವ್ಯವಸಾಯದೊಂದಿಗೆ ಇವರು ಕುರಿ, ಕೋಳಿ ಹಾಗೂ ಹಂದಿಗಳನ್ನು ಸಾಕುತ್ತಾ ಕೊಂಚ ಹಣ ದುಡಿಯುತ್ತಿದ್ದಾರೆ. ಇದು ತಂದುಕೊಡುತ್ತಿರುವ ಹಣ ಕಾಸಿನ ನೆಮ್ಮದಿ ಅವರ ಮಾತು, ಓಡಾಟ ಹಾಗೂ ಜೀವನಶೈಲಿಯಲ್ಲೂ ಪ್ರತಿಬಿಂಬಿತವಾಗುತ್ತಿದೆ. ಸುಬ್ಬಾರೆಡ್ಡಿ, ಅಮೋಲ್ ಹಾಗೂ ಪಾಶ ಇವರೇ ನಾವು ನೋಡಿ ಬಂದ ರೈತರು.

ಚಿಂತಾಮಣಿ ರಸ್ತೆಯಲ್ಲಿ ಸಿಗುವ ಕೈವಾರ ಒಂದು ಲೋಕಪ್ರಸಿದ್ಧ ಸ್ಥಳ. ದಾರ್ಶನಿಕ ಗುರುವೂ, ಸಂತನೂ ಆಗಿದ್ದ ಯೋಗಿ ನಾರೇಯಣ ತಾತಯ್ಯ ಬದುಕಿ ಬಯಲಾಗಿದ್ದು ಇಲ್ಲಿಯೇ. ಹೊಸಕೋಟೆಯ ರೈತಮಿತ್ರ ಹೈದರ್ ಬೇಗ್, ಬಳಿದಾಳೆಯಿಂದ ನನ್ನ ತಮ್ಮ ವಿಜಿಯನ್ನು ಕರೆದುಕೊಂಡು ನಾವೆಲ್ಲಾ ಕೈವಾರಕ್ಕೆ ಹೋಗಿದ್ದು ರೈತ ಸುಬ್ಬಾರೆಡ್ಡಿಯನ್ನು ನೋಡಲಿಕ್ಕೆ. ಈಗತಾನೆ ರಾಜ್ಯ ಕೃಷಿ ಪ್ರಶಸ್ತಿಯನ್ನು ಪಡೆದಿರುವ ಸುಬ್ಬಾರೆಡ್ಡಿ ಸರಳ ಮನುಷ್ಯ. ಪಂಚೆ ಶರಟು, ಸಾಧಾರಣ ಚಪ್ಪಲಿಯಲ್ಲಿ ಸರ್ವೇ ಸಾಧಾರಣ ಹಳ್ಳಿಗನಂತೆ ಕಾಣುತ್ತಾರೆ. ಆದರೆ ಅವರ ಜೊತೆ ಒಂದು ಗಂಟೆ ಓಡಾಡಿ, ಮಾತಾಡಿ ಬಂದರೆ ಈ ನೆಲದ ರೈತರಿಗೂ ಬದುಕುವ ಹೊಸ ದಾರಿ ಸಿಗಬಹುದು ಎನಿಸುತ್ತದೆ.

ಈ ಸುಬ್ಬಾರೆಡ್ಡಿ ದೊಡ್ಡ ಸಂಖ್ಯೆಯಲ್ಲಿ ಕುರಿಗಳನ್ನು ಸಾಕುತ್ತಿದ್ದಾರೆ. ಇದೆಷ್ಟು organised ಆಗಿದೆಯೆಂದರೆ ಕನಿಷ್ಠ ತಿಂಗಳಿಗೊಂದು ಬ್ಯಾಚ್‌ನಂತೆ ಅವರು ಕುರಿಗಳನ್ನು ಮಾರುತ್ತಾರೆ. ಕುರಿ, ಆಡು ಸಾಕಾಣಿಕೆ ನಮ್ಮಲ್ಲಿ ಹೊಸದೇನಲ್ಲ. ನೂರಾರು ಕಾಲ್ನಡೆ ಕುರಿ, ಆಡು ಮೇಯಿಸುವವರು ನಮ್ಮ ಬಳಿದಾಳೆಯಲ್ಲೇ ಇದ್ದಾರೆ. ಆದರೆ ಅದಕ್ಕೂ ಒಂದು ಉದ್ಯಮದ ರೂಪ ಕೊಟ್ಟು ಶೆಡ್, ಮೇವು, ನೀರು, ಔಷಧ, ಮಾರ್ಕೆಟ್ ಎಲ್ಲವನ್ನು ಕರಾರುವಾಕ್ಕಾಗಿ ಸಂಯೋಜಿಸಿಕೊಂಡು ಕುರಿ ಸಾಕುವುದಿದೆಯಲ್ಲ ಅದೇ ಸುಬ್ಬಾರೆಡ್ಡಿಯವರ ಹೆಚ್ಚುಗಾರಿಕೆ. ಅವರು ಕುರಿಗಳನ್ನು ಬಯಲಿನಲ್ಲಿ ಮೇಯಲು ಬಿಡುವುದಿಲ್ಲ. 20x30 ವಿಸ್ತೀರ್ಣದ ಆಳೆತ್ತರದ ಬದಿರಿನ ಕಂಪಾರ್ಟ್‌ಮೆಂಟ್‌ಗಳನ್ನು ರಚಿಸಿ ಅಲ್ಲೇ ಕುರಿ ಸಾಕುತ್ತಿದ್ದಾರೆ. ಅದರ ಹಿಂದಿರುವ ಲೋಭದ ಲೆಕ್ಕಾಚಾರವೇನೆಂದರೆ ಮೇವು ಹುಡುಕುತ್ತಾ ಕುರಿಗಳು ಹೊಲದ ಬದುಗಳಲ್ಲಿ ಓಡಾಡಿದರೆ ಅವು ತಿನ್ನುವ ಮೇವು ಮಾಂಸವಾಗಿ ಬೆಳೆದು ಸಂಗ್ರಹವಾಗುವ ಬದಲಿಗೆ ಅಷ್ಟು ಕ್ಯಾಲರಿ ಆಹಾರವು ಖರ್ಚಾಗಿ ಬಿಡುತ್ತದಲ್ಲಾ ಎಂಬುದೇ ಆಗಿದೆ. ಜೊತೆಗೆ ರೋಗಗಳಿಂದ ಕುರಿಗಳನ್ನು ರಕ್ಷಿಸಿಕೊಳ್ಳಬೇಕೆಂಬ ಮುನ್ನೆಚ್ಚರಿಕೆಯೂ ಇದೆಯೆನ್ನಿ. ಸುಬ್ಬಾರೆಡ್ಡಿಯವರು ತಮ್ಮ ಜಮೀನಿಗೆ ಪೂರಾ ಹನಿ ನೀರಾವರಿ ಮಾಡಿಸಿಕೊಂಡು ಕುರಿಗಳ ಬ್ಯಾಚ್ ಸಂಖ್ಯೆಗೆ ತಕ್ಕಂತೆ ಜೋಳ, ಕುದುರೆ ಸೊಪ್ಪು, ಹುಲ್ಲು ಇತ್ಯಾದಿ ಬೆಳೆಯುತ್ತಾರೆ. ಕುರಿಗಳಿಗೆ ರಸಮೇವು ಸಿದ್ಧಪಡಿಸಿ ಸಂಗ್ರಹಿಸಿಟ್ಟುಕೊಳ್ಳಲು ಅಲ್ಲಿ ವ್ಯವಸ್ಥೆಯಿದೆ. ಇದರ ಜೊತೆ ತರಕಾರಿ, ಭತ್ತ ರಾಗಿಗಳೂ ಉಂಟು. ನಾವು ಹೋಗಿದ್ದಾಗ ಅಲ್ಲಿ ಮುನ್ನೂರಕ್ಕೂ ಜಾಸ್ತಿ ಕುರಿಗಳಿದ್ದವು. ಬೇರೆಬೇರೆ ವಯಸ್ಸಿನವು–ಕೆಲವು ಎರಡು ಮೂರು ತಿಂಗಳ ಮರಿಗಳಾದರೆ ಉಳಿದವು ಬಿರಿಯಾನಿಯಾಗಿ ಹುತಾತ್ಮರಾಗುವ ಪ್ರೌಢ ವಯಸ್ಸಿಗೆ ಬಂದಿದ್ದವು. ಮೇಲ್ನೋಟಕ್ಕೇನೆ ಸುಬ್ಬಾರೆಡ್ಡಿಯವರ ಕುರಿ ಸಾಕಾಣಿಕೆ ಲಕ್ಷಾಂತರ ರೂಪಾಯಿಗಳ ಉದ್ಯಮವಾಗಿ ಬೇರು ಬಿಡುತ್ತಿರುವುದು ಗೊತ್ತಾಗುತ್ತಿತ್ತು, ಇದರ ಜೊತೆಗೆ ಅಲ್ಲೇ ಡಜನ್‌ಗಟ್ಟಲೆ ಎಮು ಪಕ್ಷಿಗಳನ್ನು ಸಾಕಿದ್ದಾರೆ. ಅರವತ್ತು ಸಾವಿರದ ತನಕ ಜೋಡಿ ಎಮು ಹಕ್ಕಿಗಳ ಬೆಲೆ ಇದೆ. ನಾಲ್ಕು ಕಡುಬಿನ ಗಾತ್ರದ ಎಮು ಮೊಟ್ಟೆ ನೋಡಲಿಕ್ಕೇ ಅದ್ಭುತ ಅನಿಸುತ್ತದೆ. ದಕ್ಷಿಣ ಅಮೆರಿಕಾದ ಎಮು ಸಾಕಾಣಿಕೆ ಈಗ ಹೊಸ ಟ್ರೆಂಡ್.

ಈ ಸುಬ್ಬಾರೆಡ್ಡಿಯವರ ತೋಟ ಹಾಗೂ ಕುರಿ ಫಾರಂಗೆ ನಿತ್ಯ ಜನ ಬಂದು ನೋಡಿ ಹೋಗುತ್ತಿರುತ್ತಾರೆ. ಜನರಿಗೆ ಈಗ ಅದೊಂದು ಕೃಷಿ ಕಾಲೇಜು.

ಇನ್ನೊಮ್ಮೆ ನಾವು ಕನಕಪುರ ರೋಡಿನಲ್ಲಿ ಹಾರೋಹಳ್ಳಿಗೂ ಮುನ್ನ ಸಿಗುವ ನೆಟ್ಟಿಗೆರೆಗೆ ಹೋದೆವು. ನಮ್ಮ ಬಳಗದ ಪ್ರೊ. ವಿ.ಎಸ್. ಶ್ರೀಧರರ ಶಿಷ್ಯ ಅಮೋಲ್ ಅಲ್ಲೊಂದು ಹಂದಿ ಫಾರಂ ನಡೆಸುತ್ತಿದ್ದಾನೆ. ಹೋಗಿ ನೋಡಿದರೆ ಅಮೋಲ್‌ಗಿನ್ನೂ ಇಪ್ಪತ್ನಾಲ್ಕರ ವಯಸ್ಸು. ಇರುವ ಹದಿನೈದೆಕರೆ ಭೂಮಿಯಲ್ಲಿ ಒಂದೆಕರೆಯ ಜಾಗದಲ್ಲಿ ಆರು ನೂರು ಹಂದಿ ಸಾಕಿದ್ದಾನೆ. ಅಮೋಲ್‌ನ ತಂದೆ ಅಮೆರಿಕಾದಲ್ಲಿ ಓದಿ ಬಂದಿದ್ದ ಕೃಷಿ ವಿಜ್ಞಾನಿಯಾಗಿದ್ದರು. ಈಗೊಂದೆರಡು ವರ್ಷಗಳ ಹಿಂದೆ ಆಕ್ಸಿಡೆಂಟ್‌ಗೆ ಸಿಲುಕಿ ತೀರಿಕೊಳ್ಳುವ ಮುನ್ನ ಅವರೇ ಒಂದೂವರೆ ಸಾವಿರ ಹಂದಿ ಸಾಕುತ್ತಿದ್ದರಂತೆ. ಅಮೋಲ್ ಈಗದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾನೆ. ಬೆಂಗಳೂರಿನ ಕೆಲ ಹೋಟೆಲ್ ಹಾಗೂ ಫ್ಯಾಕ್ಟರಿ ಕ್ಯಾಂಟೀನ್‌ಗಳಿಂದ ವ್ಯರ್ಥ ಆಹಾರ ಪದಾರ್ಥ ಸಂಗ್ರಹಿಸಿ ತರಿಸುತ್ತಾನೆ. ಈ ಕೆಲಸಕ್ಕಾಗಿ ಮೂರು ಗೂಡ್ಸ್ ವ್ಯಾನ್ ಹಾಗೂ ಸಿಬ್ಬಂದಿಯಿದ್ದಾರೆ. ದಿನಾ ಬೆಳಗ್ಗೆ ಐದಕ್ಕೇ ಏಳುವ ಅಮೋಲ್ ತನ್ನ ಸಹಾಯಕರ ಜೊತೆ ಹಂದಿ ದೊಡ್ಡಿಗೆ ನುಗ್ಗುತ್ತಾನೆ. ತಲಾ ಮೂವತ್ತೈದು ಹಂದಿಗಳಂತೆ ತಿಂಗಳ ವಯಸ್ಸಿನ ಲೆಕ್ಕದಲ್ಲಿ ಹಂದಿಗಳಿಗೆ 12 ಕಂಪಾರ್ಟ್‌ಮೆಂಟುಗಳಿವೆ. ನಮ್ಮ ರಾಜು ಮಾತಲ್ಲೇ ಹೇಳಬೇಕೆಂದರೆ ಪ್ಲೇಹೋಮ್, ಕಿಂಡರ್ ಗಾರ್ಟನ್, ಬಾಣಂತಿ ವಾರ್ಡ್‌ಗಳೆಲ್ಲಾ ಅಲ್ಲಿದ್ದವು. ಈ ಅಮೋಲ್ ಪ್ರತಿ ತಿಂಗಳೂ ತಪ್ಪದೆ 5 ಟನ್ ಹಂದಿ ಮಾಂಸ ಕೇರಳಕ್ಕೆ ಕಳಿಸುತ್ತಾನೆ. ಖರೀದಿ ಇಲ್ಲೇ ನಡೆಯುತ್ತದೆ. ಬೆಲೆ ಕೆಜಿಗೆ



ಅಮೋಲ್ ಮತ್ತವರ ಹಂದಿ ಫಾರಂ

50 ರೂಪಾಯಿ. ಇಂಗ್ಲಿಷ್ ಎಂಎ ಓದಲು ಹೊರಟಿದ್ದ ಅಮೋಲ್ ಈಗೊಬ್ಬ ವಿಶಿಷ್ಟ ರೈತ ಕಸುಬುದಾರ. ಅಚ್ಚುಕಟ್ಟಾದ ಕನ್ನಡ–ಇಂಗ್ಲಿಷ್ ಆಡುತ್ತಾನೆ. ಇಂಗ್ಲಿಷ್ ಸಾಹಿತ್ಯ ಅವನಿಗೆ ಗೊತ್ತು. ಹಂದಿ ಸಾಕಾಣಿಕೆ ಬಗ್ಗೆ ತಿಳಿಯಲು ಕುತೂಹಲದಿಂದ ಬರುವವರಿಗೆ ತಿಳಿ ಹೇಳುವ ವಿದ್ಯೆಯು ಗೊತ್ತಿದೆ. ಸಾಮಾನ್ಯವಾಗಿ ನಾವೆಲ್ಲಾ ಹಂದಿ ಅಂದರೆ ಗಲೀಜು ಅಂತೆಲ್ಲಾ ಅಂದುಕೊಳ್ಳುತ್ತೇವೆ. ಆದರೆ ಅಮೋಲ್ ಫಾರಂನ ಹಂದಿಗಳು ದಿನಕ್ಕೆರಡು ಸ್ನಾನ ಮಾಡಿಸಿಕೊಂಡು, ತಿಂದುಂಡು ದುಂಡಗೆ ಫಳಫಳ ಹೊಳೆಯುತ್ತಿದ್ದವು. ಆದರೆ ಏಕ್‌ದಂ ಸೊಂಭೇರಿಗಳವು. ಆಗೊಮ್ಮೆ ಈಗೊಮ್ಮೆ 'ವ್ಯಾಂ, ವ್ಯಾಂ' ಶಬ್ದ ಬಿಟ್ಟರೆ ಬೇರೆ ಚಟುವಟಿಕೆಯೇ ಅವಕ್ಕಿಲ್ಲ. ತಿಂದದ್ದೆಲ್ಲವನ್ನು flesh tissueಗಳಾಗಿ ರೂಪಾಂತರಿಸಿಕೊಳ್ಳುವ ಕೆಲಸ ಬಿಟ್ಟು.

ಅಮೋಲ್ ಹಂದಿ ಸಾಕಾಣಿಕೆಯ ಇಷ್ಟ-ಕಷ್ಟಗಳ ಬಗ್ಗೆ ಹೇಳಿದ. ಕಾಯಿಲೆ ಮೆಡಿಸನ್‌ಗಳ ವಿವರ ಕೊಟ್ಟ. ಅಲ್ಲಿಂದ ಹೊರಟಾಗ ನಮಗನಿಸಿದ್ದು 'ಕೈ ಕೆಸರಾದರೆ ಬಾಯಿ ಖಂಡಿತಾ ಮೊಸರಾಗುತ್ತದೆ' ಎಂದು.

ಅದರ ಮಾರನೆಯ ದಿನದ ಬೆಳಗಿನ ಜಾವಾ ನಾವು ನೂರಾರು ಕುರಿ-ಹಂದಿ ಸಾಕಿ ಯಶಸ್ವಿಯಾದಂತೆ ಕನಸು ಬಿತ್ತು. ಅದಿರಲಿ ಬಿಡಿ, ಕಳೆದ ತಿಂಗಳು ಕನಕಪುರದ ನಮ್ಮ ಕಲಾವಿದ ಗೆಳೆಯ ಎಂ.ಸಿ. ನಾಗರಾಜ್ ಫೋನ್ ಮಾಡಿ ಶಿವನಹಳ್ಳಿ ಹತ್ತಿರ ಒಬ್ಬ ಮುಸ್ಲಿಂ ಯುವಕ ನಾಟಿ ಕೋಳಿ ಫಾರಂ ಮಾಡಿದ್ದಾನೆ ಬಂದು ನೋಡಿ ಅಂದ. ಸರಿ ಎಂದು ಹೊರಟಾಗ ನಮ್ಮ ಜೊತೆ ಸೇರಿಕೊಂಡವರು ಡಾ. ರಾಮಮೂರ್ತಿ ಹಾಗೂ ಶಿವಣ್ಣ. ರಾಮಮೂರ್ತಿಗೆ ದಾವಣಗೆರೆ ಹತ್ತಿರ ತೋಟವಿದೆ. ಪ್ರತಿ ವೀಕೆಂಡ್‌ನಲ್ಲೂ ಅವರು ಅಲ್ಲಿಗೆ ಹೋಗಿ ಕೆಲಸ ಮಾಡಿ ಬರುತ್ತಾರೆ. ಅವರೊಮ್ಮೆ ಯಾರೋ ಹೇಳಿದರೆಂದು ಲಾರಿ ಲೋಡುಗಟ್ಟಲೆ ಬೂದುಗುಂಬಳ ಬೆಳೆದು ಗಿರಾಕಿ ಸಿಗದೆ ದನಗಳಿಗೆ ತಿನ್ನಿಸಿ ಪುಣ್ಯಕೋಟಿ ಎನಿಸಿಕೊಂಡಿದ್ದರು. ಇನ್ನು ನಾಗಮಂಗಲದವರಾದ ಶಿವಣ್ಣ ಎಂಥ ಸಾಹಸಿ ರೈತರೆಂದರೆ ಸ್ವಂತ ಜಮೀನಿನಲ್ಲಿ ಕೃಷಿ ಮಾಡಿದರೂ ಲಾಸ್ ಆಗುವ ರೈತರಿರುವಾಗ ಅವರು ಕನಕಪುರದ ದೊಡ್ಡಾಲಹಳ್ಳಿಯಲ್ಲಿ ಬೇರೆಯವರ ಜಮೀನನ್ನು ಬಾಡಿಗೆ ಪಡೆದು ವ್ಯವಸಾಯ ನಡೆಸುತ್ತಾ ತಕ್ಕಮಟ್ಟಿಗೆ ಯಶಸ್ವಿಯೂ ಆಗಿದ್ದಾರೆ. ಇದರ economics ಹೇಗೆ work out ಆಗುತ್ತಿದೆ ಅಂತಾ ಕೊಂಚ ತನಿಖೆ ಮಾಡಿ ತಿಳಿಯಬೇಕಿದೆ.

ನಾವು ಶಿವನಹಳ್ಳಿಗೆ ಹೋದಾಗ ನಾಟಿ ಕೋಳಿ ಫಾರಂನಲ್ಲಿ ಸಿಕ್ಕವರು ಪಾಷ. ನಲವತ್ತು ವರ್ಷದ ಪಾಷ ಕೆಲಕಾಲ ಟೈಲರ್ ಆಗಿ ದುಡಿದು ಕನಕಪುರ ಟೌನಿನ ಮನೆಯ ಹಿತ್ತಲಲ್ಲೇ ನೂರುಗಟ್ಟಲೆ ನಾಟಿ ಕೋಳಿ ಸಾಕಿ ಹಣ ದುಡಿದು ಕೊನೆಗೆ ಶಿವನಹಳ್ಳಿಯಲ್ಲಿ ಒಂದೆಕರೆ ಭೂಮಿ ಕೊಂಡಿದ್ದಾರೆ. ಈಗ ಅಲ್ಲೇ ಕೋಳಿ ಫಾರಂ ಕಟ್ಟಿದ್ದಾರೆ. ಹೆಸರಗಟ್ಟದಿಂದ ಕೋಳಿ ಮರಿಗಳನ್ನು ತರುವ ಪಾಷ ತಲಾ ಮುನ್ನೂರರಂತೆ ಮೂರು ಬ್ಯಾಚ್‌ಗಳಲ್ಲಿ ಸಾಕುತ್ತಾರೆ. ತಿಂಗಳಿಗೊಂದು ಬ್ಯಾಚ್‌ನಂತೆ ಕೋಳಿ ಮಾರಿ ಮೂವತ್ತು ಸಾವಿರದ ತನಕ ದುಡಿಯುತ್ತಿದ್ದಾರೆ. ರಾಗಿ ಮಿಲ್‌ಗಳಲ್ಲಿ ಉದುರಿ ಬಿದ್ದಿರುವ ಕಾಳುಗಳು, ಹೋಟೆಲ್‌ನ ವ್ಯರ್ಥ ಆಹಾರ, ಕೊಂಚ ಬ್ರಾಯ್ಲರ್ ಫೀಡ್ ಕೋಳಿಗಳಿಗೆ ತಿನ್ನಿಸುತ್ತಾರೆ. ಈ ಪಾಷ ಎಂಥ ಜಾಣನೆಂದರೆ ರಾಗಿಯನ್ನು ನೇರವಾಗಿ ಕೋಳಿಗೆ ಕೊಡದೆ ನೆಲದಲ್ಲಿ ಹರಡಿ ಕೊಂಚ ನೀರು ಹಾಯಿಸಿ ಗೋಣಿಚೀಲದಲ್ಲಿ ಒಂದೆರಡು ದಿನ ಮುಚ್ಚಿಟ್ಟರೆ ರಾಗಿ ಮೊಳಕೆಯೊಡೆದಿರುತ್ತದೆ. ಮೂರನೇ ದಿನ ಗೋಣಿಚೀಲ ತೆಗೆದಾಗ ಹೆಚ್ಚಿನ ಪುಷ್ಠಿಯ ರಾಗಿ ತಿನ್ನುವ ಕೋಳಿಗಳು ಬೇಗನೆ ಬೆಳೆದು ಮೈದುಂಬಿಕೊಳ್ಳುತ್ತವೆ. ಅದಷ್ಟೇ ಅಲ್ಲ, ಕೋಳಿ ಗೊಬ್ಬರವನ್ನು ಗುಂಡಿಗೆ ತುಂಬಿ ನೀರು ಹಾಯಿಸಿ ಅಲ್ಲಿ ಹುಳು-ಕ್ರಿಮಿ ಕೀಟಗಳು ಸೃಷ್ಟಿಯಾಗುವಂತೆ ಮಾಡಿ ನಂತರ ಕೋಳಿಗಳನ್ನು ಅಲ್ಲಿ ಮೇಯಲು ಬಿಡುತ್ತಾರೆ. ಬ್ರಾಯ್ಲರ್ ಕೋಳಿ ಸಾಗಾಣಿಕೆಗೆ ಅಂದರೆ ಫೀಡ್ ಇತ್ಯಾದಿಗೆ ಆಗುವ ಖರ್ಚಿನ ಕಾಲು ಭಾಗ ಮಾತ್ರ ನಾಟಿ ಕೋಳಿಗಳಿಗೆ ಆಗುತ್ತದೆಂದರು ಪಾಷ. ಇದಕ್ಕೆ ಹೆಚ್ಚು ನೀರು ಬೇಕಾಗುವುದಿಲ್ಲ.

ಸೊಗಸಾದ ಕನ್ನಡ ಆಡುತ್ತಾ ಅಪಾರ ಜಾಣ್ಮೆಯಿಂದ ವ್ಯವಹರಿಸುವ ಪಾಷಾನಿಗೆ ಸೌತ್ ಇಂಡಿಯಾದ ಅತ್ಯುತ್ತಮ ನಾಟಿ ತಳಿಗಳನ್ನೆಲ್ಲಾ ಸಾಕುತ್ತಾ ತಾನೇ ಒಂದೆರಡು ಹೊಸ ತಳಿ ರೂಪಿಸುವ ಕನಸು.


'ಗುಡ್ ಲಕ್' ಎಂದ ನಾವು ಪಾಷ ಸೃಷ್ಟಿಸಲಿರುವ ಹೊಸ ನಾಟಿ ಕೋಳಿ ತಳಿಗಳಿಗೆ ಹೈದರ್-ಟೀಪೂ ಹೆಸರಿಡಲು ಹೇಳಿ ಬಂದೆವು.

ನಮ್ಮಲ್ಲೀಗ ದಿನಪತ್ರಿಕೆ-ಟಿವಿ ಚಾನಲ್ಲುಗಳಲ್ಲಿ ಕೃಷಿ ಕುರಿತಂತೆ ಹೊಸಹೊಸ ವಿಚಾರಗಳು, ವೈವಿಧ್ಯಮಯ ರೈತರ ಬೇಸಾಯ ವಿಧಾನಗಳ ಬಗ್ಗೆ ಸುದ್ದಿ ಬರುತ್ತಲೇ ಇರುತ್ತದೆ. ಕೃಷಿ ಕ್ಷೇತ್ರದಲ್ಲಿ ವಿನಾಶ-ಏಳಿಗೆ ಎರಡೂ ಸಂಭವಿಸುತ್ತಿವೆ. ಜನರ ಆಗಮನ-ನಿರ್ಗಮನಗಳೂ ಘಟಿಸುತ್ತಿವೆ. ಇವರ ಪೈಕಿ ತೀರಾ ಕಷ್ಟ-ದಾರುಣ ಪರಿಸ್ಥಿತಿಗೆ ಸಿಲುಕಿಕೊಂಡಿರುವ ರೈತಾಪಿ ಈ ಹೊಸ ಸಾಧ್ಯತೆಗಳತ್ತ ನೋಡಬೇಕಿದೆ.

ಅಂದಹಾಗೆ 'ಒಂದು ಚಿಕ್ಕ ಕೃಷಿ ಮಾಸ ಪತ್ರಿಕೆ ಮಾಡಿದರೆ ಹೇಗೆ' ಎನ್ನುವ ಮಾತೊಂದು ನಮ್ಮ ಆಫೀಸಿನಲ್ಲಿ ಕೇಳಿ ಬಂತು.

ನಿಮಗೇನನ್ನಿಸುತ್ತದೆ. ಅದಕ್ಕೊಂದು potential ಇದೆಯಾ?

ದಯಮಾಡಿ ತಿಳಿಸಿ. ●



ಎಂ.ಬಿ. ಸಿಂಗ್ ಜೊತೆ ಕೆಲ ಹೊತ್ತು

ಕಳೆದ ವಾರ ಆಫೀಸ್‌ನಲ್ಲಿ ಸದಾಶಿವ ಶೆಣೈ ಹಿರಿಯರೊಬ್ಬರೊಂದಿಗೆ ಮಾತಾಡುತ್ತಾ ಕುಳಿತಿದ್ದರು. ಪರಿಚಯಿಸಿಕೊಂಡರೆ... ಅವರು ಎಂ.ಬಿ. ಸಿಂಗ್!

ಈಗ 86 ವರ್ಷ ವಯಸ್ಸಿನ ಸಿಂಗ್ ನಾವೆಲ್ಲಾ ಓದು ಕಲಿಯುತ್ತಿದ್ದಾಗ ಸುಧಾ ವಾರಪತ್ರಿಕೆಗೆ ಸಂಪಾದಕರಾಗಿದ್ದರು. ಹಾಗೆಯೇ ವೈಎನ್ಕೆ ನಂತರ ಪ್ರಜಾವಾಣಿಗೂ ಕೆಲ ವರ್ಷ ಸಂಪಾದಕರಾಗಿ ದುಡಿದವರು. ಕನ್ನಡ ಪತ್ರಿಕೋದ್ಯಮದಲ್ಲಿ ಇ.ಆರ್. ಸೇತುರಾಂ, ವೈಎನ್.ಕೆ., ಐ.ಕೆ. ಜಾಗೀರ್‌ದಾರ್, ಖಾದ್ರಿ ಶಾಮಣ್ಣ ಗರುಡನಗಿರಿ ನಾಗರಾಜ್ ಮುಂತಾದವರೆಲ್ಲಾ ಅವತ್ತಿನ ಹೀರೋಗಳು.

ನಾವೆಲ್ಲಾ ಸುಧಾ, ಮಯೂರ ಓದುತ್ತಲೇ ಓದಿನ, ಸಾಹಿತ್ಯದ ಅಭಿರುಚಿ ಬೆಳೆಸಿಕೊಂಡವರು. ಅಂದು ಅಂತದ್ದನ್ನೆಲ್ಲಾ ಮೊಗೆದು ಕೊಡುತ್ತಿದ್ದ ಅದೃಶ್ಯ ಗುರುವಿನಂತಿದ್ದ ಎಂ.ಬಿ. ಸಿಂಗ್‌ರನ್ನು ಆಫೀಸ್‌ನಲ್ಲಿ ಕಂಡಾಗ ಸಹಜವಾಗಿಯೇ ಖುಷಿಯಾಯಿತು. ಲಂಕೇಶರ ಕೆಲ ಪುಸ್ತಕಗಳನ್ನು ಕೊಳ್ಳಲು ಬಂದಿದ್ದ ಸಿಂಗ್ ಅನೇಕ ಹಳೆಯ ಸಂಗತಿ, ತಮ್ಮ ಬಾಲ್ಯ, ಪತ್ರಕರ್ತನ ಆರಂಭದ ದಿನಗಳ ಬಗ್ಗೆ ಹೇಳಿದರು. ಮೈಸೂರಿನಲ್ಲಿ ಓದಿ ಏರ್‌ಫೋರ್ಸ್ ಸೇರಲು ಹೊರಟು ನಂತರ 1942 ರಲ್ಲಿ ಐದು ರೂಪಾಯಿ ಸಂಬಳದ ಅಮೀನನ ಕೆಲಸಕ್ಕೆ ಸೇರಲು ಸಿಂಗ್ ತಯಾರಾಗಿದ್ದರಂತೆ, ಆಗೊಮ್ಮೆ ಅವರಿಗೆ ಅನಕೃ ಹಾಗೂ ಕನ್ನಡ ಚಳವಳಿಯ ಎ. ರಾಮಮೂರ್ತಿ ಸಿಕ್ಕು ಬರವಣಿಗೆಯ ಕೆಲಸಕ್ಕೆ ಕಾಲಿಡುವಂತಾಯಿತು. ನಾನು 'ಸರ್, ಈ ಸಿಂಗ್ ಮೂಲ ಏನು?, ಅಂತ ಕೇಳಿದೆ. ಅವರು ಹೇಳಿದರು. ಮುಲಾಯಂ ಸಿಂಗ್, ವಿ.ಪಿ. ಸಿಂಗ್ ತರದ್ದೇ ಕವಲೊಡೆದು ಒಂದು ಸಿಂಗ್ ಸಮುದಾಯ ಇವರದ್ದು. ನಮ್ಮ ಮಾಜಿ ಸಿಎಂ ಧರಂಸಿಂಗ್ ಕೂಡ ಅದೇ ಸಿಂಗ್ ಸಮುದಾಯದವರು. ಎಂ.ಬಿ. ಸಿಂಗ್‌ರ ಪೂರ್ತಿ ಹೆಸರು ಮಾಧವ ಭೂಷಣ ಸಿಂಗ್. ಅಪಾರ ಜೀವನ ಪ್ರೀತಿಯ ಎಂ.ಬಿ. ಸಿಂಗ್ ಪ್ರಜಾವಾಣಿಯಿಂದ ನಿವೃತ್ತರಾಗಿ ಎರಡು ದಶಕವೇ ಕಳೆದಿದೆ.

'ಈಗೇನ್ಮಾಡ್ತಿದ್ದೀರಿ ಸಾರ್?' ಅಂದಾಗ 'ಕನ್ನಡ ಪತ್ರಿಕೋದ್ಯಮದ ಬಗ್ಗೆ ಒಂದು ಲೇಖನ ಬರೀಬೇಕು. ಅದಕ್ಕೆ ಲಂಕೇಶರ 'ಹುಳಿಮಾವಿನ ಮರ' ತಗೊಂಡೆ' ಅಂದರು.

ಅವರಿಗೀಗ ತೊಂಭತ್ತು ಹತ್ತಿರಾಗುತ್ತಿರುವ ವಯಸ್ಸೆಂಬುದು ಮತ್ತೆ ನೆನಪಾಯಿತು. ಹಣ, ಕೀರ್ತಿಯ ಬೆನ್ನು ಹತ್ತಿ ಹೋಗದೆ ಶ್ರದ್ಧೆಯಿಂದ ಕ್ರಿಯಾಶೀಲರಾಗಿ ತಮ್ಮ ಕೆಲಸ ಮಾಡುತ್ತಿರುವ ಎಂ.ಬಿ. ಸಿಂಗ್ ನಮ್ಮ ಕಚೇರಿಯ ಮೆಟ್ಟಿಲಿಳಿದು ಕೋಲೂರಿ ನಡೆಯುತ್ತಾ ಗಾಂಧಿ ಬಜಾರಿನ ಜನಜಂಗುಳಿಯಲ್ಲಿ ಕರಗಿ ಹೋಗುತ್ತಿದ್ದಾಗ "ಇಂಥವರು ನಮ್ಮೊಂದಿಗೆ ಇನ್ನೂ ಹೆಚ್ಚು ಕಾಲ ಇರಲಿ" ಎಂದು ಅನಿಸಿತು.

...ತರಿಗ್ವಡದ ಪೊಲೀಸ ತೋರ್ಲ್ಲ, ನಾನು ವಡಿತಿನಿ ಅವುನಿಗೆ

...ಉಗ್ರಿ ಬರುವುದನ್ನೇ ಕಾಯುತ್ತಿದ್ದ ಸೀರ ಅವನು ... ಕೂಡಲೇ,

...ವೇ ಉಗ್ರಿ, ನೀನು ನನಿಗೊಂದುಪಕಾರ ಮಾಡ ...?" ಎಂದ. ಸಾಮಾನ್ಯವಾಗಿ ಸೀರನ ಬೇಡಿಕೆಗಳು ...ರ್ಜತನ ಅಥವಾ ಸ್ವಾರ್ಥದಿಂದ ಕೂಡಿರುವುದರಿಂದ, ...ಅದೇನುಪಕಾರ ಮಾಡಬೇಕಪ್ಪ?" ಎಂದ ಉಗ್ರಿ ...ದ ದನಿಯಲ್ಲಿ.

ಅಯ ಲು ಸೀ ಮೆ

ಕಟ್ಟೆಪುರಾಣ

ಬಿ. ಚಂದ್ರೇಗೌಡ

...ಮನ್ನೆ ದಿನ ತಿವಿ ನೋಡಿದೆ ಕಂಡ್ಯ. ಅವುನ್ಯಾವನೊ ...ಮಗ ರೈತರಿಗೆ ಯಂಗ್ವಡದಾ ಅಂತೀ? ಸುಮ್ಮನೆ ...ನ್ದ ರೈತರಿಗೆ ಯರಡೆರಡು ಸತಿ ಕಾಲಲ್ಲಿ ಜಾಡಿಸಿ ...ತಂಡ್ಯ. ಅದೂ ಬೂಟು ಕಾಲಲ್ಲಿ."

...ಬೂಟು ಕಾಲಲಿ ವದ್ನೆ?" ಎಂದು ಕಾಳಮಾವ ... ಕಣ್ಣುಬಿಟ್ಟ.

...ಊ ಕಣಣ್ಣಾ, ನಾನೇ ನನ್ನ ಕಣ್ಣಾರ ನೋಡಿದೆ. ...ನೋಡಿದಾಗ್ಲಿಂದ ಯದೆಲಿ ಹಿಟ್ಟಳಿತಾಯಿಲ್ಲ" ... ಸೀರ ಹಲ್ಲು ಮಸೆದ.

...ಅದ್ಯಾಕಂಗ್ವಡದಿದ್ದರ್ಲ ಉಗ್ರಿ?" ಎಂದ ಕಾಳಮಾವ.

...ಅದೂ ಕೂಲಿ ದುಡ್ಡು ಕೊಡಿ ಅಂತ ರೈತರು ...ಂತೆ ಕಣ ಮಾವ. ಅದ್ಕೆ ಪೊಲೀಸ್ನೋರು ಬಾರಿ ...ಬುಟ್ಟವುರೆ."

...ಪೊಲೀಸಲ್ಲ ಕಂಡ್ಯ. ಅವುನು ಬ್ಯಾರೆ ಬಟ್ಟೆ ಹಿಕ್ಕಿದ್ದಾ" ... ಸೀರ.

...ಪೊಲೀಸು ಕೆಲವು ಟೇಮಲ್ಲಿ ಬ್ಯಾರೆ ಬಟ್ಟೆ ಹಿಕ್ಕತರೆ ..."

...ಆ ನನ್ನ ಮಗನ್ನ ತೋರತಿಯ ನನಿಗೆ?"

...ಏನು ಮಾಡ್ತಿ?"

...ಏನು ಮಾಡ್ತಿನಿ ಅಂತ ಹೇಳದಿಲ್ಲ, ಮಾಡಿ ...ಸ್ತಿನಿ ಆ ಸೂಳೆ ಮಗನಿಗೆ. ಪೊಲೀಸ್ ಕ್ಯಲಸ ...ಯುಲ್ಲ ನಿನ್ನ ವಟ್ಟೆಗೆ ಅನ್ನ ಬ್ಯಳಿಯೋನ್ಯಾರೊ ಮಗನೆ? ...ಯೇನಿಗೆ ವದಿತಿಯಲ್ಲ? ಅಂತ ಯಕ್ಕಡ ತಗಂಡು ...ಮುಸುಡಿ ನೋಡದಂಗೆ ಬಾರುಸ್ತಿನಿ. ಅಮ್ಯಾಲೆ ...ಆಯ್ತದೆ ನೋಡನ" ಎಂದು ಸೀರ ಮತ್ತೆ ಹಲ್ಲು ... ಅವನ ಪೌರುಷವನ್ನು ಮೆಚ್ಚಿದ ಜುಮ್ಮಿ,

"ಅವುನಿಗೆ ನೀನು ವದೀಬೇಕಾದ್ರೆ ಕೊಪ್ಪಳಕೋಗಬೇಕು ಕಣ ಮಾವ. ಅದೇನು ಇಲ್ಲೆ ಇದ್ದತೆ?" ಎಂದಳು.

"ಅಲ್ಲಿಗಂಟ ಹೋಗದು ಬ್ಯಾಡ, ಅವುನಿಲ್ಲೆಲ್ಲಾರ ಟಾಂಸೂರಾದಾಗ ತೋರ್ಲಿ ಕಣೆ ಅಗ್ಲೆ ಹಿಡಕಂಡು ವದಿತಿನಿ."

"ಅಂಗೆ ಪೊಲೀಸ್ ಮ್ಯಾಲೆ ಕೈಮಾಡಿದ್ರ ಜೈಲಿಗಾಕ್ತರೆ ಕಣಣ್ಣಾ."

"ಹಾಕಲಿ. ನಾನೇನು ಹೆದರದಿಲ್ಲ. ಯಂಗಿದ್ರು ನಾನು ಬಂದ ಕ್ಯಲಸ್ಯಲ್ಲ ಮುಗದವೆ. ಇಂತ ನನ್ ಮಕ್ಕಳ ತಗದು ಜೈಲಿಗೋದ್ರೆ ಸ್ವಸಂತ್ರ ಹೋರಾಟ ಮಾಡಿ ಜೈಲಿಗೋದಂಗಾಯ್ತದೆ."

"ತೋರ್ಲ್ಲ ಅಂಗರೆ. ಸೀರ ಮಾವ ಜೈಲಿಗಾರ ಹೋಗಿಬರ್ಲಿ" ಎಂದಳು ಜುಮ್ಮಿ.

"ಅಂಗೆ ನೀನು ವಡಿಯದೆ ಆದ್ರೆ ಮಾವ ಒಂದು ಪ್ಲ್ಯಾನೇಳಿ ಕೊಡ್ತಿನಿ ಬೇಕಾದ್ರೆ ಟ್ರೈಮಾಡು. ಶಿವಮೊಗ್ಗದಲ್ಲಿ ಗಣಪತಿ ಬುಡುವಾಗ ಗಲಾಟೆ ಆದತಂತೆ. ಆಗ ಪೊಲೀಸ್ನೋರಿಗೂ ಜನಗಳಿಗೂ ಮಾರಾಮಾರಿಯಾದತಂತೆ. ಪೊಲೀಸ್ ಕಂಡ್ರೆ ಆಗದೆಯಿರೊ ಜನ ಗುರಿ ಇಟ್ಟು ವಡದರಂತೆ. ಎಷ್ಟು ಚೆನ್ನಾಗಿ ಗುರಿ ಹಿಡಿತರೆ ಅಂದ್ರೆ, ಮೆಟ್ಟು ಒಂದು ಚೂರೂ ಮಿಸ್ಸಾಗದಂಗೆ ಪೊಲೀಸಿನೋನ ಯದಿಗೆ ಬೀಳ್ತವಂತೆ. ಅಂತ ಜನಾನ ಹುಡುಕಿ ನಿನ್ನ ಸೇಡ ತೀರಿಸಿಗಬವುದು ಆದ್ರು ಒಂದು ಮಾತೇಳ್ತಿಯ?"

"ನಾನು ಮಚ್ಚರ ಮಡಗಿದ ಮ್ಯಾಲಾಯ ಅದೇನೇಳು?"

"ಪೊಲೀಸು ಎಲ್ಲಿಂದ್ಲೊ ಬಂದೋನೇ ಇಲ್ಲಿಯೋನೆಯ. ಅವುನ್ನ ನೇಮಕ ಮಾಡಿಕಂಡ ಹಾಯ್ಕಳಕ್ಕೆ ಬಟ್ಟೆ ಬೂಟು ಕೊಟ್ಟು, ಕೈಲಾಟಿ, ಬಂದೂಕು ಕೊಟ್ಟರೋರು ನಾವೆಯ ಅಲವೆ ಕಾಳಮಾವ?"

"ಊಕಣೇಳ್ಳ, ಅದು ಸೀರನಿಗೆಲ್ಲಿ ಗೊತ್ತದತು?"

"ನನಿಗೂ ಯಲ್ಲ ಗೊತ್ತಾಯ್ತದೆ ಕಣಣ್ಣ. ನಾನು ತೆಪ್ಪು ಮಾಡಿದ್ರೆ ವಡಿಲಿ, ಯಾವ ತೆಪ್ಪನೂ ಮಾಡದೆ ಸುಮ್ಮನೆ ಕುಂತಿರೋನಿಗೆ ಬೂಟುಕಾಲಲಿ ನಡುಮುರಿಯಂಗೆ ವದ್ರು ವದಿಸಿಕೊಂಡು ಸುಮ್ಮನಿರಬೇಕು ಅನ್ನದು ಯಾವ ನ್ಯಾಯ? ಹುಟ್ಟೋದೊಂದಿನ, ಸಾಯೊದೊಂದಿನ ಇಂತ ನನ್ನಮಕ್ಕಳ ತಗದೇ ಹೋಗಿಬುಡ್ತಿನಿ."

"ಅವುರು ತಪ್ಪು ಮಾಡಿದ್ರೆ ಸಸ್ಪೆಂಡ್ ಮಾಡಿ ಇನ್ನ ಮ್ಯಾಲೆ ಅಂತ ಕ್ಯಲಸ ಮಾಡಬ್ಯಾಡ್ರಿ ಅಂತ ಹೇಳಬವುದು. ಪ್ರತಿಭಟನೆ ಮಾಡಿ ಬೈಯಬವುದೇ ವರತು ತಿರಗ ಅವುರಿಗೆ ವಡಿಯಂಗಿಲ್ಲ ಕಣೊ ಮಾವ. ಅಂಗ್ವಡದ್ರೆ ನಮಿಗೆ ನಾವೇ ವಡಕಂಡಂಗೆ" ಎಂದ ಉಗ್ರಿ.

"ಅದ್ಯಂಗೆ ನಮಿಗೆ ನಾವೇ ವಡಕಂಡಂಗಾಯ್ತದೋ?"

"ಅದ ನಾನೇಳ್ತಿನಿ ಚಿಗಪ್ಪ" ಎನ್ನುತ್ತ ಬಂದ ಪಾಟಸ್ಪೈ, ಸ್ಟೈಲಾಗಿ ನಿಂತು "ಡೆಮಾಕ್ರಸಿಲಿ ಪ್ರಜೆಗಳಾದ ಪ್ರಭುಗಳನ್ನ, ಅಲ್ಲಲ್ಲ ಪ್ರಭುಗಳಾದ ಪ್ರಜೆಗಳನ್ನ ಕಾಯಕ್ಕೆ ಪೊಲೀಸಿಟಗಂಡಿದ್ದಿವಿ. ಅವುರ ಕೈಲಿ ನಾವು ಹ್ವಡಿಸಿಗಬವುದೇ ಹೊರತು, ನಾವೇ ಹ್ವಡಿಯಂಗಿಲ್ಲ, ಅಂಥ ಪವರ್ರೇನಾದ್ರೂ ನಮಿಗಿದ್ರೆ ತಿಂಗಳಿಗೆ ಕನಿಷ್ಠ ಹತ್ತು ಜನ ಪೊಲೀಸ್ನೋರ ನಡೆದಾಡದಂಗೆ ವಡದು ಸಾಯಿಸ್ತಿದ್ರು. ಆದ್ರಿಂದ ನಾವು ವಡಿಯಂಗಿಲ್ಲ" ಎಂದ.

"ಇದ್ಯಾವ ಸೀಮೆ ನ್ಯಾಯನ್ಲ? ತೆಪ್ಪು ಮಾಡಿದೋರಿಗ್ಯಲ್ಲ ಚಚ್ಚಂಗಿರಬೇಕಾಗಿತ್ತು, ಆಗ ಪೋಲಿ ನನ್ ಮಕ್ಕಳ ತಂಟೆಗೆ ಬತ್ತಿರಲಿಲ್ಲ."

"ಪೊಲೀಸ್ ತೆಪ್ಪು ಮಾಡಿದ್ರೆ ಅಂತಿಯಲ್ಲ ಚಿಗಪ್ಪ, ಅವುರು ಮಾಡದೆ ತಪ್ಪು, ಯಾಕೆಂದ್ರೆ ದಿನಬೆಳಗಾಯ್ತು ಅಂದ್ರೆ ತೆಪ್ಪು ಮಾಡೊ ಸರಕಾರದಲ್ಲಿ ಅವರು ಡ್ಯೂಟಿ ಮಾಡೊ ಜನ. ಆಡಳಿತ ಪಕ್ಷ ಹೇಳಿದಂಗೆ ಕೇಳ್ತವೆ. ಹೇಳಿ ಕೇಳಿ ಈಗಿರೋದು ಬಡುವ್ರುರು, ಮಹಿಳೆರು, ರೈತುರು ವಿರೋಧಿ ಸರಕಾರ. ಅದಕೆ ಬ್ಯಾರೆ ತಲಿ ಕೆಟ್ಟೋಗ್ಯದೆ."

"ಸರಕಾರಕೆ ತಲಿಕೆಟ್ಟಿದ್ಯಾಕ್ಲ?"



"ಸರಕಾರ ನ್ಯಡಸೋರಿಗೆ ತಲಿ ಕೆಟ್ಟದೆ ಅಂದ್ರೆ ಸರಕಾರಕೆ ಕೆಟ್ಟಂಗಲವೆ? ಅಂತ ಚೀಫ್ ಮಿನಿಷ್ಟ್ರೇ ಅವುನ ಕಾರಿನ ಡ್ರೈವರ್ ಸಮೇತ ಆಳುಕಾಳಿಗ್ಯಲ್ಲ ವಡದನಂತೆ. ಅಂಗಿರುವಾಗ ಇನ್ನ ಪೊಲೀಸ್ನೋರು ಜನಗಳ ಬುಟ್ಟರೆ?"

"ಅದ್ಕೆ ಏನೊ ಕಣೊ, ಎಡೂರಪ್ಪ ಬಾಯಿಬುಟ್ಟಿಲ್ಲಾ. ಅವುನ್ನೇನೊ ಹೋಗ್ಲಿ, ವಿರೋಧ ಪಕ್ಷದ ಲೀಡ್ರು ಸಿದ್ದರಾಮಯ್ಯ ಬಾಯಿ ಬುಡದುಬ್ಯಾಡವೆ? ಒಂದು ಸತಿ ಹೋಗಿ ಕೊಪ್ಪಳದಲ್ಲಿ ಯಲಕ್ಷನ್ನಿಗೆ ನಿಂತಿದ್ದ. ಅದನ್ನಾರ ಗ್ಯಾಪಿಸಿಕೊಬೇಕಾಗಿತ್ತು."

"ಗ್ಯಾಪಿಸಿಕೋಬೇಕಾಗಿತ್ತು ನಿಜ. ಪೊಲೀಸ್ ವಡಿಯೋನು ಬಾಯಿಬುಡ್ತಿಲ್ಲ, ವಡಿಸಿಗಂಡೋರ ವಡಿಯೋನು ಬಾಯಿ ಬುಟ್ಟಿಲ್ಲ, ಒಟ್ನನಲ್ಲಿ ರೈತರ ಪರ ಯಾರೂ ಇಲ್ಲ ಕಣೊ. ಆ ಗುಂಡೂರಾಯ ರೈತರಿಗೆ ಗೋಲಿಬಾರ್ ಮಾಡಿಸಿದ್ದ ವರತು ಹಿಂಗೆ ಬೂಟು ಕಾಲಲ್ಲಿ ವದಿಸಿರಲಿಲ್ಲ."

"ಅವುನೇನೊ ಇಂದ್ರಾಗಾಂಧಿ ಹೆಸರಲ್ಲಿ ಪ್ರಮಾಣವಚನ ತಗಂಡಿದ್ದ, ಇವುನೇಳು ರೈತರ ಹೆಸರಲ್ಲಿ ಹಿಳಿಹಸುರು ಶಾಲೊದ್ದಕಂಡು ಪ್ರಮಾಣವಚನ ತಗಂಡಿದ್ದ, ಆದ್ರು ರೈತರ ಮ್ಯಾಲೆ ಗೋಲಿಬಾರು ಮಾಡಿ ಬೂಟುಕಾಲಲ್ಲಿ ವದಿಸಿಬುಟ್ಟ. ನಂಜುಂಡಸ್ವಾಮಿ ಇದ್ದಿದ್ರೆ ಇಂಥ ಕೆಲಸ ಮಾಡಕ್ಕೆ ಬುಡತಿದ್ರೇ?"

"ಆ ರೈತ ಸಂಗದವ್ರು ಏನಾದ್ರೊ?" ಎಂದ ಕಾಳಮಾವ.

"ಅವು ಅಲ್ಲಲ್ಲೆ ಕಾಲಹಾಕ್ತಾ ಅವೆ ಕಣ ದ್ವಡಪ್ಪ, ಕೋಡಳ್ಳಿ ಚಂದ್ರಶೇಕ್ರ ಬೆಂಗಳೂರು ನೋಡಿಕತ್ತಾ ಅವುನೆ. ಪುಟ್ಟಣ್ಣಯ್ಯ ಪಾಂಡಪುರ, ಕೆ.ಟಿ.ಗಂಗಾಧರ ಶಿವಮೊಗ್ಗ ಅವರ ವಿರೋಧಿ ಬಸವರಾಜಪ್ಪ ಊರಲ್ಲವುನೆ. ಇನ್ನ ಉತ್ತರ ಕರ್ನಾಟಕದಲ್ಲಿ ಯಾರೂ ಇಲ್ಲ. ಅಂಗಾಗಿ ರೈತ ಸಂಘ ಸತ್ತೋಗ್ಯದೆ. ಅದ್ಕೆ ಅಲವೆ ಎಡೂರಪ್ಪ ನಂಜುಂಡಸ್ವಾಮಿ ಸಮಾದಿ ಹತ್ರಕೋಗೋ ಧೈರ್ಯ ಮಾಡಿದ್ದು."

"ನೆಂಜುಂಡ ಸ್ವಾಮಿಗೆ ಮಕ್ಕಳಿಲವೆ?"

"ಅವೆ. ಒಂದು ಗಂಡು, ಒಂದೆಣ್ಣದೆ. ಮಗಳು ಪಾರಿನ್ನೋನ ಮದಿವಾಗಿ ಸುಖವಾಗ್ಯವುಳೆ. ಇನ್ನ ಮಗ ತನ್ನ ಪಾಡಿಗೆ ಅವುನೆ. ಅಲ್ಲಿಗೆ ಬಂದು ನಿಂತೋಗ್ಯದೆ ರೈತ ಸಂಗದ ಕತೆ."

"ಅಂತು ಯಲ್ಲಾರ ಕತೆನೂ ಮುಗದದೆ ಅನ್ನು."

"ಅಂಗೂ ಅನ್ನಬವುದು. ಎಲ್ಲ ಚಳುವಳಿಗಾರ್ರ ಮನೆ ಮುಂದೆ ಬೆಂಕಿ ಹಾಕೊದೊಂದು ಬಾಕಿ ಅದೆ ದ್ವಡಪ್ಪ."

"ಅದೋಗ್ಲಿ, ಇಡೀ ಊರೆಯ ಪ್ಲೇಗು ಮಾರಿಗೆ ಬಲಿಯಾದಂಗೆ ಬಿಕೋ ಅಂತಾ ಅದಲ್ಲ, ಜನ್ಯಲ್ಲ ವಲ್ಲಿಗೋದುರ್ಲ?"

"ಎಲ್ಲಿಗೂ ಹೋಗಿಲ್ಲ ದ್ವಡಪ್ಪ, ಯಲ್ಲ ಟಿವಿ ಮುಂದೆ ಕುಂತವುರೆ. ಯಾಕೆ ಅಂದ್ರೆ ನಮ್ಮೋರಿಗೂ, ಪಾಕೀಸ್ತಾನದೋರಿಗೂ ಕ್ರಿಕೆಟ್ ಮ್ಯಾಚ್ ಬಿದ್ದದೆ. ಅದನ್ನ ಈ ಟಿವಿ ಮುಂಡೆಮಕ್ಕಳು, ರಾಜಕಾರಣಿಗಳು, ಬಿಜೆಪಿಗಳು ಸೇರಿಕೊಂಡು, ಭಾರತಕ್ಕೂ-ಪಾಕೀಸ್ತಾನಕ್ಕೂ ಯುದ್ಧ ನ್ಯಡಿಯೊ ತರ ಮಾಡಿಬುಟ್ಟವುರೆ. ಬಿಜೆಪಿಗಳಂತೂ ಇದೇ ಟೈಮು ಅಂತ ಒಸಿ ಹುಡುಗ್ರ ಹಿಡಕಂಡು ಭಾರತ ಮಾತಾಕಿ ಜೈ ಅಂತ ಹೋಗಿ ಸಾಬರ ಕೇರಿಲಿ ಕೂಗಿ ಅಂತ ಕಳಿಸಿಬುಟ್ಟವುರೆ. ಅದರ ಪರಿಣಾಮನೆ ಊರು ಮಶಾಣಿದ್ದಂಗದೆ."


"ಉದ್ದಾರಾಗದಿಲ್ಲ ಬುಡೀದೇಸ!" ●

...ದುಕಿನ ಜಡ ನಿಮಿಷಗಳಲ್ಲಿ....

...ಸಿರಿಯ ಗರ ಹೊಡೆದ ಮನುಷ್ಯರು ಹೇಗಿರುತ್ತಾರೆ ಎಂಬುದಕ್ಕೆ ಇತ್ತೀಚೆಗೆ ...ಮ ಉದಾಹರಣೆ ದೊರೆತಿದೆ. ಅದನ್ನೇ ಈ ಸಲದ 'ಮರೆಯುವ ಮುನ್ನ'ದಲ್ಲಿ ...ಸುತ್ತೇನೆ. ಅದು ಜಪಾನ್ ಕುರಿತದ್ದು. 1945ರಲ್ಲಿ ಯುದ್ಧ ಮಾಡಿ ಸೋತ ...ಪಾನ್ ಕೇವಲ ಅರ್ಧ ಶತಮಾನದಲ್ಲಿ ಪೂರ್ತಿ ಚೇತರಿಸಿಕೊಂಡು ಜಗತ್ತಿನ ...ಡ್ಡ ಕೈಗಾರಿಕಾ ದೇಶವಾಗಿ ಶ್ರೀಮಂತವಾಯಿತು. ಒಂದಾನೊಂದು ಕಾಲದಲ್ಲಿ ...ರ್ಯ, ಸಾಹಸ ಮತ್ತು ಕಾವ್ಯದಲ್ಲಿ ಬತ್ತ ನಾಟಿ ಮಾಡಿ ಬೆಳೆಯುವುದರಲ್ಲಿ, ತನ್ನ ...ಚೀನ ಸಂಸ್ಕೃತಿಯನ್ನು ಪ್ರೀತಿಯಿಂದ ಬೆಳೆಸುವುದರಲ್ಲಿ ವಿಶಿಷ್ಟ ಅನ್ನಿಸಿಕೊಂಡಿದ್ದ ...ಪಾನ್, ಯುರೋಪ್ ಮತ್ತು ಅಮೆರಿಕಾದಂತೆ ಆಯಿತು. ಅಮೆರಿಕಾದ ...ಬ್ಬು ಮತ್ತು ಹುಂಬತನವನ್ನು ಬೆಳೆಸಿಕೊಂಡ ಈ ವಿಷಾದ ದೇಶ ಮೈಮರೆತದ್ದರಲ್ಲಿ, ...ಮೂಲಚೈತನ್ಯ ಮತ್ತು ಆತಂಕವನ್ನು ನಿರ್ಲಕ್ಷಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಯಾಕೆಂದರೆ ...ಪಾನ್‌ನ ಸಂಸ್ಕೃತಿ ಇರುವುದೇ ಈ ಭಯ ಮತ್ತು ಆತಂಕದಲ್ಲಿ; ಈ ಜೀವ ..., ಈ ಹೂವು ಕ್ಷಣಿಕ ಎಂದು ಕಂಡುಕೊಂಡಿರುವುದರಲ್ಲಿ, ಜಪಾನಿನ ನಾಟಕಗಳು ...ತ್ತ ಹಯಕು ಪದ್ಯ ನೋಡಿದರೆ, ಜಪಾನೀಯರು ತಮ್ಮ ಮನೆಗಳನ್ನು ...ಪ್ರದಾಯಿಕವಾಗಿ ಕಟ್ಟಿಕೊಳ್ಳುತ್ತಿದ್ದ ರೀತಿಯನ್ನು ನೋಡಿದರೆ ಇದು ತಿಳಿಯುತ್ತದೆ. ...ಕ್ಕೆ ಸುಮಾರು ಹತ್ತು ಲಕ್ಷ ಪುಟ್ಟಪುಟ್ಟ ಕವನಗಳನ್ನು ಜಪಾನೀಯರು ...ಯುತ್ತಾರೆ. ಇವು ಹಯಕುಗಳು. "ಮರಕ್ಕೆ ಹಿಂದಿರುಗಿದಂತೆ ಕಂಡ ಎಲೆ-ಅಲ್ಲ ... ನಿಜಕ್ಕೂ ಚಿಟ್ಟೆ!", "ಚಿನ್ನ, ಗ್ರೀಷ್ಮದ ಗರ್ಭದಿಂದ ಬಂದ ವಸಂತ ತಂದ ...ಹೂ-ಎರಡು ಕ್ಷಣದ ಅದ್ಭುತ!", "ನಾವಿಬ್ಬರೂ ಒಬ್ಬರನ್ನೊಬ್ಬರು ...ಡುತ್ತ ನಿಂತಿರುವಾಗಲೇ-ಬಾಡಿ ಉದುರಿದ ನಮ್ಮ ಯೌವನ!" ...ಂತಾಗಿ ಬರೆಯುವ ಜಪಾನೀಯರು. ಒಬ್ಬ ...ಗ-ಹುಡುಗಿಯನ್ನು ಪ್ರೀತಿಸಲು ಶುರು ಮಾಡುವುದೇ ಆಕೆಗೆ ... ಹಯಕು ಕವನ ಬರೆದು... ಅವಳ ಉತ್ತರ ಕೂಡ ಕವನದಲ್ಲಿ. ...ಲ ಮುಗಿಯುತ್ತದೆ, ವಸಂತ ಆಗಮಿಸುತ್ತದೆ; ವಸಂತದಲ್ಲಿ ...ದ ಹೂವುಗಳು ಕಾಯಾಗಿ ಮರವಾಗಿ ಮತ್ತೆ ಚಳಿಯಲ್ಲಿ ...; ಹಾಗೆಯೇ ಹುಟ್ಟಿದ ಮನುಷ್ಯ ತನ್ನ ಅಸ್ಥಿರ ಬದುಕನ್ನು ... ರಟ್ಟಿನ ಮನೆ ಕಟ್ಟಿಕೊಂಡು ಬದುಕುತ್ತಾನೆ; ಯಾಕೆಂದರೆ ... ಭೂಕಂಪಗಳ ದೇಶ. ಜಗತ್ತಿನ ಯಾವ ದೇಶವೂ ...ರದಷ್ಟು ಭೂಕಂಪಗಳನ್ನು ಬಲ್ಲ, ಈ ಜಪಾನೀಯರು ...ಕ್ಕ ಬಂಗಲೆಗಳಲ್ಲಿ ವಾಸಿಸಲು ಇಷ್ಟಪಡುವುದಿಲ್ಲ- ಯಾಕೆಂದರೆ ... ಕ್ಷಣದಲ್ಲಾದರೂ ಭೂಮಿ ಕಂಪಿಸಿ ಮನೆ ಅವರ ...ಂಪಿನಾಗಬಹುದು, ನಾವು ನೋಡುತ್ತಿರುವ ಬೃಹತ್ ಮರ ನಮ್ಮ ಮೇಲೆ ಬಿದ್ದುಬಿಡಬಹುದು. ಭೂತಾಯಿಯ ಗರ್ಭಕ್ಕೆ ಸರಿದು ಕಣ್ಮರೆಯಾಗಬಹುದು. ಚಳಿಗಾಲ ಮುಗಿದೊಡನೆ ಚಿಗುರು ಕಾಣಿಸಿಕೊಂಡು ಚೆರ್ರಿ ಹೂವುಗಳು ಕೊಂಬೆಯ ಮೇಲೆ ಪ್ರತ್ಯಕ್ಷವಾದಾಗ ಜಪಾನೀಯರಿಗೆ ಆನಂದ. ಆದರೆ ಅದು ಕ್ಷಣಿಕ ಆನಂದವೆಂದು ಅವರಿಗೆ ಗೊತ್ತು. ಕೆಲವೇ ನಿಮಿಷಗಳಲ್ಲಿ ಚೆರ್ರಿ ಹೂವು ಹೊರಟುಹೋಗುತ್ತವೆ. ಆದ್ದರಿಂದಲೇ ಮನುಷ್ಯನ ಬದುಕು ನಾವು ನೋಡುವ ಎಲ್ಲಾ ಚರಾಚರ ವಸ್ತುಗಳಂತೆ ಹಂಗಾಮಿ. ನಮ್ಮಲ್ಲಿ ಅರಳುವ ಖುಷಿಯಂತೆ, ನಮ್ಮ ಬದುಕಲ್ಲಿ ಕಂಡುಬರುವ ನೆಮ್ಮದಿಯಂತೆ, ನಾವು ಕಟ್ಟಿಕೊಂಡ ಮನೆಯಂತೆ, ನಾವು ಬೆಳೆಸಿದ ನಾಡಿನಂತೆ ಸಾವಿಗೆ ಬಂಧಿ.



ಮೊನ್ನೆ ಜಪಾನ್‌ನ ಕೋಬೆ ಎಂಬಲ್ಲಿ ಆದ ಭೂಕಂಪ ಭೀಕರವಾದದ್ದು, ಐದು ಸಾವಿರ ಜನ ಸತ್ತು, ಇಪ್ಪತ್ತು ಲಕ್ಷ ಜನ ಗಾಯಗೊಂಡು, ಮನೆ ಕಳೆದುಕೊಂಡು ಹಠಾತ್ತನೆ ಈ ಕ್ಷಣಿಕತೆಯನ್ನು ಅನುಭವಿಸಿದರು. ತಮ್ಮ ಕಾರು ಅತ್ಯಂತ ಸುಂದರ, ತಮ್ಮ 'ಯೆನ್' ಅಮೂಲ್ಯ, ತಮ್ಮ ಜಾಣತನ ಅನನ್ಯ ಎಂದು ತಿಳಿದಿದ್ದ ಜಪಾನೀಯರಿಗೆ ಪ್ರಕೃತಿ ಇದ್ದಕ್ಕಿದ್ದಂತೆ 'ಯಾವುದೂ ನಿರಂತರವಲ್ಲ' ಎಂದು ತೋರಿತು. ಇಪ್ಪತ್ತನೆಯ ಶತಮಾನದ ಕೊನೇ ಭಾಗದಲ್ಲಿ ಪ್ರಕೃತಿಯ ವಿರುದ್ಧ ಭೂಕಂಪದಿಂದ ರಕ್ಷಿಸಿಕೊಳ್ಳಲು ತಮ್ಮೆಲ್ಲ ಪ್ರತಿಭೆಯನ್ನು ಬಳಸಿ ಬಹುಮಹಡಿ ಕಟ್ಟಡ, ಅತ್ಯಾಧುನಿಕ ಮನೆಗಳನ್ನು ಕಟ್ಟಿದ್ದ ವಾಸ್ತುಶಿಲ್ಪಿಗಳು ತಮ್ಮ ತಿಳಿಗೇಡಿತನವನ್ನು ಕಂಡು ನಾಚಿಕೊಳ್ಳುವಂತೆ ಮಾಡಿತು ಪ್ರಕೃತಿ. ಭೂಮಿ ಇಬ್ಭಾಗವಾಯಿತು; ರಸ್ತೆಗಳು ಕುಸಿದು ವಾಹನಗಳಿಗೆ ಅಪ್ಪಳಿಸಿದವು; ಮನೆಗಳು ಛಿದ್ರಗೊಂಡು ಬೆಂಕಿಹತ್ತಿ ಉರಿಯತೊಡಗಿದವು; ಭೀಕರ ಚಂಡಮಾರುತ, ಸಮುದ್ರದ ಅಲೆಗಳು, ನೆಲನೀರು ಒಂದಾದಂಥ ಸಂದರ್ಭ... ಮನುಷ್ಯ ತನ್ನ ಎಲುಬು ಮಾಂಸದ ದೇಹ ಮತ್ತು ತಾನು ಕಟ್ಟಿದ ಗೊಂಬೆಮನೆಗಳನ್ನು ಕಂಡು ದುಃಖಪಡುವಂತಾಯಿತು. ಜಪಾನೀಯರು ತಮ್ಮ ಮೂಲಸಂಸ್ಕೃತಿಯಾದ ಭಯ ಮತ್ತು ಆತಂಕವನ್ನೊಳಗೊಂಡ ವಿನಯದತ್ತ ಬರುವಂತಾಯಿತು. ಹಯಕು ಅವರ ಮನೋಲೋಕಕ್ಕೆ ಮತ್ತೆ ಹಾದಿ... ಮಾಡಿತು.



'ಹುಷಾರ್... ನೀವು ನಡೆಸುತ್ತಿರುವ ಬದುಕಿನ ರೀತಿಯೇ ನಿಮ್ಮನ್ನು ಅಸೂಕ್ಷ್ಮರನ್ನಾಗಿ, ಭಂಡರನ್ನಾಗಿ, ನಿರ್ಜೀವಿಗಳನ್ನಾಗಿ ಮಾಡೀತು ಹುಷಾರ್!' ಎಂದು ಭೂಮಿ ಆಕಾಶ ಹೇಳಿದವು. ಬುದ್ಧನ ಸಿದ್ಧಾಂತ ಈ ಜಪಾನ್‌ನಲ್ಲಿ ಜೆನ್ ಸಿದ್ಧಾಂತವಾಗಿದ್ದೇ ಇದರಿಂದಾಗಿ. ಈ ಜಗತ್ತಿನಲ್ಲಿ ಯಾವ ಸಿದ್ಧಾಂತವೂ ಜೀವಂತವಲ್ಲ, ಮನುಷ್ಯ ತನ್ನ ತೊಳಲಾಟ ಮತ್ತು ಕಾಣ್ಕೆಯಿಂದ ತರುವ ಜೀವ ಮಾತ್ರ ಸಿದ್ಧಾಂತಕ್ಕೆ ಅರ್ಥ ತರಬಲ್ಲುದು; ಆತನ ಒಳನೋಟ ಮಾತ್ರ ಅವನನ್ನು ಸಜೀವವಾಗಿ ಇಟ್ಟಿರಬಲ್ಲದು.

ನನ್ನಲ್ಲಿ ಪುಸ್ತಕಗಳ ಮಧ್ಯೆ ಬಚ್ಚಿಟ್ಟುಕೊಂಡಿದ್ದ ಹಯಕು ಕವನಗಳ ಒಂದು ಪುಟ್ಟ ಪುಸ್ತಕವನ್ನು ತೆರೆದು ನೋಡುತ್ತೇನೆ. ಪುಟಕ್ಕೊಂದು ಚಿತ್ರವುಳ್ಳ ಸುಂದರ ಪುಸ್ತಕ. ಜಪಾನಿನ ಇತಿಹಾಸದಲ್ಲಿ ಸೇರಿಹೋಗಿರುವ ಹಯಕು ಕವಿಗಳು ಬರೆದ ಪದ್ಯಗಳು ಇಲ್ಲಿವೆ. ಬ್ಯಾಶೋ, ಬುಸನ್, ಈಸಾ, ಶಿಕಿ ಮುಂತಾದ ಕವಿಗಳ ಪುಟ್ಟಪುಟ್ಟ ಪದ್ಯಗಳು ಈಗತಾನೇ ಹುಟ್ಟಿದ ಗುಬ್ಬಚ್ಚಿಯ ಮರಿಗಳಂತೆ ಮಾತಾಡುತ್ತಿವೆ:

ಚಳಿಗಾಲದ ರಾತ್ರಿಗಳು ನನ್ನ ಮಗುವನ್ನು
ನನ್ನ ಎದೆಗೆ ಒತ್ತಿ
ಬೆಚ್ಚಗೆ ಮಾಡುತ್ತಿವೆ...
-ಶಿಕಿ

ಮೂಡುತ್ತಿರುವ ಚಳಿಗಾಲದ ಚಂದ್ರ;
ನನ್ನ ತೊಡೆ ಮೇಲಿನ ಮಗುವಿನ
ಮೇಲೆ ಬೆಳಕು ಚೆಲ್ಲುತ್ತಿದೆ.
-ಆನಿತ್ಸೂರ

ಚಳಿಗಾಲದಲ್ಲಿ ಮರ ಕತ್ತರಿಸುವ
ಕಾರ್ಮಿಕನೆ, ನಿನ್ನ ಕೊಡಲಿಯ ಏಟು
ನನಗೆ ವಸಂತದ ಮರದ ವಾಸನೆ ತರುತ್ತಿದೆ...
-ಬುಸನ್

ಹೀಗೆ ಒಂದೇ ಕಣ್ಣಲ್ಲಿ ಓದುತ್ತಾ ಮಲಗಿದ್ದೇನೆ. ನಡುರಾತ್ರಿ,
ನಾನು ಜಪಾನ್ ಬಗ್ಗೆ ಓದುತ್ತ
ನಿಮಿಷಗಳ ತಳ್ಳುತ್ತಿರುವುದನ್ನು
ಜಪಾನೀಯರಿಗೆ ತಿಳಿಸು, ಎಳೆಯ ಚಂದ್ರನೇ.....
-ಎಂದು ಕೇಳಿಕೊಳ್ಳುತ್ತೇನೆ

-ಫೆಬ್ರವರಿ 22, 1995

ವಿಷಕಂಠ ಆದನು ಭ್ರಷ್ಟಕಂಠ

ಮನುಷ್ಯನಿಗೆ ಸಹಜ ಗುಣ ಒಂದು ಇದೆ. ಅದು ಅಹಂಕಾರವೇ ಸರ್ವಸ್ವ ಎಂಬುದು. ಶಬ್ದಕೋಶದಲ್ಲಿ 'ಅ' ಇಂದ 'ಹ' ಎಂಬ ಅಕ್ಷರದವರೆಗಿನ ಎಲ್ಲ ಪದಗಳೂ ಅವನ ಕಿವಿಗೆ ಇಂಪು ಆಗಿರಬೇಕಾದರೆ ಅವನ ಪ್ರತಿಷ್ಠೆ ಹೆಚ್ಚಿಸಲೇಬೇಕು. ಆದರೆ ಧರ್ಮ ಹಾಗೂ ಧರ್ಮಶಿಕ್ಷಣ ಇದಕ್ಕೆ ಎಡೆ ಕೊಡುವುದಿಲ್ಲ, ಹೆಮ್ಮೆಪಡಬಾರದು ಎಂದು ಅಂಕುಶ ಹಾಕುತ್ತವೆ. ಇವುಗಳ ಕಾಟದಿಂದ ತಪ್ಪಿಸಿಕೊಳ್ಳಲು ಅವನು ಸತತ ಪ್ರಯತ್ನಪಡುತ್ತಾನೆ. ನಮ್ಮ ನಡತೆಗೂ ಧಾರ್ಮಿಕ ನುಡಿಗಳಿಗೂ ಹೇಗೋ ಗಂಟು ಹಾಕುತ್ತಾನೆ. ಅದನ್ನೇ ನಂಬಿ ಅದರಲ್ಲೇ ಬದುಕುತ್ತಾನೆ. ಇಂತಹ ಕಲ್ಯಾಣ ಗುಣವನ್ನು ನಾ. ಕಸ್ತೂರಿ ಅವರು 'ಉಪಾಯ ವೇದಾಂತ' ಎಂದು ಕರೆಯುತ್ತಾರೆ.

ದೇವರು ಕರುಣಾಮಯಿ ಎಂದು ಸಾಧು ಸಂತರು ಧರ್ಮಪಂಥಗಳೂ ಅದನ್ನೇ ಸಾರುತ್ತಿದ್ದವು. ಬುದ್ಧಿವಂತನಾದ ಮನುಷ್ಯ ಅದಕ್ಕೊಂದು ವ್ಯಾಖ್ಯಾನ ಬರೆದ. ದೇವರ ಕರುಣೆಗೆ ನಾವು ಪಾತ್ರರಾಗಿರಬೇಕು ಎಂದ. ನಾವು ಪಾಪದ ಕೆಸರಿನಲ್ಲಿ ಮುಳುಗಿ ಮೊರೆಯಿಟ್ಟಾಗ ಮಾತ್ರ ಇದು ಸಾಧ್ಯ; ದೇವರ ಕೃಪಾದರ್ಶನಕ್ಕೆ ನಾವು ಅವಕಾಶ ಕಲ್ಪಿಸಿಕೊಟ್ಟಾಗ ಮಾತ್ರ ಇದು ಕೈಗೂಡುವುದು ಎಂದ. ಕೆಟ್ಟು ನೆಟ್ಟಗಾದರೆ ಉಪಯೋಗವಿಲ್ಲ. ಕೊಳೆಯಲ್ಲಿ ನರಳಬೇಕು. ಅಂತಹವರನ್ನು ಮಾತ್ರ ದೇವರು ಕರೆದು ತೊಳೆದು, ಬಾಚಿ ತಬ್ಬುತ್ತಾನೆ ಎಂದು ಸಾರಿದ. ಈ ಉಪಾಯ ವೇದಾಂತ ಸೂತ್ರವನ್ನೇ ಬೆಳೆಸುತ್ತ ರಾಸ್ಪುಟಿನ್ ಎಂಬ ರಾವಣ ಸನ್ಯಾಸಿ ರಷ್ಯಾದಲ್ಲಿ ತೋರಿಕೊಂಡ. "ಪಾಪಕೂಪದಲ್ಲಿ ಬೀಳಿರಿ. ದೇವರ ಕೃಪಾಕಟಾಕ್ಷಕ್ಕೆ ಅರ್ಹರೆನಿಸಿ ಕೊಳ್ಳಿರಿ. ನಾನು ನಿಮ್ಮೊಂದಿಗೆ ಪಾಪ ಮಾಡಿ ನಿಮ್ಮನ್ನು ಅಧರ್ಮಕ್ಕೆ ನೂಕಲು ಸಿದ್ಧನಿದ್ದೇನೆ" ಎಂದ. ಸಾವಿರಾರು ಮೇಧಾವಿನಿಯರು ಅವನ ಬಲೆಗೆ ಬಿದ್ದರು.

ನಾ. ಕಸ್ತೂರಿ ಅವರ ಈ ಉಪಾಯ ವೇದಾಂತ ಸಿದ್ಧಾಂತವು ಭಾರತೀಯರಿಗೆ ಕರಗತವಾಗಿದೆ ಎಂಬುದನ್ನು ರೂಪಿಸಲು ಹಲವು ನಿದರ್ಶನಗಳನ್ನು ನೀಡಬಹುದಾದರೂ ಸ್ಥಳಾಭಾವದಿಂದ ಇದನ್ನು ಒಂದು ನಿದರ್ಶನಕ್ಕೆ ಸೀಮಿತಗೊಳಿಸಬೇಕಾಗಿದೆ. ಉಪಾಯ ವೇದಾಂತ ಸಿದ್ಧಾಂತಿ ಎಂಬ ಬಿರುದಿಗೆ ಸಕಲ ಅರ್ಹತೆಗಳನ್ನು ಉಳ್ಳಂತಹ ಸನ್ಮಾನ್ಯ ಯಡ್ಯೂರಪ್ಪನವರಿಗೆ ಸಂಬಂಧಿಸಿದ ಇತ್ತೀಚಿನ ತಾಜಾ ಉದಾಹರಣೆ ಇದು.

ಭಿನ್ನಮತ ಎಂಬುದನ್ನು ನಕ್ಷೆಯ ಮೂಲಕ ತೋರಿಸುವುದಾದರೆ ಅದು ಬುಸ್ ಅಂತ ಮೇಲೇರಿ ಠುಸ್ ಅಂತ ಕೆಳಕ್ಕಿಳಿಯುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಸಂಬಂಧಿಸಿದ ವೋಲ್ಪದರದ ನಾಯಕಮಣಿಗಳಿಗೆ ಸಂದಾಯಿಸಿದ ಹಣದ ಮೂಟೆಯೇ ಹೀಗೆ ಬುಸ್ ಎಂದು ಮೇಲೇರಿದ್ದ ಭಿನ್ನಮತ ಠುಸ್ ಎಂದು ಕೆಳಗಿಳಿಯಲು ಕಾರಣ ಎಂದು ಹಲವರು ವ್ಯಾಖ್ಯಾನಿಸುತ್ತಾರೆ. ಆದರೆ ಇದರಲ್ಲಿ ನಮಗೆ ನಂಬುಗೆ ಇಲ್ಲ; ಯಡ್ಯೂರಪ್ಪನವರ ಉಪಾಯ ವೇದಾಂತ ಸಿದ್ಧಾಂತವೇ ಇದಕ್ಕೆ ಕಾರಣ ಎಂದು ನಾವು ನಂಬಿದ್ದೇವೆ. ಉದಾಹರಣೆಗೆ ಈ ಘಟನೆ ಪರಾಂಬರಿಸುವಂತವರಾಗಿ.

ಬುಸ್ ಎಂದು ಭಿನ್ನಮತ ಏರಿ ಅದರ ನಾಯಕರು ದೆಹಲಿಗೆ ವಿಮಾನ ಏರಿದಾಗ ಯಡ್ಯೂರಪ್ಪನವರು ನಂಜುಂಡೇಶ್ವರನನ್ನು ಹಿಡಿದರು. ನಂಜನಗೂಡಿನ ದೇವಾಲಯವೇ ಅವನ ವಾಸಸ್ಥಾನ ಎಂದು ತಿಳಿದಿದ್ದ ಸನ್ಮಾನ್ಯರು ಅಲ್ಲಿಗೆ ದಯ ಮಾಡಿಸಿದರು. ನಂಜುಂಡೇಶ್ವರನ ಸನ್ನಿಧಿಯಲ್ಲಿ ಒಂದು ನೂರ ಒಂದು ಋತ್ವಿಕರಿಂದ ಶತರುದ್ರಪಾರಾಯಣ ಮಾಡಿಸಿದರು. ಮಾಡಿದ ಪಾಪವನ್ನು ಪೂಜೆಸಿ ಕಳಕೊ



ಎಂಬ ನಾಣ್ಣುಡಿಗೆ ಅನುರೂಪವಾಗಿ ಪಠಿಸಿದ ಸ್ತೋತ್ರದಿಂದ ಸಂತೃಪ್ತಿಗೊಂಡ ಆ ದೇವ ಮೆಚ್ಚಿ ತಲೆದೂಗಿದ. ಇಂತಹ ಭಕ್ತ ಶ್ರೇಷ್ಠನಿಗೆ ದರ್ಶನ ನೀಡಲು ತುದಿಗಾಲಿನಲ್ಲಿ ನಿಂತಿದ್ದ. (ದೇವತೆಗಳ ಪಾದ ನೆಲವನ್ನು ಸೋಂಕುವುದಿಲ್ಲವಲ್ಲಾ ಎಂಬ ದೈವೀಪ್ರಜ್ಞೆ ಇರುವವರು ಶಂಕಿಸುವುದಾದರೆ ತಹತಹಿಸುತ್ತಿದ್ದ ಎಂದೇ ಕರೆಯೋಣವಂತೆ).

ಭಕ್ತನ ಇಷ್ಟಾರ್ಥಗಳನ್ನು ಪೂರೈಸಬೇಕೆಂಬ ಮನೋಇಚ್ಛೆಯಿಂದ ಇರಬೇಕಾದರೆ ಆ ಭಕ್ತ ಶಿರೋಮಣಿಗೆ ಮಾಧ್ಯಮದವರು ಎಂಬ ನಿರಂತರ ಪೀಡೆಗಳು ಗಂಟುಬಿದ್ದದ್ದು ಗೋಚರಿಸಿತು. ಅವರಲ್ಲಿ ನಾಸ್ತಿಕ ಪಿಶಾಚಿಗಳೂ ಇದ್ದವು. ಹಿಂದಿನ ಒಂದು ನಿದರ್ಶನ ನೆನಪಿಗೆ ಬಂದಿತು. ಪಾಪಕಾರ್ಯ ಎಸಗುವುದೇ ತನ್ನ ಜೀವನದ ಪರಮೋದ್ದೇಶ ಎಂದು ನಂಬಿದ್ದ ಶ್ರೀಮಂತನೊಬ್ಬ ಮರಣಶಯ್ಯೆಯಲ್ಲಿದ್ದ. ನಾರಾಯಣ ಎಂಬ ಹೆಸರಿನ ಮಗನಿಗೆ ಯಾವುದೋ ಸಾಂಸಾರಿಕ ಗೋಪ್ಯ ತಿಳಿಸಬೇಕಿತ್ತು, ಮಗನನ್ನು ಕರೆದ. ನಾರಾಯಣ ಎನ್ನುವಷ್ಟರಲ್ಲಿ ಅವನ ಪ್ರಾಣಪಕ್ಷಿ ಹಾರಿಹೋಯಿತು. ಉದ್ದೇಶ ಏನೇ ಇದ್ದಿರಬಹುದು. ಕೊನೆಯ ಗಳಿಗೆಯಲ್ಲಿ ದೈವಸ್ಮರಣೆ ಮಾಡಿದ್ದ ಎಂದು ದೇವತೆಗಳು ನಂಬಿದರು! ಅಷ್ಟರಿಂದಲೇ ತೃಪ್ತಿಗೊಂಡ ದೇವತೆಗಳು ನರಕವಾಸಕ್ಕೆ ಸರ್ವವಿಧದಲ್ಲೂ ಹಕ್ಕುದಾರನಾಗಬೇಕಾಗಿದ್ದ ಅವನನ್ನು ಸ್ವರ್ಗಕ್ಕೇರಿಸಿದ್ದರು! ಬೂಟಾಟಿಕೆಗೆ ನಾರಾಯಣ ಎಂದವನೇ ಹೀಗೆ ಸ್ವರ್ಗಾರೋಹಣ ಮಾಡಲು ಅರ್ಹನೆಂದ ಮೇಲೆ ತನ್ನ ನಿಜ ದರ್ಶನ ಮಾಡಿದ ಪಾಪಿ ನಾಸ್ತಿಕರೂ ಅದಕ್ಕೆ ಅರ್ಹರಾಗುವರಲ್ಲಾ ಎಂಬ ಆತಂಕದಿಂದ ಕೊಂಚ ತಡೆದು ನಿಂತ. ಆ ಪಾಪವೃಂದ ಭಕ್ತ ಶ್ರೇಷ್ಠನ ವಿರುದ್ಧ ಸೆಟೆದು ನಿಂತಿರುವ ಭಿನ್ನ ಮತೀಯರ ಕುರಿತು ಪ್ರಶ್ನಿಸಲಾಗಿ.... ಆ ಭಕ್ತ ಶ್ರೇಷ್ಠನು ಯಾವುದೇ ಭಯ, ಭೀತಿ, ಹಿಂಜರಿಕೆ ಇಲ್ಲದೆ 'ನಮ್ಮಲ್ಲಿ ಯಾವುದೇ ಭಿನ್ನಮತ ಇಲ್ಲ, ಇದೆಲ್ಲ ಮಾಧ್ಯಮಗಳ ಸೃಷ್ಟಿ. ನಂಜುಂಡೇಶ್ವರನ ಮೇಲೆ ಆಣೆ ಇಟ್ಟುಹೇಳುತ್ತೇನೆ. ನಾವೆಲ್ಲರೂ ಒಂದಾಗಿಯೇ ಇದ್ದೇವೆ' ಎಂದುಬಿಟ್ಟ! ಗಡಗಡ ನಡುಗಿದ ನಂಜುಂಡ. ಸುಳ್ಳು ಹೇಳಿದ್ದಕ್ಕಲ್ಲ, ತನ್ನ ಮೇಲೆ ಆಣೆ ಇಟ್ಟು ಹಾಗೆ ಹೇಳಿದ್ದಕ್ಕೆ.

ಈತನೇನು ಭಕ್ತನೋ ಶತ್ರುವೋ ಎಂದು ವಿಚಲಿತನಾದ. ಈತ ಶಾಪಯೋಗ್ಯನೇ ಪರಂತು ಆಶೀರ್ವಾದ ಯೋಗ್ಯನಲ್ಲ ಎಂದು ತೀರ್ಮಾನಕ್ಕೆ ಬರುವುದರಲ್ಲಿದ್ದ ಮತ್ತೆ ಯೋಚಿಸಿದ. ಇಂತಹ ಪೂಜೆ ಉದ್ದೇಶರಹಿತವಲ್ಲ, ಇವನ ಉದ್ದೇಶ ಏನಿರಬಹುದು ಎಂದು ತಿಳಿಯಲು ಕುತೂಹಲನಾದ. ಅವನೇ ಈ ಪ್ರಶ್ನೆ ಎತ್ತುವಂತಿರಲಿಲ್ಲವಲ್ಲ, ಅವನ ಪುಣ್ಯಕ್ಕೆ ನಾಸ್ತಿಕ ವೃಂದವೇ ಈ ಪ್ರಶ್ನೆ ಎತ್ತಿತು. ಆ ಭಕ್ತ ಶ್ರೇಷ್ಠನೋ ಯಾ ಶತ್ರು ಶ್ರೇಷ್ಠನೋ' ಈ ವರ್ಷ ಉತ್ತಮ ಮಳೆಯಾಗಿ ಕೆರೆ, ಕಟ್ಟಡಗಳು, ಜಲಾಶಯಗಳು ಭರ್ತಿಯಾಗಿ ರಾಜ್ಯದಲ್ಲಿ ಸಮೃದ್ಧಿ ನೆಲೆಸುವಂತೆ ಮಾಡು ಎಂದು ಭಗವಂತನದಲ್ಲಿ ಬೇಡಿಕೊಂಡಿದ್ದೇನೆ' ಎಂದ! ನಂಜುಂಡೇಶ್ವರನಿಗೆ ಖಾತರಿಯಾಯಿತು–ಈತ ರಾವಣ ಸನ್ಯಾಸಿ ಎಂದು. ಯಾಕೆಂದರೆ ಕೆರೆಕಟ್ಟೆ ವಿಷಯ ತನಗೆ ತಲುಪಿಯೇ ಇರಲಿಲ್ಲ!



ಎಚ್.ಎಲ್. ಕೇಶವಮೂರ್ತಿ

ಅಣಕ

ಶಾಪ ನೀಡಲು ಮುಂದಾಗುವಷ್ಟರಲ್ಲಿ.... ತಾನು ತಿಳಿದೋ ತಿಳಿಯದೆಯೋ ತಪ್ಪು ಮಾಡಿದ್ದಲ್ಲ ಮನ್ನಿಸು ಎಂದು ತನ್ನಲ್ಲಿ ಬೇಡಿಕೊಂಡದ್ದು ನೆನಪಿಗೆ ಬಂತು. ನಂಜುಂಡೇಶ್ವರ ಡೋಲಾಯಮಾನ ಸ್ಥಿತಿಗೆ ಬಂದ. ಸಾಯುವ ಸಮಯದಲ್ಲಿ ನಾರಾಯಣ ಎಂದು ಮಗನನ್ನು ಕೂಗಿದ್ದಕ್ಕೇ ಪಾಪಿಗೆ ಸ್ವರ್ಗಾರೋಹಣ ಮಾಡಿಸಿದ ಉದಾತ್ತವೃಂದದ ಸದಸ್ಯನಲ್ಲವೇ ಅವನು.... ಶತ್ರು ಭಕ್ತನಾಗಿ ಗೋಚರಿಸಿದ! ಭಕ್ತ ಶ್ರೇಷ್ಠನ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಏನು ಮಾಡಬೇಕು ಎಂಬುದನ್ನು ಲೋಕಕಲ್ಯಾಣಕ್ಕಾಗಿ ವಿಷವನ್ನೇ ತನ್ನ ಗಂಟಲಲ್ಲಿ ಹಿಡಿದುಕೊಂಡ ವಿಷಕಂಠನಿಗೆ ತಿಳಿಸಿಕೊಡಬೇಕಾಗಿಲ್ಲವಲ್ಲಾ... ಭಕ್ತ ಶ್ರೇಷ್ಠನ ಭ್ರಷ್ಟಾಚಾರವನ್ನೆಲ್ಲ ಮುಷ್ಟಿಯೊಳಗೆ ಹಿಡಿದ. ಬಾಯಿಯೊಳಗೆ ಹಾಕಿಕೊಂಡ. ಹೊಟ್ಟೆಯೊಳಕ್ಕೆ ಹೋಗದಂತೆ ಗಂಟಲಲ್ಲೇ ತಡೆದ. ವಿಷಕಂಠ ಭ್ರಷ್ಟಕಂಠನೂ ಆದ!

ಹಾಗಾದರೆ ಸನ್ಮಾನ್ಯ ಯಡ್ಯೂರಪ್ಪನವರು ಇನ್ನು ಮುಂದೆ ಭ್ರಷ್ಟಾಚಾರರಹಿತ ಆಡಳಿತ ನೀಡುವರೆ ಎಂದು ಕೇಳುವವರಿಗೆ ಒಂದು ಮರುಪ್ರಶ್ನೆ. ಈಶ್ವರ ವಿಷ ಕುಡಿದು ವಿಷಕಂಠ ಆದ. ಹಾಗಂತ ಪ್ರಪಂಚದಿಂದ ವಿಷವೇ ಮಾಯ ಆಯಿತಾ? ಇಲ್ಲವಲ್ಲ, ಹಾಗೇನೇ ಇದೂವೆ. ಭ್ರಷ್ಟತೆ ಇರುತ್ತೆ, ಇದರ ಪಾಪ ನಿವಾರಣೆಗೆ ಇದ್ದೇ ಇದೆ ಉಪಾಯ ವೇದಾಂತ–ಮತ್ತೊಂದು ಶತರುದ್ರಪಾರಾಯಣ ಇದೊಂದು ತರಹ ಹಳೆ ಪಾಪ ಕಳೆದುಕೊಂಡು ಹೊಸ ಪಾಪಕ್ಕೆ ರಿನ್ಯೂಯಲ್ ಮಾಡಿಸಿದಂಗೆ!

ನೀತಿ: ಬ್ರಹ್ಮಾಂಡ ಭ್ರಷ್ಟತೆ ಮಾಡಿ. ಶತರುದ್ರಪಾರಾಯಣ ಮಾಡಿ ಪಾಪ ಪರಿಹಾರ ಮಾಡಿಕೊಳ್ಳಿ. ಮುಂದಿನ ಪಾಪಕ್ಕೆ ತಯಾರಾಗಿ!

ಆಚಾರತ್ರಯರಿಗೆ ಕಾಣಿಸದಿದ್ದ ಇತರೆ ಧರ್ಮಗಳು

ಏಪ್ರಿಲ್ 6, 2011 ಗೌರಿ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದ ವರದಿ 'ಕೊಳ್ಳೆಯೇ ಕೋರೆಯ ಧರ್ಮವಯ್ಯಾ!' ನೊಂದ ತಂದೆ ತಾಯಿಗಳ ದನಿಯಾಗಿ ಮೂಡಿಬಂದಿದೆ. ಒಳ್ಳೆಯ ಶಿಕ್ಷಣ ಕೊಡಿಸಬೇಕೆಂಬ ಆಸೆ ಪ್ರತಿಯೊಬ್ಬ ಪೋಷಕರಿಗೂ ಇರುವುದು ಸಹಜ. ನಮ್ಮಂತಹ ಮಧ್ಯಮವರ್ಗದ ಜನರ ಕನಸೂ ಎಷ್ಟೇ ಕಷ್ಟ ಆದರೂ ಮಕ್ಕಳನ್ನು ಒಳ್ಳೆಯ ಶಾಲೆಯಲ್ಲಿ ಓದಿಸಬೇಕು, ಅವರಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂಬುದು. ನಾವು ಗಂಡ-ಹೆಂಡತಿ ಇಬ್ಬರೂ ಪ್ರೈವೇಟ್ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದರೂ ನಮಗೆ ಬರುವ ಸಂಬಳದಲ್ಲಿ ಮನೆ ಬಾಡಿಗೆ, ಖರ್ಚು, ಮಕ್ಕಳ ಸ್ಕೂಲ್ ಫೀಜು (ಇಬ್ಬರು ಮಕ್ಕಳು) ಎಲ್ಲ ಹೋಗಿ ಕಾಸು ಉಳಿಸುವುದೇ ಕಷ್ಟವಾಗಿದೆ.

ಹೀಗಿರುವಾಗ ಕೋರೆಯವರ ಕೆಎಲ್ಇ ಶಾಲೆಯಲ್ಲಿ ಪ್ರತಿ ತಿಂಗಳು ಸ್ಕೂಲ್ ಮ್ಯಾಗಜಿನ್‌ಗೆ ಇಷ್ಟು ಕೊಡಿ, ಸ್ಪೋರ್ಟ್ಸ್‌ಗೆ ಇಷ್ಟು ಕೊಡಿ ಎಂದು ಕೇಳುತ್ತಿದ್ದರೆ ನಮ್ಮಂತವರು ಎಲ್ಲಿಂದ ತಂದು ಕೊಡುವುದು? ಹೋಗಿ ಕೇಳಿದರೆ 'ಕಷ್ಟವಾದರೆ ಇಲ್ಲಿ ಯಾಕೆ ಸೇರಿಸಿದಿರಿ? ಅಂತಹ ಸ್ಕೂಲ್‌ಗಳು ಇವೆಯಲ್ಲ ಅಲ್ಲಿಗೆ ಸೇರಿಸಿ' ಎಂದು ಇದೇ ಪ್ರಿನ್ಸಿಪಾಲ್ (ಗೀತಿಕಾ ಕರೋಲ) ಹೇಳುತ್ತಾರೆ. ಇಷ್ಟಾದರೂ ಈ ಶಾಲೆಯಲ್ಲಿ ಒಳ್ಳೆಯ ಶಿಕ್ಷಣ ಕೊಡುತ್ತಿದ್ದಾರ ಎಂದರೆ ಅದೂ ಇಲ್ಲ, ಇಲ್ಲಿ ಉತ್ತಮ ಶಿಕ್ಷಕರೇ ಇಲ್ಲ, ಬೇರೆ ಶಾಲೆಗೆ ಸೇರಿಸುವುದೆಂದರೆ ಇವರು ತೆಗೆದುಕೊಂಡ ಡೊನೇಷನ್ ವಾಪಸ್ಸು ಕೊಡುವುದಿಲ್ಲ, ಮತ್ತೆ ಬೇರೆ ಶಾಲೆಗೆ ಡೊನೇಷನ್ ಕೊಡಲಾಗದೆ ಅತಂತ್ರರಾಗಿದ್ದೇವೆ. ನನ್ನಂತಹ ನೂರಾರು ತಂದೆತಾಯಿಗಳ ನೋವಿಗೆ ದನಿಯಾದ ನಿಮ್ಮ ಪತ್ರಿಕೆಗೆ ಧನ್ಯವಾದಗಳು.

-ನೊಂದ ದಂಪತಿಗಳು
ಕಮಲ, ನಾಗರಾಜ್



ನಮ್ಮ ದೇಶದ ಸೌಹಾರ್ದ ಪರಂಪರೆಯ ವಿವಿಧ ಮುಖಗಳನ್ನು ತಮ್ಮ 'ಕಂಡಹಾಗೆ' ಸಂಪಾದಕೀಯದಲ್ಲಿ ಓದಿದ ಮೇಲಾದರೂ ಎಲ್ಲಾ ಧರ್ಮಗಳಲ್ಲೂ ಇರುವ ಬಾವಿಯೊಳಗಿನ ಕಪ್ಪೆಯಂತಹ ಮನೋಧರ್ಮದವರಲ್ಲಿ ಕೆಲವರಾದರೂ ಬದಲಾದರೆ ತಮ್ಮ ಶ್ರಮ ಸಾರ್ಥಕ.



ಭಾರತದಲ್ಲಿ ಸ್ಥಳೀಯವಾಗಿ ಹುಟ್ಟಿದ ಹೊಸ ಧರ್ಮ, ಉಪಧರ್ಮಗಳಲ್ಲದೇ ವಿದೇಶಿ ಧರ್ಮಗಳೂ ಒಂದೂವರೆ ಸಾವಿರ ವರ್ಷಗಳ ಹಿಂದೆಯೇ ಭಾರತಕ್ಕೆ ಬಂದವು. ಕೇರಳಕ್ಕೆ 5-6ನೇ ಶತಮಾನದಲ್ಲೇ ಸಿರಿಯಾದಿಂದ ಕ್ರೈಸ್ತ ಧರ್ಮ ಹಾಗೂ ಇಸ್ರೇಲ್‌ನಿಂದ ಯಹೂದಿ ಧರ್ಮಗಳು ಬಂದು ನೆಲೆಯೂರಿದವು. ಇದರ ಅರ್ಥ ಶಂಕರಾಚಾರ್ಯರ ಕಾಲಕ್ಕೆ ಈ "ನಿರಾಕಾರರೂಪದ ಏಕದೇವೋಪಾಸನೆಯ" ಧರ್ಮಗಳು ಕೇರಳದಲ್ಲಿ ನೆಲೆಯೂರಿ ಇನ್ನೂರು ವರ್ಷಗಳಾಗಿದ್ದವು. ಆದರೆ ಶಂಕರಾಚಾರ್ಯರ ಯಾವುದೇ ಕೃತಿಯಲ್ಲಿ ಅವರು ತಮ್ಮ ನೆರೆಯಲ್ಲೇ ಇರುವ ಈ ವಿಭಿನ್ನ ತತ್ವಗಳುಳ್ಳ ಧರ್ಮಗಳ ಬಗ್ಗೆ ಕುತೂಹಲಕ್ಕಾದರೂ ಅಧ್ಯಯನ ಮಾಡಿದ ಬಗ್ಗೆ ಉಲ್ಲೇಖವಿಲ್ಲ.

ಅದರಂತೆ 11ನೇ ಶತಮಾನದಲ್ಲಿ ಇಸ್ಲಾಂ ಧರ್ಮ ದೊಡ್ಡ ರೀತಿಯಲ್ಲಿ ಭಾರತವನ್ನು ಪ್ರವೇಶಿಸಿತು. 12ನೇ ಶತಮಾನದ ರಾಮಾನುಜಾಚಾರ್ಯರಾಗಲಿ, 14ನೇ ಶತಮಾನದ ಮಧ್ವಾಚಾರ್ಯರಾಗಲಿ ಇಂತಹ "ಜಾತಿವಿಹೀನ" ಹೊಸ ಧರ್ಮದ ಬಗ್ಗೆ ಒಂದಿಷ್ಟೂ ಕುತೂಹಲ ತೋರದಿರುವುದು ಆಶ್ಚರ್ಯ ಹುಟ್ಟಿಸುತ್ತದೆ.

ಒಂದು ವೇಳೆ ಈ ಆಚಾರ್ಯತ್ರಯರು ಹಾಗೂ ಆಗಿನ ಇತರ ಹಿಂದೂ ಸಂತರು ಯಹೂದಿ, ಕ್ರೈಸ್ತ, ಇಸ್ಲಾಂನಂತಹ 'ನಿರಾಕಾರ ರೂಪದ' ಏಕದೇವೋಪಾಸನೆಯುಳ್ಳ ಧರ್ಮಗಳನ್ನು ಆಳವಾಗಿ ಅಧ್ಯಯನ ಮಾಡಿದ್ದರೆ, ಆಗಲೂ ಅವರು ಮಾನವರೂಪಿ ಬಹುಸಂಖ್ಯೆ ದೇವರುಳ್ಳ, ದೇವರಲ್ಲೂ ಗಂಡು-ಹೆಣ್ಣು ಮೇಲು-ಕೀಳೆಂಬ ಭೇದವುಳ್ಳ, ಮನುಷ್ಯರಂತೆ ಅರಿಷಡ್ವರ್ಗ ಹೊತ್ತ ದೇವರುಳ್ಳ ಹಿಂದೂ ಧರ್ಮದ ಪುನರುತ್ಥಾನಕ್ಕೆ ಮನಃಪೂರ್ವಕವಾಗಿ ಶ್ರಮಿಸುತ್ತಿದ್ದರೋ ಎಂಬುದು ಜಿಜ್ಞಾಸೆಯ ವಿಷಯ.

ದೇವರೇ ಇಲ್ಲ ಎನ್ನುವ ಬೌದ್ಧ ಹಾಗೂ ಜೈನಧರ್ಮಗಳನ್ನು ವಾಮ ಮಾರ್ಗದಿಂದ ಆಚಾರ್ಯತ್ರಯರು ಆಪೋಶನ ತೆಗೆದುಕೊಂಡಷ್ಟು ಸುಲಭವಾಗಿ, ದೇವರಿದ್ದಾನೆ ಆದರೆ ಒಬ್ಬನೇ ಹಾಗೂ ಅವನು ಕೇವಲ ಚೇತನ ರೂಪಿ ಅನ್ನುವ ಧರ್ಮಗಳನ್ನು ಅಪೋಶನ ತೆಗೆದುಕೊಳ್ಳುವುದು ಸಾಧ್ಯವಿತ್ತೆ ಎಂಬುದು ಕೆಲವರ ಪ್ರಶ್ನೆ

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಏಪ್ರಿಲ್ 6 ರ ಸಂಚಿಕೆಯಲ್ಲಿ ಹಿರಿಯ ಲೇಖಕಿ ಸಾರಾ ಅಬೂಬಕರ್ ಸಿನಿಮಾ ನಿರ್ಮಾಪಕರಿಂದ ತಮಗಾದ ವಂಚನೆ ಕುರಿತು ಬರೆದಿದ್ದಾರೆ. ನ್ಯಾಯ ದೊರಕಿಸಿಕೊಳ್ಳಲು ಅವರು ಕಾನೂನು ಸಮರಕ್ಕೂ ಇಳಿದಿದ್ದಾರೆ. ಅವರ ಹೋರಾಟದ ಮನೋಭಾವ ನಮಗೆಲ್ಲರಿಗೂ ಮಾದರಿಯಂತಿದೆ. ಆದರೆ ಅವರು ತಮ್ಮ ಲೇಖನದಲ್ಲಿ ಬಳಸಿದ ಒಂದು ವಾಕ್ಯದ ಬಗ್ಗೆ ನನಗೆ ತಕರಾರಿದೆ.

"......ನಾನು ಈ ಕಾದಂಬರಿ ಬರೆದಾಗ ನನ್ನ ಮೇಲೆ ಆಕ್ರಮಣ ಮಾಡಿದ ಜನಾಂಗವೇ ಈಗ ನನ್ನ ಕಾದಂಬರಿಯನ್ನು ಕದ್ದು ಚಲನಚಿತ್ರ ನಿರ್ಮಿಸಿದ್ದಾರೆ" ಎಂದು ಅವರು ಬರೆದಿದ್ದಾರೆ.

ಮೇಲಿನ ವಾಕ್ಯದಲ್ಲಿ ಬಳಸಿರುವ ಪರಿಭಾಷೆ ಮತ್ತು ಈ ಮಾತುಗಳು ಹೇಳುತ್ತಿರುವ ದೃಷ್ಟಿಕೋನ ಅಪ್ಪಟ ಸಂಘಪರಿವಾರದ್ದಾಗಿದೆ.

ಒಳ್ಳೆಯತನ ಅಥವಾ ವಂಚಕತನ ತೀರಾ ವ್ಯಕ್ತಿಗತವಾದವು. ಅದನ್ನೊಂದು ಜನಾಂಗಕ್ಕೆ ಆರೋಪಿಸುವುದರಿಂದ ಏನೆಲ್ಲಾ ದುರಂತಗಳು ಸಂಭವಿಸುತ್ತವೆಂಬುದನ್ನು ಕೋಮುಸೌಹಾರ್ದ ಚಳವಳಿಗಳಲ್ಲಿ ಭಾಗಿಯಾಗುವ ಸಾರಾ ಅಬೂಬಕರ್ ಅವರಿಗೆ ತಿಳಿಸಿ ಹೇಳಲು ಅಗತ್ಯವಿದೆಯೇ?

-ಸರ್ಜಾಶಂಕರ್ ಹರಳಿಮಠ, ಶಿವಮೊಗ್ಗ


...ನಿಗೆ ಸರಿಸಮನಾದ ಖಳನಟ ...ಂಚಿನಕಂಠದ ರವಿಶಂಕರ್!

...ದಿನ ಕಾಲದ ಪ್ರಖ್ಯಾತ ಖಳನಾಯಕರಾದ ...ನಿ, ಟೈಗರ್ ಪ್ರಭಾಕರ್, ಸುಧೀರ್ ...ದವರನ್ನು ನೆನಪಿಸುವ ಖಳನಟನೊಬ್ಬ ಕನ್ನಡ ...ಕ್ಕೆ ದೊರಕಿದ್ದಾನೆ. ಆತನ ಹೆಸರು ರವಿಶಂಕರ್.

...ಶಂಕರ್ ಎಂದಾಕ್ಷಣ ಪ್ರೇಕ್ಷಕರಿಗೆ ಕನ್‌ಫ್ಯೂಸ್ ...ದು ಸಹಜ. ಕಿರುತೆರೆಯಿಂದ ಬೆಳ್ಳಿತೆರೆಗೆ ಹಾರಿ ...' ಚಿತ್ರದಿಂದ ನಾಯಕ ಪಟ್ಟ ಅಲಂಕರಿಸಿದ ...ರೇ ಬೇರೆ, ನಾವೀಗ ಹೇಳುತ್ತಿರುವ ಖಳನಾಯಕ ...ರೇ ಬೇರೆ. ಈ ರವಿಶಂಕರ್ ಹಲವಾರು ವರ್ಷಗಳ ...ನ್ನಡ ಚಿತ್ರರಂಗಕ್ಕೆ ನಾಯಕನಾಗಿ ...ದ ಡೈಲಾಗ್ ಕಿಂಗ್ ಸಾಯಿ ...ರವರ ಸಹೋದರ.

...ನೆ ನೋಡಲು ಥೇಟ್ ಸಾಯಿ ... ತರಹ ಕಾಣಿಸುವ ರವಿಶಂಕರ್ ...ೋದರನಂತೆ ಅತ್ಯುತ್ತಮ ಕಂಠದಾನ ... ಕೂಡ ಹೌದು. ತೆಲುಗು ...ಗದಲ್ಲಿ ಈಗಾಗಲೇ ಸುಮಾರು ... ಸಾವಿರಕ್ಕೂ ಹೆಚ್ಚು ಚಿತ್ರಗಳಿಗೆ ...ನ ಮಾಡಿರುವ ರವಿಶಂಕರ್ ... ಕಂಚಿನ ಕಂಠವನ್ನು ಹೊಂದಿದ್ದಾರೆ. ...ರ ನಡುವಿನ ಒಂದೇ ಒಂದು ...ಂದರೆ ಸಾಯಿಕುಮಾರ್ ನಾಯಕ ... ಗಾಂಧಿನಗರಕ್ಕೆ ಕಾಲಿಟ್ಟರೆ, ...ರ್ ಕರ್ನಾಟಕಕ್ಕೆ ಬಂದಿದ್ದು ನಿರ್ದೇಶಕನಾಗಿ. ಕೆಲವು ... ಹಿಂದೆ ಮಾಲಾಶ್ರೀ ನಟಿಸಿದ 'ದುರ್ಗಿ' ಚಿತ್ರವನ್ನು ...ರವಿಶಂಕರ್ ನಿರ್ದೇಶಿಸಿದ್ದರು.

...ದಲು ತಮ್ಮ ಮುಖಕ್ಕೆ ಬಣ್ಣಹಚ್ಚಿಕೊಂಡು ಬೆಳ್ಳಿ ...ರೆ ವಿಜೃಂಭಿಸಬೇಕೆಂಬ ಗೀಳು ಇವರಿಗಿರಲಿಲ್ಲ. ...ಬದಲಿಗೆ ನಿರ್ದೇಶಕನಾಗಿ ಒಳ್ಳೆಯ ಚಿತ್ರವನ್ನು ...ಕು ಎಂಬುದೇ ಆತನ ಮನದಾಳದ ಇಂಗಿತವಾಗಿತ್ತು. ...ಗಾಂಧಿನಗರದಲ್ಲಿ ಯಾವುದೂ ಅಂದುಕೊಂಡಂತೆ ...ದಿಲ್ಲ.



ಸಾಯಿಕುಮಾರ್

ರವಿಶಂಕರ್ ನಿರ್ದೇಶನದ 'ದುರ್ಗಿ' ಬಾಕ್ಸಾಫೀಸ್‌ನಲ್ಲಿ ಚಮತ್ಕಾರ ಮಾಡದಿದ್ದರಿಂದ ಅವರಿಗೆ ಆ ನಂತರ ಬೇಡಿಕೆ ಇರಲೇ ಇಲ್ಲ. ಆಗ ಅನಿರೀಕ್ಷಿತವಾಗಿ ನಟನೆಯತ್ತ ತೆರಳಿದ ರವಿಶಂಕರ್‌ಗೆ ಈಗ ಅದ್ಭುತವಾದ ಸ್ವಾಗತ ಸಿಕ್ಕಿದೆ.

ಪ್ರಜ್ವಲ್ ದೇವರಾಜ್ ನಾಯಕನಾಗಿ ನಟಿಸಿದ 'ಕೋಟೆ' ಚಿತ್ರದಲ್ಲಿ ರವಿಶಂಕರ್ ಖಳನಾಯಕ. ಆದರೆ ವಿಮರ್ಶಕರು, ಪ್ರೇಕ್ಷಕರು ಮತ್ತು ಉದ್ಯಮದವರು ಮೆಚ್ಚಿದ್ದು ರವಿಶಂಕರ್ ಅವರ ಖಳನಾಯಕನ ಅಬ್ಬರ ಮತ್ತು ಆರ್ಭಟವನ್ನು! ಈ ಚಿತ್ರ ರವಿಶಂಕರ್‌ಗೆ ತಾರಾಮೌಲ್ಯವನ್ನು ತಂದುಕೊಟ್ಟಿತು. ಇದೀಗ ಬಿಡುಗಡೆಯಾಗಿರುವ 'ಕೆಂಪೇಗೌಡ' ಚಿತ್ರದಲ್ಲೂ ರವಿಶಂಕರ್ ಸುದೀಪ್‌ಗೆ ಸರಿಸಮಾನವಾಗಿ ನಟಿಸಿ, ತಾನೊಬ್ಬ ಸಮರ್ಥ ಖಳನಾಯಕ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಸದ್ಯದಲ್ಲೇ ಬಿಡುಗಡೆಯಾಗಲಿರುವ 'ದಂಡಂ ದಶಗುಣಂ' ಚಿತ್ರದಲ್ಲಿ ಯುವ ನಾಯಕ ನಟ ಚಿರಂಜೀವಿ ಸರ್ಜಾನನ್ನು ರವಿಶಂಕರ್ ಮೂಲೆಗುಂಪು ಮಾಡಿದರೂ ಆಶ್ಚರ್ಯಪಡಬೇಕಾಗಿಲ್ಲ.

ಈತ ನಟಿಸಿದ ಎರಡೇ ಎರಡು ಚಿತ್ರ ಬಿಡುಗಡೆಯಾಗಿದ್ದರೂ ಈಗಾಗಲೇ ಕನ್ನಡ ಚಿತ್ರರಂಗದ ನಿರ್ಮಾಪಕ-ನಿರ್ದೇಶಕರೆಲ್ಲ ರವಿಶಂಕರ್ ಕಾಲ್‌ಶೀಟ್‌ಗಾಗಿ ಓಡಾಡಲಾರಂಭಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕನ್ನಡ ಚಿತ್ರರಂಗದಲ್ಲಿ ಒಬ್ಬ ಸಮರ್ಥ ಖಳನಾಯಕನ ಕೊರತೆ ಎದ್ದು ಕಾಣುತ್ತಿತ್ತು. ಇದಕ್ಕೆ ಎರಡು ಮುಖ್ಯ ಕಾರಣಗಳಿದ್ದವು. ಮೊದಲನೆಯದಾಗಿ ಈಗ ಖಳನಾಯಕನಾಗಿ ಮೆರೆಯಬೇಕು ಎಂಬ ಆಸೆ ಹೊಸ ಜಮಾನದ ಹುಡುಗರಲ್ಲಿ ಇಲ್ಲವೇ ಇಲ್ಲ! ಬಹುಶಃ ನಮ್ಮ ನಿರ್ದೇಶಕರು ನಾಯಕ ಪ್ರಧಾನ ಚಿತ್ರಗಳನ್ನೇ ಮಾಡುತ್ತಿರುವುದು ಮತ್ತು ಅಂತಹ ಚಿತ್ರಗಳಲ್ಲಿ ಖಳನಾಯಕನಿಗೆ ಚಿಕ್ಕಾಸು ಬೆಲೆಯ ಪಾತ್ರವೂ ಇಲ್ಲದಿರುವುದೇ ಇದಕ್ಕೆ ಕಾರಣವಿರಬಹುದು. ಅದರ ಜೊತೆಜೊತೆಗೆ ಒಂದೆರಡು ಚಿತ್ರಗಳಲ್ಲಿ ಖಳನಾಯಕನಾಗಿ ನಟಿಸಿದ ನಟರೇ ಆನಂತರ ನಾಯಕನಾಗಿ ನಟಿಸುವತ್ತ ಗಮನಹರಿಸುವುದು ಕೂಡಾ ಖಳನಾಯಕ ಕಲಾವಿದರ ಕೊರತೆಗೆ ಕಾರಣವಿರಬಹುದು.

ಉದಾಹರಣೆಗೆ ಕಿಶೋರ್ ಅವರನ್ನೇ ತೆಗೆದುಕೊಳ್ಳಿ. ಈತನನ್ನು ನೋಡಿ ಕೊನೆಗೂ ಕನ್ನಡಕ್ಕೊಬ್ಬ ಅಪ್ಪಟ ಕನ್ನಡ ಖಳನಾಯಕನೇ ಸಿಕ್ಕಿದ ಎಂದು ಸಂಭ್ರಮಿಸುವಷ್ಟರಲ್ಲಿ ಕಿಶೋರ್ ಹೀರೋ ಆಗಿಬಿಟ್ಟ. ಆಗ ನಿರ್ಮಾಪಕರು ಖಳನಟನಿಗಾಗಿ ಆಂಧ್ರದತ್ತ ಕಣ್ಣುಹಾಯಿಸಿದಾಗ ಅವರ ಕಣ್ಣಿಗೆ ಬಿದ್ದದ್ದು ಈ ರವಿಶಂಕರ್. ತನಗೆ ಸಿಕ್ಕ ಅವಕಾಶವನ್ನು ಸಮರ್ಥವಾಗಿ ಉಪಯೋಗಿಸಿಕೊಂಡ ರವಿಶಂಕರ್ ಈಗ ಎಲ್ಲಾ ನಾಯಕ ನಟರು ಇಷ್ಟಪಡುವ ಖಳನಾಯಕನಾಗಿ ಬೆಳೆಯುತ್ತಿದ್ದಾರೆ.


ಖಳನಾಯಕನೆಂದರೆ ಆಜಾನುಬಾಹು ಆಗಿರಬೇಕೆಂದೇನೂ ಇಲ್ಲ, ಅದೆಲ್ಲ ಹಳೇ ಕಾಲದ ಕಲ್ಪನೆ. ಹಾಗೇ ನೋಡಿದರೆ ಈ ರವಿಶಂಕರ್ ನಮ್ಮ ಕನ್ನಡದ ಹೀರೋಗಳಿಗಿಂತ ಸುರದ್ರೂಪಿಯಾಗಿದ್ದಾನೆ. ಆದರೆ ಈತ ಖಳನಾಯಕನಾಗಿ ಸ್ಕೋರ್ ಮಾಡಿದ್ದು ತನ್ನ ಅದ್ಭುತವಾದ ಡೈಲಾಗ್ ಡೆಲಿವರಿ ಶೈಲಿ ಮತ್ತು ಮ್ಯಾನರಿಸಂನಿಂದ. ಇನ್ನೊಂದು ವಿಶೇಷವೇನೆಂದರೆ ಈತ ಚಿತ್ರದ ಕನ್ನಡ ಡೈಲಾಗ್‌ಗಳನ್ನು ತೆಲುಗಿನಲ್ಲಿ ಬರೆದುಕೊಂಡು ಅದನ್ನು ಕಂಠಪಾಠ ಮಾಡಿ ತಾನೇ ತನ್ನ ಪಾತ್ರಕ್ಕೆ ಧ್ವನಿ ನೀಡಿರುವುದು. ಈತನಿಗೂ ನಾಯಕನಟನಾಗುವ ಹುಚ್ಚು ತಗುಲದಿದ್ದರೆ ಮುಂಬರುವ ದಿನಗಳಲ್ಲಿ ರವಿಶಂಕರ್ ಖಳನಾಯಕನಾಗಿ ಎಲ್ಲಾ ನಾಯಕನಟರ ಎದುರು ಆರ್ಭಟಿಸುವ ಸಾಧ್ಯತೆಗಳಿವೆ.

ಈತನನ್ನು ನೋಡಿದರೆ ನಮ್ಮ ಕನ್ನಡದ ನಟ ಪ್ರಕಾಶ್ ರೈ ಈಗ ತಮಿಳು ಮತ್ತು ತೆಲುಗು ಚಿತ್ರರಂಗದಲ್ಲಿ ಖಳನಟನಾಗಿರುವುದು ನೆನಪಿಗೆ ಬರುತ್ತಿದೆ. ತನ್ನ ಪಾತ್ರಕ್ಕೆ ತಾನೇ ಕಂಠದಾನ ಮಾಡುತ್ತಾ ಹೊಸ ಮತ್ತು ಹಳೇ ನಾಯಕ ನಟರ ವಿರುದ್ಧ ಖಳನಾಗಿ ಮಿಂಚುತ್ತಿರುವ ಪ್ರಕಾಶ್ ರೈ ಒಬ್ಬ ಹೀರೋಗಿಂತಲೂ ಹೆಚ್ಚು ಜನಪ್ರಿಯತೆಯನ್ನು ಮತ್ತು ಸಂಭಾವನೆಯನ್ನೂ ಪಡೆಯುತ್ತಿದ್ದಾರೆ. ಇದೇ ಚಿತ್ರರಂಗದ ಮಾಯೆ ಎನ್ನಬಹುದು. ಕನ್ನಡ ನಟ ತಮಿಳು-ತೆಲುಗಿನಲ್ಲಿ ಮಿಂಚುತ್ತಿರುವುದು, ತೆಲುಗಿನ ನಟ ಈಗ ಕನ್ನಡದಲ್ಲಿ ಪ್ರಕಾಶಮಾನವಾಗಿ ಬೆಳಗುತ್ತಿರುವುದು....

• ಶೆಣೈ

ಅಮ್ಮ-ಮಗ ಮತ್ತೆ ಬಂದ್ರು!

ಮತ್ತೆ ತಾಯಿ ಮಗ ಒಟ್ಟೊಟ್ಟಿಗೇ ಮುಖಕ್ಕೆ ಬಣ್ಣ ಹಚ್ಚಿದ್ದಾರೆ.



'ಯಾರದು?' ಚಿತ್ರದ ನಂತರ ಒಂದೂವರೆ ವರ್ಷಗಳ ಕಾಲ ಮಂಗಮಾಯವಾಗಿದ್ದ ಹಿರಿಯ ನಟಿ ಲೀಲಾವತಿ ಮತ್ತೊಮ್ಮೆ ತೆರೆಯ ಮೇಲೆ ಕಾಣಿಸಿಕೊಳ್ಳುತ್ತಿದ್ದಾರೆ. ಎಂದಿನಂತೆ ಅವರು ವಿನೋದ್ ರಾಜ್‌ಗೆ ಈ ಬಾರಿಯೂ ತಾಯಿಯಾಗಿದ್ದಾರೆ!


'ಗಲ್ಲ' ಚಿತ್ರದಲ್ಲಿ ಈ ತಾಯಿ ಮಗನ ಜೋಡಿ ತೆರೆಯ ಮೇಲೆ ಇರುವಷ್ಟು ಕಾಲ ಪ್ರೇಕ್ಷಕರನ್ನು ಅಳಿಸಿ ಹೋಗುತ್ತಾರಂತೆ. ರಾಮನಗರದಲ್ಲಿ ನಡೆದ ನೈಜ ಘಟನೆಯೊಂದು ಚಿತ್ರದಲ್ಲಿ ಯಥಾವತ್ತಾಗಿ ಮೂಡಿ ಬರಲಿದೆಯಂತೆ. ಇಬ್ಬರೂ ಸುಮಾರು ಇಪ್ಪತ್ತು ನಿಮಿಷ ಬಂದು ಹೋಗುತ್ತಾರಂತೆ. ಅದು ಅತ್ಯಂತ ಸೆಂಟಿಮೆಂಟ್ ಸನ್ನಿವೇಶವಾಗಿದ್ದು, ಇವರಿಬ್ಬರಿಗಾಗಿ ಒಂದು ಹಾಡನ್ನೂ ಇಟ್ಟಿದ್ದಾರಂತೆ... ಪಾಪ ಪ್ರೇಕ್ಷಕರು ಕಣ್ಣೀರಿಟ್ಟು, ಬಟ್ಟೆ ಒದ್ದೆ ಮಾಡಿಕೊಳ್ಳಲು ಇದಕ್ಕಿಂತ ಒಳ್ಳೆ ಐಡಿಯಾ ತಾನೆ ಯಾವುದಿದೆ?!

'೯೦' ಹೊಡಿಬೇಡಿ!



"ಕುಡಿತ ಆ ಕ್ಷಣಕ್ಕೆ ಮಜಾ ಎನ್ನಿಸಬಹುದು. ಆದರೆ ಅದು ಯಾವಾಗಲೂ ಅಪಾಯ" ಎಂಬುದನ್ನು ಮನವರಿಕೆ ಮಾಡಿಕೊಡುವ ಮಹಾನ್ ಸಂದೇಶವನ್ನು '90' ಎಂಬ ಹೆಸರಿನ ಚಿತ್ರ ನೀಡಲಿದೆಯಂತೆ. ಬಾರ್ ಮುಂದಿನ ಘಟನಾವಳಿಗಳನ್ನು ನೈಜವೆನಿಸುವಂತೆ ಚಿತ್ರೀಕರಿಸಿ, ಕುಡಿತದ ದುಷ್ಪರಿಣಾಮಗಳ ಬಗ್ಗೆ ಬೆಳಕು ಚೆಲ್ಲುವ ಅನೇಕ ಹಾಸ್ಯ ಪ್ರಸಂಗಗಳನ್ನು ಚಿತ್ರದಲ್ಲಿ ಹೆಣೆಯಲಾಗಿದೆಯಂತೆ. '90' ಚಿತ್ರದ ಬಗ್ಗೆ ಇಂತಹ ವಿವರಗಳನ್ನು ನೀಡಿದ್ದು ಅದರ ನಿರ್ದೇಶಕ ಸಾಧು ಕೋಕಿಲಾ. ಹೇಳಿಕೇಳಿ ಸಾಧು ಮಹಾರಾಜ್ ಅವರೇ '90' ಪ್ರಿಯರು. ಅವರಿನ್ನೆಲ್ಲಿ ಜಾಗೃತಿ ಮೂಡಿಸುತ್ತಾರೆ? ಎಂಬ ಪ್ರಶ್ನೆಗೆ ನಮ್ಮಲ್ಲಿ ಉತ್ತರವಿಲ್ಲ.

ಸೀರಿಯಲ್ ನಟಿಯರಿಗೆ ಸೈಕೋ ಕಾಟ



...ತ್ತೀಚೆಗೆ 'ಟೀವಿ ನಟಿಯರನ್ನು ...ತ್ತಿರುವವ'ರ ಬಗ್ಗೆ 'ಲಂಕೇಶ್' ಬರೆದಿತ್ತು. ... ಕಾಲೊಬ್ಬ ಸಿಗುವ ಸ್ತ್ರೀ ಪೀಡಕರಿಂದ ...ಯ ಹುಡುಗಿಯರು ಪ್ರತಿ ದಿನ ಸತ್ತು ...ವಂತಾಗಿದೆ...

...ನೊಬ್ಬ ಅಭಿನವ ಉಪೇಂದ್ರ ಉದ್ಭವಿಸಿದ್ದಾನೆ. ...ಉಪೇಂದ್ರ', 'ಸೂಪರ್‌ಸ್ಟಾರ್' ಮುಂತಾದ ...ಲ್ಲಿ ಉಪೇಂದ್ರ ಬಳಸಿದ್ದ ವಿಕೃತಿಗಳನ್ನೆಲ್ಲಾ ...ಯಲ್ ಲೈಫ್‌ನಲ್ಲೇ ಬಳಸುತ್ತಿದ್ದಾನೆ. ...ನ ಹೆಸರು ಆದಿತ್ಯ. ಚಿತ್ರರಂಗ ...ಕಿರುತೆರೆ ವಲಯದಲ್ಲಿ 'ಐ ...' ಡೈರೆಕ್ಟರ್ ಆದಿ' ಎಂದು ...ಸಿಕೊಂಡು ತಿರುಗಾಡುವ ...ಪೀಲ್ಡೋಟಕ್ಕೆ ಮೋರಿಯಿಂದ ...ಂದು ಗಾಡಿಚಕ್ರಕ್ಕೆ ಸಿಕ್ಕಿ ...ಟ್ಟ ಹೆಗ್ಗಣದಂತಿದ್ದಾನೆ. ಆದರೆ ...ಆಟಾಟೋಪಗಳು ಕಿರುತೆರೆ ...ಕ್ಕಳಿಗೆ ಘೋರವಾಗಿವೆ.

...ನೊಬ್ಬ ಸೈಕೋ!

...ನು ಇಂಜಿನಿಯರಿಂಗ್ ಓದಿದ್ದೀನಿ. ... ಎಂ.ಎ ಪಿಎಚ್‌ಡಿ ಕೂಡಾ ...ದೆ...' ಎಂದು ಹುಚ್ಚುಚ್ಚಾಗಿ ...ಕುವ ಈ ಆದಿತ್ಯ ಮೂಲತಃ ...ರದವನು. ಕಾಲೇಜಿನಲ್ಲಿದ್ದಾಗಲೇ ...' ಮಗಳು ಪ್ರಿಯಾ ಎಂಬಾಕೆಯು ...ದ್ದು, ಸಮಾ ಒದೆ ತಿಂದು ಊರು ...ು.

...ರ ಈತ ಪ್ರತ್ಯಕ್ಷವಾಗಿದ್ದು ...ಗರದಲ್ಲಿ. ಮೊದಲು ಪ್ರಶಾಂತ್ ...ದ ನಿರ್ದೇಶನದ, ಮಯೂರ್ ... ನಟಿಸಿದ್ದ 'ಬಸ್ ಪೈಸ್' ... ಅಸಿಸ್ಟೆಂಟ್ ಆಗಿ ...ದಿದ್ದ. ಆದರೆ ಈತನ ...ಸಗಳನ್ನು ಕಂಡ ಪ್ರಶಾಂತ್ ... ಆರಂಭಿಸುವುದಕ್ಕೆ ... ಈತನನ್ನು ...ಡಿಸಿದ್ದರು. ನಂತರ ಕಿರುತೆರೆಗೆ ...ದ್ದ ಆದಿತ್ಯ ಮುಕ್ತಾಶಯ ಒಂದಷ್ಟು ಧಾರಾವಾಹಿಗಳಲ್ಲಿ ಅಸಿಸ್ಟೆಂಟ್ ಡೈರೆಕ್ಟರಾಗಿ ಕೆಲಸ ಮಾಡಿಕೊಂಡಿದ್ದ.

ಇದೇ ಸಂದರ್ಭದಲ್ಲಿ ಒಂದಷ್ಟು ಸೀರಿಯಲ್ ನಟಿಯರ ಒಡನಾಟಕ್ಕೆ ಬಿದ್ದ ಆದಿ ಅವರೊಟ್ಟಿಗೆ ಸಲುಗೆಯಿಂದ ಮಾತಾಡಿ, ಅದನ್ನೆಲ್ಲ ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು, ಕಡೆಗೆ ಅವರಿಗೇ ಬ್ಲಾಕ್‌ಮೇಲ್ ಮಾಡಿ ದುಡ್ಡು ಕೀಳುವ ಕಾಯಕಕ್ಕಿಳಿದ. ಮಾನ ಮರ್ಯಾದೆಗೆ ಹೆದರಿದ ಧಾರಾವಾಹಿ ನಟಿಯರು ಒಂದಷ್ಟು ದಿನ ಕಾಸು ಕೊಟ್ಟು ನಂತರ 'ಏನು ಮಾಡ್ಕೊತಿಯೋ ಮಾಡ್ಕೊ, ಹೋಗಲೇ' ಎಂದು ಉಗಿದಟ್ಟುತ್ತಿದ್ದರು.

ಇಂಥ ಆದಿತ್ಯ ಇತ್ತೀಚೆಗೆ ದಾವಣಗೆರೆ ಕಡೆಯ ಶರಣರ ಹುಡುಗಿ ಶ್ವೇತಾ (ಹೆಸರು ಬದಲಿಸಿದೆ) ಎಂಬಾಕೆಗೆ ಗಂಟುಬಿದ್ದಿದ್ದಾನೆ. ರಂಗೀಲಾ ಕೆಲಸಗಳಿಗೆ ಖ್ಯಾತರಾಗಿರುವ ಕಿರುತೆರೆ ನಟಿಯರ ಮಧ್ಯೆ ಈಕೆ ಡೀಸೆಂಟು ಹುಡುಗಿ ಎನಿಸಿಕೊಂಡಿದ್ದಾಳೆ. ಈಕೆಯ ಸೋದರ, ಸಂಬಂಧಿಗಳೂ ಸಹ ರಂಗಭೂಮಿಯಲ್ಲಿ ಒಳ್ಳೆ ಹೆಸರು ಮಾಡಿದ್ದಾರೆ.

ತಾನಾಯಿತು, ತನ್ನ ಕೆಲಸವಾಯಿತು ಎಂದಿದ್ದ ಶ್ವೇತಾಳಿಗೆ ಈ ತಿಕ್ಕಲ ಹೇಗಾದರೂ ತಗುಲಿಕೊಂಡನೋ?


ಮೊದಲು 'ನಿನ್ನ ಸರಳತೆ ನಂಗೆ ತುಂಬಾ ಇಷ್ಟ. ಸೀರಿಯಲ್ಲುಗಳಲ್ಲಿ ನಿನ್ನಂಥ ಹುಡುಗೀರು ಸಿಗೋದು ಕಷ್ಟ' ಎಂದು ಅಟ್ಟಕ್ಕೇರಿಸಿದ. ಮೆತ್ತಗೆ ಆಕೆಯ ಸಲುಗೆ ಪಡೆದು, ಅವಳೊಟ್ಟಿಗೆ ಮಾತಾಡುವುದನ್ನೆಲ್ಲಾ ರೆಕಾರ್ಡ್ ಮಾಡಿಕೊಂಡ. ಅಲ್ಲೀತನಕ ಆದಿತ್ಯನ ಅಸಲಿಯತ್ತು ಗೊತ್ತಾಗದ ಹುಡುಗಿಯಿಂದ ಮೆಲ್ಲಗೆ ದುಡ್ಡು ಕೇಳಲು ಶುರುಮಾಡಿದ. ಮೇಲಿಂದ ಮೇಲೆ ಸಾವಿರಾರು ರೂಪಾಯಿ ಹಣ ಕೊಟ್ಟ ಶ್ವೇತಾ ಯಾವಾಗ ಹಣ ಕೊಡಲು ನಿರಾಕರಿಸಿದಳೋ 'ನೀನು ನನ್ನೊಟ್ಟಿಗೆ ಮಾತಾಡಿರುವುದನ್ನೆಲ್ಲ ಸೀಡಿ ಮಾಡಿ ನಿಮ್ಮ ಮನೆಗೆ ಕೊರಿಯರ್ ಕಳಿಸ್ತೀನಿ' ಎಂದು ಬ್ಲಾಕ್ ಮೇಲ್ ಶುರುಹಚ್ಚಿಕೊಂಡ. ಶ್ವೇತಾಳ ಮನೆಗೇ ಫೋನ್ ಮಾಡಿ ಆಕೆಯ ಹೆತ್ತವರ ಬಳಿ ಇಲ್ಲಸಲ್ಲದ್ದನ್ನು ಹೇಳಿದ. ಆಕೆ ಶೂಟಿಂಗ್ ಸ್ಥಳಗಳಿಗೂ ಹಾವಳಿಯಿಡತೊಡಗಿದ. ದಿನಕ್ಕೆ ನೂರಾರು ಮೆಸೇಜುಗಳು ಕಳಿಸಿ ಮಾನಸಿಕವಾಗಿ ಆ ಹುಡುಗಿಯನ್ನು ಜರ್ಝರಿತಳನ್ನಾಗಿಸಿದ.

ಅದೂ ಎಂತೆಂಥ ಮೆಸೇಜುಗಳು ಗೊತ್ತೆ?

'ನಾನು ಈಗ ರೈಲ್ವೇ ಟ್ರ್ಯಾಕ್ ಮೇಲೆ ಮಲಗಿದ್ದೀನಿ, ಇನ್ನೇನು ಟ್ರೈನ್ ಬರೋ ಹೊತ್ತಾಯ್ತು', 'ನನ್ನ ಕೈಲೀಗ ಬ್ಲೇಡಿದೆ, ಇನ್ನು ಅರ್ಧ ಗಂಟೆ ಒಳಗೆ ನೀನು ರಿಪ್ಲೈ ಮಾಡದಿದ್ದರೆ ಮರ್ಮಾಂಗವನ್ನು ಕತ್ತರಿಸಿಕೊಂಡುಬಿಡುತ್ತೇನೆ', 'ಕತ್ತರಿಯಲ್ಲಿ ನಾಲಿಗೆ ಕಟ್ ಮಾಡಿಕೊಂಡುಬಿಟ್ಟಿದ್ದೀನಿ. ನಾಲಗೆ ಕೆಳಗೆ ಬಿದ್ದು, ರಕ್ತ ಚಿಮ್ಮುತ್ತಿದೆ...' ಇಂಥ ಸಾವಿರಾರು ವಿಕೃತ ಹಾಗೂ ವಿಲಕ್ಷಣ ಎಸ್ಸೆಮ್ಮೆಸ್ಸುಗಳನ್ನು ಒತ್ತುವುದು ಆದಿತ್ಯನಿಗೆ ಬಲುಪ್ರಿಯ. ಯಾಕೆಂದರೆ ಆದ ಶುದ್ಧಾನುಶುದ್ಧ ಸೈಕಿಕ್!

ಈತ ಕೊಟ್ಟ ಎಲ್ಲ ಯಾತನೆಗಳನ್ನೂ ಅನುಭವಿಸಿ ಆತ್ಮಹತ್ಯೆಯೊಂದೇ ದಾರಿ ಎಂದು ತೀರ್ಮಾನಿಸಿದ್ದ ಶ್ವೇತಾ ಇನ್ನೂ ಜೀವಂತವಾಗಿ ಉಳಿದಿರುವುದೇ ಪುಣ್ಯ.

ಆದಿತ್ಯನ ಇಂಥ ಹುಚ್ಚಾಟಗಳು ಒಂದಷ್ಟು ಜನ ಪತ್ರಕರ್ತರು ಮತ್ತು ಸಿನಿಮಾ ಮಂದಿಗೆ ಗೊತ್ತಾಗಿ 'ಈತನನ್ನು ಹೀಗೆ ಬಿಟ್ಟರೆ ಈತ ಇನ್ನೆಷ್ಟು ಹೆಣ್ಣುಮಕ್ಕಳ ಬಾಳಿನಲ್ಲಿ ಆಟವಾಡುತ್ತಾನೋ' ಎಂಬ ಕಾರಣಕ್ಕೆ ಉಗಿದು ಬುದ್ಧಿ ಹೇಳಿದರು. ನಿರ್ಮಾಪಕ ಅಣಜಿ ನಾಗರಾಜ್, ಜೋಕಾಲಿ ಸಿನೆಮಾದ ಹೀರೋ ಗೌರಿಶಂಕರ, ಕ್ಯಾಮೆರಾ ವೀನಸ್‌ಮೂರ್ತಿ ಸೇರಿದಂತೆ ಅನೇಕರು ಈತನಿಗೆ ಬುದ್ಧಿವಾದ ಹೇಳಿ ಸರಿಯಾಗಿ ಬದುಕು ಎಂದಿದ್ದರು. ಆದರೆ ಈ ಮೆಂಟಲ್ ಗಿರಾಕಿ ಯಾವುದಕ್ಕೂ ಕ್ಯಾರೇ ಅನ್ನದೇ ಯಥಾಪ್ರಕಾರ ಹುಡುಗಿಯರ ಹಿಂದೆ ಬಿದ್ದು ಅವರಿಗೆ ಕೊಡಬಾರದ ರೋದನೆ ಕೊಡುತ್ತಲೇ ಇದ್ದಾನೆ.



ಅಣಜಿ ನಾಗರಾಜ್

ಇಂಥ ಖ್ಯಾದು ಆದಿತ್ಯ ಯಾವತ್ತಿದ್ದರೂ ಜೈಲು ಸೇರಿ ಮುದ್ದೆ ಮುರಿಯುವುದು ಗ್ಯಾರೆಂಟಿ. ಆದಿತ್ಯನ ಹಾವಳಿಗೆ ಸಿಕ್ಕ ಹೆಣ್ಣುಮಕ್ಕಳು ಹೆದರಿ ಕೂರುವುದನ್ನು ಬಿಟ್ಟು ಇನ್ನಾದರೂ ಎಚ್ಚೆತ್ತುಕೊಳ್ಳಲಿ. ಕನಿಷ್ಠ ಕಿರುತೆರೆ ಅಸೋಸಿಯೇಷನ್ನಿನವರಾದರೂ ಈತನ ಹಾವಳಿಯನ್ನು ಗಂಭೀರವಾಗಿ ಪರಿಗಣಿಸಿ ತಮ್ಮ ಮನೆಯ ಹೆಣ್ಣುಮಕ್ಕಳ ರಕ್ಷಣೆಗೆ ನಿಲ್ಲಲಿ...

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 12/- 13-4-2011 RNI No. KARKAN2005/1

ಪೂಜಾ ಕಣ್ಣಿಗೆ ಸುಣ್ಣ!

ಇತ್ತೀಚೆಗೆ ಕರ್ನಾಟಕದ ಜನತೆ ರಮ್ಯಾ ಮತ್ತು ಪೂಜಾ ಗಾಂಧಿ ಪ್ರಕರಣವನ್ನು ದಿನನಿತ್ಯ ಟಿವಿಯಲ್ಲಿ ಮೆಗಾ ಸೀರಿಯಲ್ ತರಹ ನೋಡಿ ಆನಂದಿಸಿದರು. ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಬಸಂತ್‌ಕುಮಾರ್ ಪಾಟೀಲ್ ಮತ್ತು ಕಲಾವಿದರ ಸಂಘದ ಅಧ್ಯಕ್ಷ ಅಂಬರೀಷ್ ರೂಪಿಸಿದ ಸೂತ್ರದ ಪರಿಣಾಮವಾಗಿ ಆ ವಿವಾದ ಕೊನೆಗೊಂಡಿದ್ದು ನಿಮಗೆಲ್ಲ ಗೊತ್ತೇ ಇದೆ.



ಆದರೆ ಈ ವಿವಾದವನ್ನು ಇತ್ಯರ್ಥ ಮಾಡುವಲ್ಲಿ ಉದ್ಯಮದ ಹಿರಿಯರು ಒಂದು ಕಣ್ಣಿಗೆ ಬೆಣ್ಣೆ ಮತ್ತು ಇನ್ನೊಂದು ಕಣ್ಣಿಗೆ ಸುಣ್ಣ ಹಾಕಿದ್ದಾರೆಂದೇ ಹೇಳಬೇಕು. ಉದಾಹರಣೆಗೆ ನಾಯಕಿ ರಮ್ಯಾಳಿಗೆ ನಿರ್ಮಾಪಕ ಗಣೇಶ್ ನೀಡಬೇಕಿದ್ದ ಬಾಕಿ ಹಣವನ್ನು ಚುಕ್ತಾ ಮಾಡಬೇಕು ಎಂದು ಆದೇಶಿಸಿದರು. ಆದರೆ ಪೂಜಾ ಗಾಂಧಿ ವಿಷಯದಲ್ಲಿ ಬಸಂತ್-ಅಂಬರೀಷ್ ಪಟಾಲಂ ನೀಡಿದ ತೀರ್ಪು ಎಂತಹುದ್ದು?

ಪೂಜಾ ಗಾಂಧಿಗೂ ಹಣ ಕೊಡಿಸುವ ಬದಲು ಆಕೆಗೆ ಆ ಚಿತ್ರದ ಹಂಚಿಕೆಯ ಜವಾಬ್ದಾರಿಯನ್ನು ವಹಿಸಿದರು. ಚಿತ್ರದಿಂದ ಬಂದ ಲಾಭದಲ್ಲಿ ಆಕೆಯ ಹಣವನ್ನು ಚುಕ್ತಾ ಮಾಡಿಕೊಂಡ ನಂತರ ಉಳಿದ ಹೆಚ್ಚುವರಿ ಲಾಭವನ್ನು ಆಕೆ ನಿರ್ಮಾಪಕರಿಗೆ ನೀಡಬೇಕೆಂದು ಆಜ್ಞೆ ಮಾಡಿದ್ದಾರೆ. ಒಂದು ವೇಳೆ ಆ ಚಿತ್ರದ ಹಂಚಿಕೆಯಿಂದ ಯಾವುದೇ ಲಾಭ ಬರದಿದ್ದರೆ ಅದಕ್ಕೆ ಯಾರೂ ಹೊಣೆಗಾರರಾಗುವುದಿಲ್ಲ, ಅಷ್ಟೇ ಅಲ್ಲ, ನಿರ್ಮಾಪಕ ಆಕೆಗೆ ಅನಂತರ ಬಾಕಿ ಹಣವನ್ನು ಕೊಡಬೇಕಾಗಿಲ್ಲ... ಇಂತಹ ಅಪ್ರಬುದ್ಧಗಳೇ ಅವರ ತೀರ್ಪಿನ ಹೈಲೆಟ್‌ಗಳು!

ಅಂದರೆ ಒಬ್ಬ ನಾಯಕಿ ತನಗೆ ಬರಬೇಕಾದ ಸಂಭಾವನೆಯನ್ನು ಪಡೆಯಬೇಕಾದರೆ ಆಕೆ ಆ ಚಿತ್ರದ ಡಬ್ಬಾ ಹಿಡಿದುಕೊಂಡು ಓಡಾಡಬೇಕಾಗಿದೆ. ಇದು ನಿಜಕ್ಕೂ ಶೋಚನೀಯ. ಹೆಣ್ಣಿನ ಬಗ್ಗೆ ಅಭಿಮಾನ ವ್ಯಕ್ತಪಡಿಸುವ ಸಿನಿಮಾದ ಜನರು ಒಂದೆಡೆ ಓರ್ವ ಹೆಣ್ಣಿಗೆ ಮರ್ಯಾದೆಯಾಗಿ ಹಣಬರುವಂತೆ ನೋಡಿಕೊಂಡರೆ, ಮತ್ತೊಂದೆಡೆ ಅಂತಹುದ್ದೇ ನ್ಯಾಯವನ್ನು ಕೇಳಿದ ಮತ್ತೋರ್ವ ಹೆಣ್ಣಿಗೆ ಅನ್ಯಾಯ ಮಾಡಿರುವುದು ಎಷ್ಟು ಸರಿ?

ಅಂದಹಾಗೆ, ಚೇಂಬರ್ ಮತ್ತು ಕಲಾವಿದರ ಸಂಘದ ನಿರ್ಣಯವನ್ನು ಶಿಸ್ತಿನ ಸಿಪಾಯಿಯಂತೆ ಪಾಲಿಸಿದ ಪೂಜಾ ಗಾಂಧಿ 'ನೀ ಇಲ್ಲದೆ' ಚಿತ್ರದ ಹಂಚಿಕೆಯ ಕೆಲಸವನ್ನು ಮಾಡಿದ್ದಾರೆ. ಆ ಚಿತ್ರದಿಂದ ಆಕೆಗೆ ಒಂದೇ ಒಂದು ಪೈಸೆ ಕೂಡಾ ಈವರೆಗೆ ಸಿಕ್ಕಿಲ್ಲ, ಮುಂದೆ ಸಿಗುವುದೂ ಇಲ್ಲ ಎಂಬುದು ಖಚಿತ! ಅಂಬರೀಷ್ ಮತ್ತು ಬಸಂತ್‌ಕುಮಾರ್ ಪಾಟೀಲರಂಥ ಅನುಭವಿಗಳಿದ್ದೂ ಇಂತಹ ಘೋರ ಅನ್ಯಾಯ ನಡೆದಿರುವುದು ನಿಜಕ್ಕೂ ಬೇಸರದ ವಿಷಯ.

ನಮ್ಮ ಪ್ರಶ್ನೆ ಇಷ್ಟೇ; ಒಂದೇ ಥರದ ಎರಡು ಪ್ರಕರಣಗಳಿಗೆ ಎರಡು ವಿಭಿನ್ನ ಪರಿಹಾರ ಸೂತ್ರ ನ್ಯಾಯಸಮ್ಮತವೇ?

ಕೊಬ್ಬರಿ ಸೀಜನ್ ಶುರು!



ಕ್ರೇಜಿ ಸ್ಟಾರ್ ರವಿಚಂದ್ರನ್ ಮತ್ತು ರಮೇಶ್ ಅರವಿಂದ್ ಒಟ್ಟೊಟ್ಟಿಗೇ ನಟಿಸಿರುವ 'ಹ್ಯಾಪಿ ಹಸ್ಬೆಂಡ್', ಮಲಯಾಳಂ ಸೂಪರ್ ಸ್ಟಾರ್ ಮಮ್ಮುಟ್ಟಿ ನಟಿಸಿರುವ 'ಶಿಕಾರಿ', ದೂದ್‌ಪೇಡಾ ದಿಗಂತ್ ಅಭಿನಯದ 'ಜಾಲಿ ಬಾಯ್' ಚಿತ್ರಗಳು ಇನ್ನೇನು ಬಿಡುಗಡೆಗೆ ಸಿದ್ಧವಾಗಿವೆ. ಈ ಮೂರೂ ಚಿತ್ರಗಳ ನಿರ್ಮಾಪಕ ಕೊಬ್ರಿ ಮಂಜು. ಈ ಮೂರು ಸಿನಿಮಾಗಳನ್ನು ತೆರೆಗೆ ತರುವ ಮುನ್ನವೇ ಇನ್ನೂ ನಾಲ್ಕು ಸಿನಿಮಾಗಳನ್ನು ನಿರ್ಮಿಸಲು ಮಂಜು ಪ್ಲಾನ್ ಮಾಡಿದ್ದಾರೆ. ತಮಿಳಿನ 'ಮೈನಾ' ಚಿತ್ರವನ್ನು ಗಣೇಶ್‌ಗಾಗಿ ಕನ್ನಡದಲ್ಲಿ ನಿರ್ಮಿಸುತ್ತಿರುವ ಮಂಜು ಸದ್ಯ 'ಸೂಪರ್' ಎಂಬ ಹಿಟ್ ಸಿನಿಮಾ ಕೊಟ್ಟು ತನ್ನ ರೇಟನ್ನು ಏರಿಸಿಕೊಂಡಿರುವ ಉಪೇಂದ್ರನ ಸಿನಿಮಾವನ್ನು ಕೂಡಾ ಲಿಸ್ಟಿನಲ್ಲಿಟ್ಟುಕೊಂಡಿದ್ದಾರೆ. ಜೊತೆಗೆ ಶಿವರಾಜ್‌ಕುಮಾರ್ ಅವರ ಕಾಲ್‌ಶೀಟ್ ಕೂಡಾ ಮಂಜು ಬಳಿ ಇದೆ.

ಆದರೆ ಈ ಎಲ್ಲ ಚಿತ್ರಗಳ ನಿರ್ದೇಶಕರು ಯಾರು ಎಂಬುದನ್ನು ಮಂಜು ಗೌಪ್ಯವಾಗಿಟ್ಟಿದ್ದಾರೆ. ಇಷ್ಟು ದಿನ ಬಹುತೇಕ ತೋಪು ಚಿತ್ರಗಳನ್ನು ನೀಡಿ 'ಐರನ್ ಲೆಗ್' ಎನಿಸಿಕೊಂಡಿದ್ದ ಮಂಜು ಇನ್ನಾದರೂ ಒಳ್ಳೊಳ್ಳೆ ಸಿನಿಮಾಗಳನ್ನು ನೀಡುವಂತಾಗಲಿ...

ಓಂ-ಶಿವಾಯ ನಮಃ!



ಶಿವರಾಜ್‌ಕುಮಾರ್ ಮತ್ತು ನಿರ್ದೇಶಕ ಓಂ ಪ್ರಕಾಶ್‌ರಾವ್ ನಡುವೆ ಅದೇನೋ ಮನಸ್ತಾಪ ಇದ್ದದ್ದು ಇಡೀ ಉದ್ಯಮಕ್ಕೆ ಗೊತ್ತಿತ್ತು. ಹೀಗಾಗಿ ಈ ಜೋಡಿ ಯಶಸ್ವಿಯಾಗಿದ್ದರೂ ಕಳೆದ ಹಲವಾರು ವರ್ಷಗಳಿಂದ ಜೊತೆಗೂಡಿರಲಿಲ್ಲ. ಇದೀಗ ಇವರ ನಡುವಿನ ಮನಸ್ತಾಪವನ್ನು ನಿರ್ಮಾಪಕ ಶ್ರೀಕಾಂತ್ ಶಮನಗೊಳಿಸಿದ್ದಾರೆಂಬ ಸುದ್ದಿ ಬಂದಿದೆ. ಈ ಶ್ರೀಕಾಂತ್ ಬೇರೆ ಯಾರೂ ಅಲ್ಲ, ಶಿವಣ್ಣನ 99ನೇ ಚಿತ್ರ 'ಮೈಲಾರಿ'ಯನ್ನು ನಿರ್ಮಿಸಿದವರು. ಇವರು ಬರೀ ನಿರ್ಮಾಪಕ ಮಾತ್ರವಲ್ಲ, ಶಿವರಾಜ್‌ಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷರೂ ಹೌದು. ಅಷ್ಟೇ ಅಲ್ಲ, ಈತನಕ ಅವರು ನಿರ್ಮಿಸಿರುವುದು ಶಿವರಾಜ್‌ಕುಮಾರ್ ನಾಯಕನಾಗಿ ನಟಿಸಿದ ಚಿತ್ರಗಳನ್ನು ಮಾತ್ರ.

ಶಿವಣ್ಣ ಮತ್ತು ಓಂ ಪ್ರಕಾಶ್ ನಡುವಿನ ಮನಸ್ತಾಪವನ್ನು ಬಗೆಹರಿಸಿದ ನಂತರ ಸ್ವತಃ ಶ್ರೀಕಾಂತ್ ಇವರಿಬ್ಬರ ಜೋಡಿಯ ಚಿತ್ರವನ್ನು ಪ್ರೇಕ್ಷಕರಿಗೆ ನೀಡುವ ಮನಸ್ಸು ಮಾಡಿದ್ದಾರೆ. ಚಿತ್ರದ ಹೆಸರು 'ಶಿವ'. ಈ ಚಿತ್ರವೂ 'ಮೈಲಾರಿ'ಯ ಮಾದರಿಯಲ್ಲೇ ಶಿವಣ್ಣನ ಅಭಿಮಾನಿಗಳಿಗೆ ಖುಷಿ ನೀಡುವ ಕಥಾವಸ್ತುವನ್ನು ಹೊಂದಿದೆಯಂತೆ.



ಕೆಂಪೇಗೌಡ ಗೆದ್ದಿದ್ದಕ್ಕೆ ಕುಳ್ಳನ ಖುಷಿ

'ಕೆಂಪೇಗೌಡ' ಚಿತ್ರ ಯಶಸ್ವಿಯಾಗಿ ಪ್ರದರ್ಶನ ಕಾಣುತ್ತಿರುವುದರಿಂದ ಅತ್ಯಂತ ಹೆಚ್ಚು ಸಂತೋಷ ಪಡುತ್ತಿರುವವರು ಸುದೀಪ್ ಅಥವಾ ನಿರ್ಮಾಪಕ ಶಂಕರೇಗೌಡ ಅಂತ ನೀವು ಭಾವಿಸಿದರೆ ನಿಮ್ಮ ಊಹೆ ತಪ್ಪು.



'ಕೆಂಪೇಗೌಡ'ನ ಯಶಸ್ಸು ಕಂಡು ಹಿಗ್ಗುತ್ತಿರುವುದು ಕನ್ನಡ ಚಿತ್ರರಂಗದ ಕುಳ್ಳ ದ್ವಾರಕೀಶ್! ಇದಕ್ಕೆ ಕಾರಣ ಇಷ್ಟೇ: 'ಕೆಂಪೇಗೌಡ'ನ ನಂತರ 'ವಿಷ್ಣುವರ್ಧನ್' ಚಿತ್ರ ಬರುತ್ತಿರುವುದು. ಈಗಾಗಲೇ ಈ ಚಿತ್ರದ ಶೇ.70ರಷ್ಟು ಭಾಗ ಮುಕ್ತಾಯಗೊಂಡಿದೆ ಎಂದು ದ್ವಾರಕೀಶ್ ಮತ್ತು ಅವರ ಮಗ ಯೋಗೇಶ್ ಸಂಭ್ರಮದಲ್ಲಿದ್ದಾರೆ.

'ಆಪ್ತಮಿತ್ರ' ಬಾಕ್ಸಾಫೀಸ್‌ನಲ್ಲಿ ಗೆದ್ದು ನಿರ್ಮಾಪಕ ದ್ವಾರಕೀಶ್‌ಗೆ ಕೋಟ್ಯಂತರ ರೂ. ಲಾಭವನ್ನು ತಂದುಕೊಟ್ಟಿತ್ತು. ಈ ಚಿತ್ರದಿಂದ ಬಂದ ಲಾಭದಲ್ಲಿ ಹಳೇ ಸಾಲವನ್ನೆಲ್ಲ ತೀರಿಸಿ ಒಂದು ಭವ್ಯವಾದ ಬಂಗಲೆಯನ್ನು ಕಟ್ಟಿಸಿದ ದ್ವಾರಕೀಶ್ ಚಿತ್ರರಂಗಕ್ಕೆ ಒಂದು ರೀತಿಯಲ್ಲಿ ಅಘೋಷಿತ ವಿದಾಯವನ್ನು ಸಾರಿದ್ದರು. ಈ ವಯಸ್ಸಿನಲ್ಲಿ ಮತ್ತೆ ಚಿತ್ರ ಮಾಡಿ ಕೈ ಸುಟ್ಟುಕೊಳ್ಳುವ ಬದಲು ಸುಮ್ಮನಿರುವುದೇ ಲೇಸು ಎಂದು ದ್ವಾರಕೀಶ್ ಆಪ್ತರಲ್ಲಿ ಹೇಳಿಕೊಳ್ಳುತ್ತಿದ್ದರು.

ಯಾವಾಗ ಅವರ ಒಂದು ಕಾಲದ ದೋಸ್ತ್ 'ಆಪ್ತಮಿತ್ರ' ವಿಷ್ಣುವರ್ಧನ್ ನಿಧನ ಹೊಂದಿದರೋ ಆಗ ಅವರು ಹೊಸ ಚಿತ್ರಕ್ಕೆ ಕೈಹಾಕಿದರು. ಆ ಚಿತ್ರಕ್ಕೆ 'ವಿಷ್ಣುವರ್ಧನ್' ಎಂದು ಹೆಸರಿಟ್ಟು ಲಕ್ಷಾಂತರ ರೂ. ಪುಕ್ಕಟೆ ಪ್ರಚಾರವನ್ನು ಪಡೆದದ್ದಲ್ಲದೆ ಪ್ರೇಕ್ಷಕರು ಆ ಚಿತ್ರದ ಬಗ್ಗೆ ಕುತೂಹಲಗೊಳ್ಳುವಂತೆ ಮಾಡಿದರು. ಇದೀಗ ಸುದೀಪ್ ನಟನೆಯ 'ಕೆಂಪೇಗೌಡ' ಭರ್ಜರಿಯಾಗಿ ನಡೆಯುತ್ತಿರುವುದರಿಂದ 'ವಿಷ್ಣುವರ್ಧನ್' ಚಿತ್ರವೂ ಭರ್ಜರಿಯಾಗಿ ಮಾರಾಟವಾಗಬಹುದು ಎಂಬುದು ದ್ವಾರಕೀಶ್ ಲೆಕ್ಕಾಚಾರ. ಅಂತೂ ಇಂತೂ ಕುಳ್ಳ ಹ್ಯಾಪಿಯಾಗಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Phone
Fax : 26604536, E-mail :lankesh70@rediffmail.com, Printed at Rajhans Enterp